
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

17 ಡಿಸೆಂಬರ್ 2014 ಪುಟ 20 ರೂ. 15/-




ದುಸ್ಥಿತಿಯಲ್ಲಿ ಅಕ್ಕ ನಾಗಮ್ಮ ಗದ್ದುಗೆ



ರೇಪ್ ಜ್ಯೋತಿಷಿ

ಜಾತಿಗಣತಿ ಎಂದರೆ ಜಾತಿವಾದವೇ?

ಕಾರವಾರ ...ಂಗೊಳ್ಳಿಗೆ ...ಂಕಿ ಇಟ್ಟ ...ಡ್ಡಿಗಳು






ಹರಿಹರ ಅಪ್ಪ ಮಳ್ಳ ಮಗ ಸುಳ್ಳ

ಮಂಡ್ಯ ಕಂಬಿ ಎಣಿಸಬೇಕಾದ ವೈದ್ಯರು ಮಿಮ್ಸ್‌ನಲ್ಲಿ

...ಮೋದಿ ಆಳ್ವಿಕೆಯಲ್ಲಿ ಕತ್ತಲ ಯುಗ : ಡಿ.ಎನ್.ಝಾ

ಸತತವಾಗಿ ಹಿಗ್ಗಬೇಕಾದ ಪ್ರಜಾತಂತ್ರ



ಬಹುಶಃ ಹಿಂದೆಯೂ ಒಮ್ಮೆ ಈ ಅಂಕಣದಲ್ಲಿ ಇದರ ಪ್ರಸ್ತಾಪವಾಗಿದೆ. ಆದರೆ ಇಂದು ಸಾಂದರ್ಭಿಕವಾಗಿ ಮತ್ತೊಮ್ಮೆ ಪ್ರಸ್ತಾಪವಾಗುವ ಅಗತ್ಯವಿದೆಯೆನ್ನಿಸಿ ಇದನ್ನು ಕಾಣಿಸಲಾಗುತ್ತಿದೆ. 25 ವರ್ಷಗಳ ಹಿಂದೆ, ಬೆಂಗಳೂರಿನಲ್ಲಿ ಪ್ರತಿಭಟನೆಗಳು ವಿಧಾನಸೌಧದ ಮುಂದೆ, ಹೈಕೋರ್ಟ್‌ನ ಪಕ್ಕ ಕಬ್ಬನ್‌ಪಾರ್ಕ್‌ನಲ್ಲಿ ನಡೆಯುತ್ತಿದ್ದವು. ಅದರಲ್ಲೂ ಸರ್ಕಾರದ ಗಮನ ಸೆಳೆಯಬೇಕೆನ್ನುವ, ರಾಜ್ಯ ಮಟ್ಟದ ಸಮಸ್ಯೆಗಳ ಕುರಿತಾದ ಪ್ರತಿಭಟನೆಗಳಂತೂ ಅಲ್ಲೇ ನಡೆಯುತ್ತಿದ್ದವು. ಅದು ಬಹಳ ಕಾಲ ಅದೇರೀತಿ ಇತ್ತು. ನಂತರ ಅಲ್ಲಿ ಪ್ರತಿಭಟನೆಗಳನ್ನು ನಿಷೇಧಿಸಲಾಯಿತು; ಆ ರೀತಿಯ ಹೋರಾಟ ನಡೆಯುವುದಾದರೆ ಕೆ.ಆರ್.ವೃತ್ತದಲ್ಲಿ ನಡೆಯಬೇಕೆಂದು ಸೂಚಿಸಲಾಯಿತು. 1999-2000 ರವರೆಗೂ ಅದೇ ರೀತಿ ಇತ್ತು.

ಬಡ್ತಿ ಮೀಸಲಾತಿಯ ವಿಚಾರಕ್ಕೆ ಅಹಿಂದ ಮತ್ತು ಅಹಿಂಸಾ ಸರ್ಕಾರೀ ಇಂಜಿನಿಯರುಗಳ ಪ್ರತಿಭಟನೆಯ ಸಂದರ್ಭದಲ್ಲಿ ಇದು ಬದಲಾಯಿತು. ಎರಡೂ ಬಣಗಳು ಎದುರು-ಬದುರು ಚಿಕ್ಕ ಶಾಮಿಯಾನಗಳನ್ನು ಹಾಕಿಸಿಕೊಂಡಿದ್ದರು. ಒಂದು ರಾತ್ರಿ ಒಬ್ಬರು ಇನ್ನೊಬ್ಬರ ಶಾಮಿಯಾನ ಕಿತ್ತರೆಂದೋ, ಇನ್ನಾವ ಕಾರಣವನ್ನು ಮುಂದೆ ಮಾಡಿಕೊಂಡೋ ಕೆ.ಆರ್.ವೃತ್ತದ ಪ್ರತಿಭಟನೆಯನ್ನೂ ನಿಷೇಧಿಸಲಾಯಿತು. ನಂತರ ಮಹಾರಾಣಿ ವೃತ್ತದವರೆಗೆ ಮೆರವಣಿಗೆ ಬಂದು ಎಡಕ್ಕೆ ತಿರುಗಿ ಚಾಲುಕ್ಯ ವೃತ್ತದ ಬಳಿ ಮುಗಿಸಬೇಕೆಂದು ಸೂಚಿಸಲಾಯಿತು. ಪ್ರತಿಭಟನಾಕಾರರನ್ನು ಕೂಡಿ ಹಾಕಲು ಆ ಜಾಗ ಸೂಕ್ತವಾಗಿತ್ತು. ಆ ನಂತರ ಅದೂ ರದ್ದಾಯಿತು. ಈಗ ಬನಪ್ಪ ಪಾರ್ಕ್ ಅಥವಾ ಫ್ರೀಡಂಪಾರ್ಕ್‌ಗೆ ಸೀಮಿತವಾಗಬೇಕಿದೆ. ಇವೆರಡು ಜಾಗಗಳಲ್ಲಿ ಪ್ರತಿಭಟನೆ ನಡೆಸಿದರೆ, ಯಾರಿಗೂ ಕಾಣದೇ ಅರಣ್ಯ ರೋದನದ ರೀತಿ ಕೂಗಾಡಿಕೊಂಡು ಹೋಗಬಹುದು.

ಕಬ್ಬನ್‌ಪಾರ್ಕ್‌ನಿಂದ ಫ್ರೀಡಂ ಪಾರ್ಕ್ ಮತ್ತು ಬನಪ್ಪ ಪಾರ್ಕ್‌ನವರೆಗಿನ ಈ ಪಯಣವು ಪ್ರಜಾತಂತ್ರದ ಹಿಮ್ಮುಖ ಪಯಣವೂ ಆಗಿದೆ. ಅದು ವಿಧಾನಸೌಧದಿಂದ ಎಷ್ಟು ದೂರ ಸರಿದಿದೆ ಎಂಬ ಕಾರಣಕ್ಕೆ ಮಾತ್ರವಲ್ಲ; ಪ್ರತಿಭಟನೆಗೆ ನಿಗದಿಪಡಿಸಿರುವ ಚೌಕಟ್ಟು, ಸಾಂಕೇತಿಕತೆ, ಸುಲಭಕ್ಕೆ ಜನಸಾಮಾನ್ಯರ ಗಮನಕ್ಕೆ ಬಾರದ ರೀತಿಯಲ್ಲಿ ಮಾಡಿರುವುದು ಇತ್ಯಾದಿ ಹಲವು ಕಾರಣಗಳಿಗೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರತಿಭಟನೆ ಮಾಡುವುದು, ಭಿನ್ನಮತವನ್ನು ಪರಿಣಾಮಕಾರಿಯಾಗಿ ದಾಖಲಿಸುವುದು ಪ್ರಜಾತಂತ್ರದಲ್ಲಿ ಸಾಧ್ಯವಿರಬೇಕು ಎಂದಷ್ಟೇ ಹೇಳಿದರೆ ಅದು ಸಾಕಾಗುವುದಿಲ್ಲ, ಇವು ಪ್ರಜಾತಂತ್ರದಲ್ಲಿ ಅತ್ಯಂತ ಅನಿವಾರ್ಯವಾದುದು ಕೂಡ. ಅದರಲ್ಲೂ ಅಸಮಾನ ಸಾಮಾಜಿಕ, ಆರ್ಥಿಕ ಹಾಗೂ ತತ್ಪರಿಣಾಮವಾಗಿ ಅಸಮಾನ ರಾಜಕೀಯ ರಚನೆಗಳಿರುವ ಈ ದೇಶದಲ್ಲಿ ಮತ್ತಷ್ಟು ಅನಿವಾರ್ಯ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ದೇಶದ ಪ್ರಜಾತಂತ್ರ ಒಂದಿಷ್ಟಾದರೂ ಅರ್ಥಪೂರ್ಣವಾಗಲು ಈ ರೀತಿಯ ಅಭಿವ್ಯಕ್ತಿ, ಭಿನ್ನಮತ, ಪ್ರತಿಭಟನೆ, ಚಳವಳಿಗಳು ಅಪಾರವಾದ ಕೊಡುಗೆಯನ್ನು ನೀಡಿವೆ.

ಅದರಾಚೆಗೆ ಪ್ರಜಾತಂತ್ರವು ಮತ್ತಷ್ಟು ಅರ್ಥಹೀನವೆನ್ನಿಸಲು ಮುಖ್ಯವಾಗಿ ಎರಡು ಕಾರಣಗಳಿವೆ. ವಿವಿಧ ರೀತಿಯ ಅಸಮಾನತೆಗಳು ಹಿಂದಿನಗಿಂತಲೂ ಅಪಾರವಾಗಿ ಹೆಚ್ಚಾಗುತ್ತಿರುವುದರಿಂದ, ಅವು ಸಾಮಾಜಿಕ-ಆರ್ಥಿಕ-ರಾಜಕೀಯ ರಚನೆಗಳನ್ನು ತಮ್ಮ ಕಪಿಮುಷ್ಟಿಯೊಳಗೆ ಇಟ್ಟುಕೊಂಡು ಎಲ್ಲರೂ ಸಮಾನವೆನ್ನುವ ಆದರ್ಶವನ್ನು ಅಸಾಧ್ಯವಾಗಿಸುತ್ತಿವೆ. ಭಾರತೀಯ ಸಮಾಜದಲ್ಲಿ ಬೆಳೆಯುತ್ತಿರುವ ಬಲಪಂಥೀಯ ರಾಜಕಾರಣ (ಪ್ರಧಾನವಾಗಿ ಆರೆಸ್ಸೆಸ್-ಬಿಜೆಪಿ ಕೂಟದ ನೇತೃತ್ವದಲ್ಲಿ)ವು ಅಸಮಾನತೆಗೆ ಬೇಕಾದ ಸೈದ್ಧಾಂತಿಕ ತಳಹದಿ ಮತ್ತು ಸಾಮಾಜಿಕ ನೆಲೆಯನ್ನು ಸೃಷ್ಟಿಸುತ್ತಿದೆ ಅಥವಾ ಈಗಾಗಲೇ ನಮ್ಮ ಸಮಾಜದಲ್ಲಿ ಇದ್ದ ತಳಹದಿ ಹಾಗೂ ನೆಲೆಯನ್ನು ಗಟ್ಟಿಗೊಳಿಸುತ್ತಿದೆ. ಇದು ಪ್ರಜಾತಂತ್ರದ ತಳಹದಿ ಹಾಗೂ ನೆಲೆಯನ್ನೇ ದುರ್ಬಲಗೊಳಿಸುತ್ತದೆ.

ಈ ದೇಶದ ಪ್ರಧಾನಿ ಒಂದೊಂದೇ ಕಾನೂನನ್ನು ಕಿತ್ತು ಹಾಕುವ ಮಾತನಾಡುತ್ತಿದ್ದಾರೆ. ಹೌದು, ವಿಪರೀತ ಕಾನೂನುಗಳು ಒಳ್ಳೆಯದೇನೂ ಮಾಡುವುದಿಲ್ಲ, ಪ್ರತಿ ಹೊಸ ಕಾನೂನೂ ಅಪರಾಧಿಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಅದು ಸಾಮಾನ್ಯವಾಗಿ ಬಲಾಢ್ಯರಿಗೆ ಇನ್ನೊಂದಷ್ಟು ದೌರ್ಜನ್ಯವೆಸಗುವ ಅವಕಾಶವನ್ನೂ, ದುರ್ಬಲರಿಗೆ ಅಭದ್ರತೆಯನ್ನೂ ಹೆಚ್ಚಿಸುತ್ತದೆ. ಏಕೆಂದರೆ ಕಾನೂನು ಪರಿಪಾಲಿಸಬೇಕಾದ ಯಂತ್ರಾಂಗವು ಬಲಾಢ್ಯರನ್ನು ಮುಟ್ಟುವ ಮುನ್ನ 10 ಸಾರಿ ಆಲೋಚಿಸುತ್ತದೆ; ತನ್ನ ಅಸ್ತಿತ್ವವನ್ನು ತೋರಲು, 'ಕಾನೂನು ಸುವ್ಯವಸ್ಥೆಯ ಪರಿಪಾಲನೆ ಸರಿಯಾಗಿ ನಡೆಯುತ್ತಿದೆ ಎಂದು ಬಿಂಬಿಸಲು ಮತ್ತು ತನ್ನದೇ ಅಗತ್ಯಗಳಿಗಾಗಿ ದುರ್ಬಲರನ್ನು ಕಾರಣವೇ ಇಲ್ಲದೆಯೂ ದಂಡಿಸುತ್ತದೆ. ನಮ್ಮ ಜೈಲುಗಳಲ್ಲಿ ಬಡವರು, ದಲಿತರು, ಮುಸ್ಲಿಮರು, ಹಳ್ಳಿಗರು ಹೆಚ್ಚಿರಲು ಇದೇ ಕಾರಣವಾಗಿದೆ. ಅಂದರೆ ಕಾನೂನು ಸುವ್ಯವಸ್ಥೆ ಮತ್ತು ನ್ಯಾಯ ವ್ಯವಸ್ಥೆಯ ರಚನೆಯಲ್ಲಿಯೇ ಬಡವರು ಸುಲಭಕ್ಕೆ ಗುರಿಯಾಗುವ ಹಾಗೂ ಉಳ್ಳವರು ಪಾರಾಗಲು ಬೇಕಾದ ನೀತಿ-ನಿಯಮಗಳು ರೂಪುಗೊಂಡಿರುತ್ತವೆ.

ಆದರೆ ಮೋದಿ ಮಾತನಾಡುತ್ತಿರುವುದು ಇದರ ಬಗ್ಗೆಯಲ್ಲ. ಜನರ ಹೋರಾಟ ಹಾಗೂ ಒತ್ತಾಸೆಗಳ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದಿರುವ ರಕ್ಷಣಾತ್ಮಕ ಕಾನೂನುಗಳ (protective legislations) ಕುರಿತು. ಜನಸಾಮಾನ್ಯರ ಪರವಾಗಿರುವ ಕಾನೂನುಗಳನ್ನು ಕಿತ್ತು ಹಾಕುವುದು ಮತ್ತು ಜನ ಹೋರಾಟಗಳ ಮೇಲೆ ನಿಗಾ ಇಡುವುದು ಅವರ ಫ್ಯಾಸಿಸ್ಟ್ ಕಾರ್ಯಸೂಚಿಯ ಮುಂದಿನ ವರ್ಷದ ಪ್ರಧಾನ ಅಂಶಗಳಾಗಲಿವೆ. ಈ ಕುರಿತು ಈಗಾಗಲೇ ಮೋದಿ ಬಹಿರಂಗವಾಗಿ ಮಾತನಾಡಿಯಾಗಿದೆ. ಕಾನೂನು ಖಾತರಿಗೊಳಿಸಬೇಕೆಂಬ ಚರ್ಚೆ ನಡೆಯಿತು. ಅಂತಿಮವಾಗಿ ಅದು ಸೊನ್ನೆಯಿಂದ 14 ವರ್ಷದವರೆಗಿನ ಮಕ್ಕಳಿಗೆ ಎಂದು ನಿರ್ಣಯವಾಯಿತು. ಆದರೆ ಅದು ಮೂಲಭೂತ ಹಕ್ಕಾಗದೇ, ಕೇವಲ ಮಾರ್ಗದರ್ಶಿ ಸೂತ್ರವಾಯಿತು. 1993ರ ಹೊತ್ತಿಗೆ ಸುಪ್ರೀಂಕೋರ್ಟ್‌ನ ಪೀಠ ಉನ್ನಿಕೃಷ್ಣನ್ ವರ್ಸಸ್ ಆಂಧ್ರಪ್ರದೇಶದ ಪ್ರಭುತ್ವ ಮೊಕದ್ದಮೆಯಲ್ಲಿ ಇದನ್ನು ಚರ್ಚೆಗೆ ಕೈಗೆತ್ತಿಕೊಂಡು, ಈ ಕಲಂಅನ್ನು ಮೂಲಭೂತ ಹಕ್ಕೆಂದು ಪರಿಗಣಿಸಬೇಕು ಎಂದು ಹೇಳಿತು. ಅಷ್ಟು ಹೊತ್ತಿಗಾಗಲೇ ವಿಶ್ವಸಂಸ್ಥೆ ಯುನಿಸೆಫ್ ಮತ್ತು ಶಿಕ್ಷಣದ ಕುರಿತಾದ ಜೋಮೆಪಿಯನ್ ಸಮ್ಮೇಳನಗಳು (ಭಾರತ ಸರ್ಕಾರವೂ ಇದಕ್ಕೆ ಸಹಿ ಹಾಕಿದೆ) ಮಕ್ಕಳೆಂದರೆ 18 ವಯಸ್ಸಿನವರೆಗೆ ಎಂದು ಹೇಳಿಯಾಗಿತ್ತು.

ಆದರೆ ಸುಪ್ರೀಂಕೋರ್ಟು ಇದನ್ನು ವಿಸ್ತರಿಸಲಿಲ್ಲ; ನಂತರ ಈ ತೀರ್ಪಿನನ್ವಯ ಸಂವಿಧಾನ ತಿದ್ದುಪಡಿ ಮಾಡಿದ ಸಂಸತ್ತೂ ಇದನ್ನು ವಿಸ್ತರಿಸಲಿಲ್ಲ, ಬದಲಿಗೆ ಕುಗ್ಗಿಸಿದವು. ಸ್ವತಃ ಸುಪ್ರೀಂಕೋರ್ಟ್ ಇದೇ ಮೊಕದ್ದಮೆಯ ತೀರ್ಪಿನಲ್ಲಿ ಉನ್ನತ ಶಿಕ್ಷಣ (18 ವರ್ಷದಿಂದಾಚೆಗೆ)ದ ವಿಚಾರದಲ್ಲಿ ಜನವಿರೋಧಿ ತೀರ್ಪಿತ್ತಿತು. ಎಲ್ಲರಿಗೂ ಸಮಾನವಾಗಿ, ವ್ಯಾಪಾರಕ್ಕೆ ಅವಕಾಶ ಮಾಡಿಕೊಡದೇ ಇರುವ ರೀತಿಯಲ್ಲಿ ಉನ್ನತ ಶಿಕ್ಷಣದ ಸಾಧ್ಯತೆಯನ್ನು ನಿರ್ವಚಿಸುವುದರ ವಿರುದ್ಧವಾಗಿ ಅದರ ತೀರ್ಪಿತ್ತು. ಸಂಸತ್ತು ಇನ್ನೂ ಒಂದು ಹೆಜ್ಜೆ ಹಿಂದಕ್ಕೆ ಹೋಗಿ, ಪ್ರಾಥಮಿಕ ಶಿಕ್ಷಣದಲ್ಲಿ ಸೊನ್ನೆಯಿಂದ 6 ವರ್ಷದೊಳಗಿನ ಮಕ್ಕಳನ್ನು ಹೊರಗಿಟ್ಟಿತು. ಅರೆ ಬರೆ ಕಾಯ್ದೆಯಾದ ಶಿಕ್ಷಣ ಹಕ್ಕು ಕಾಯ್ದೆಯನ್ನು 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಸೀಮಿತಗೊಳಿಸಿತು. ಅದರಲ್ಲೂ ಖಾಸಗಿಯವರಿಗೆ ಅವಕಾಶ ಮಾಡಿಕೊಡಲಾಯಿತು.

ಇದು ಪ್ರಜಾತಂತ್ರದ ಅವಕಾಶಗಳನ್ನು ಹಿಗ್ಗಿಸದ ಮತ್ತು ಹಿಗ್ಗಿಸಲು ಬಲವಾದ ಒತ್ತಡ ಒತ್ತಾಸೆ ಇಲ್ಲದ ಕಾರಣಕ್ಕೆ ಕಿರಿದಾಗಿಸುತ್ತಿರುವುದಕ್ಕೆ ಒಂದು ಉದಾಹರಣೆಯಾಗಿದೆ. ಸಂವಿಧಾನದ ಮುನ್ನುಡಿ ಮತ್ತು ರಾಜ್ಯನಿರ್ದೇಶನ ತತ್ವಗಳಲ್ಲಿ ಅಡಕವಾಗಿರುವ ಸಮಾನ ಅವಕಾಶಗಳು, ಘನತೆಯಿಂದ ಬದುಕುವ ಹಕ್ಕಿನ ಸಂಗತಿಗಳನ್ನು ಪ್ರತೀ ಹೆಜ್ಜೆಯಲ್ಲೂ ನಿಜವಾಗಿಸುವ ಮತ್ತು ಹಿಗ್ಗಿಸುವ ಕೆಲಸ ನಮ್ಮಿಂದಾಗಬೇಕಿದೆ.


ಇಬ್ಬರು 'ಮಾಜಿ ನಕ್ಸಲೀಯ'ರು 'ಪ್ರಜಾತಾಂತ್ರಿಕ ಚಳವಳಿಗಳ ಮುಖ್ಯವಾಹಿನಿ'ಗೆ ಮರಳುವ ಸಂಗತಿ ಕರ್ನಾಟಕದಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲೂ ನಾವು ಪ್ರಜಾತಂತ್ರದ ಸಾಧ್ಯತೆಗಳ ಕುರಿತು ಇನ್ನೂ ವಿಷದವಾಗಿ ಆಲೋಚಿಸಬೇಕಿದೆ. ಬಲಪಂಥೀಯ ಪ್ರಧಾನಿ ಮೋದಿಯನ್ನೊಳಗೊಂಡು, ದೇಶದ ಬಹುತೇಕ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಚಿಂತಕರು ಹೇಳುತ್ತಿರುವ ಮಾತು 'ನಕ್ಸಲಿಸಂ ಒಂದು ಕಾನೂನು-ಸುವ್ಯವಸ್ಥೆಯ ಸಮಸ್ಯೆಯಲ್ಲ; ಇದರ ಬೇರುಗಳು ನಮ್ಮ ಸಾಮಾಜಿಕ-ಆರ್ಥಿಕ ವ್ಯವಸ್ಥೆಯೊಳಗಿದೆ'. 'ಇದಕ್ಕೆ ವ್ಯವಸ್ಥೆಯೊಳಗಿನ ಶೋಷಣೆಯೇ ಕಾರಣ, ನಾನು ಇವತ್ತು ಈ ಜಾಗದಲ್ಲಿರದಿದ್ದರೆ ನಕ್ಸಲೀಯನಾಗಿರುತ್ತಿದ್ದೆ, ಒಂದೊಂದು ಸಾರಿ ಅನ್ನಿಸುತ್ತೆ - ಈ ನಕ್ಸಲೀಯರು ಮಾಡುತ್ತಿರುವುದೇ ಸರಿಯೆಂದು' ಇವೆಲ್ಲಾ ಮಾತುಗಳನ್ನು ಅಧಿಕಾರದ ಉನ್ನತ ಸ್ಥಾನಗಳಲ್ಲಿರುವವರೇ ಆಡಿದ್ದಾರೆ; ಆಡುತ್ತಿದ್ದಾರೆ. ಕರ್ನಾಟಕದ ಪಶ್ಚಿಮಘಟ್ಟದ 'ನಕ್ಸಲ್ ಬಾಧಿತ' ಪ್ರದೇಶಕ್ಕೆ ಭೇಟಿ ಕೊಟ್ಟಿದ್ದ ಇಲಾಖಾ ಕಾರ್ಯದರ್ಶಿ ಸ್ಥಾಯಿಯ ಒಬ್ಬ ಅಧಿಕಾರಿ, ಇಡೀ ಪ್ರದೇಶದ ಪರಿವೀಕ್ಷಣೆ ನಡೆಸಿ ಒಂದು ಮಾತನ್ನು ಹೇಳಿದ್ದರು - 'ಅವರು ಇಲ್ಲಿಗೆ 30 ವರ್ಷ ತಡವಾಗಿ ಬಂದಿದ್ದಾರೆ'.

ಈ ಎಲ್ಲಾ ಮಾತುಗಳಿಗೆ ಕಾರಣವಿದೆ. ನಮ್ಮ ಪ್ರಜಾತಂತ್ರ ಪರಿಪೂರ್ಣ ಪ್ರಜಾತಂತ್ರವಲ್ಲದೆ ಯಾರೂ ನಿರಾಕರಿಸಲಾಗದ ಸತ್ಯವಾಗಿದೆ. ಸಮಾನತೆ, ಭ್ರಾತೃತ್ವಗಳು ನಿಜವಾದ ಅರ್ಥದಲ್ಲಿ ಜಾರಿಯಾಗಿ... ಪ್ರಜಾತಂತ್ರವು ರೂಪಿಸಲ್ಪಟ್ಟಿರುವ ರೀತಿಯಲ್ಲಿ, ಅದ... ಇದ್ದ ಪ್ರಜಾತಂತ್ರಕ್ಕೆ ವಿರುದ್ಧವಾಗಿದ್ದ ಸಾಮಾಜಿಕ ರಚನೆಗಳು ಹಾಗೂ ಮನೋಭಾವಗಳನ್ನು ಬ... ಬದಲಿಸುವ ಪರಿಣಾಮಕಾರಿ ಕ್ರಮಗಳಿಲ್ಲ, ಬದಲಿಸುವ ಕೆಲಸವನ್ನು ಚಳವಳಿಗಳು ಮಾಡಿವೆ. ಇಂದು ಮನವಿ ಸ್ವೀಕರಿಸಲು ಬರುವ ಮಂತ್ರಿಗಳ... ಹೌದೌದು ನೀವು ಪ್ರತಿಭಟನೆ ಮಾಡಬೇಕು, ಇ... ಇದು ಬದಲಾಗುವುದಿಲ್ಲ ಎಂದೇ ಹೇಳುತ್ತಿರುತ್ತಾರೆ... ನೀವು ಮನವಿ, ಬಿನ್ನವತ್ತಳೆ, ಸನ್ಮಾನ, ಸಮಾವೇಶ... ಮಾಡಬೇಕೆಂಬುದು ಅವರ ಇಂಗಿತ. ಅದರಾಚೆಗಿನ... ಪ್ರಜಾತಂತ್ರದಲ್ಲೂ ಇರುವುದಿಲ್ಲ, ಆಗ ಕಾನೂ... ಬರುತ್ತದೆ.

ಇದರ ಬೂಟಾಟಿಕೆ ಏನೆಂದರೆ, ... ಕಾನೂನುಗಳನ್ನು ಗಾಳಿಗೆ ... ಬಲಾಢ್ಯರು-ಬಲಪಂಥೀಯರು-ಅಧಿಕಾರಸ್ಥರು ನಿರಾ... ತಮ್ಮ ಕೆಲಸವನ್ನು ಮುಂದುವರೆಸುತ್ತಿರುತ್ತಾರೆ. ಕಾನೂನು ಪಾಲಕರು ಸೆಲ್ಯೂಟ್ ಮಾಡುತ್ತಾರೆ... ಸಿಟ್ಟನ್ನು ತೋರಿಸಿಕೊಳ್ಳಬಯಸುವ ದುರ್ಬಲರ... ಕಾನೂನು ಸವಾರಿ ಮಾಡುತ್ತದೆ. ಇದರಿಂದೆಲ್ಲಾ ಇಡೀ ಕಾನೂನು ವ್ಯವಸ್ಥೆಯನ್ನು, ಪ್ರಜಾತಂತ್ರವನ್ನು ... ಹೊಸ ಸಮಾಜ ಕಟ್ಟಬೇಕು, ಬುಡಮಟ್ಟ ಬದಲಿಸ... ಹೊರಟವರು ಬಂದೂಕನ್ನೂ ಹಿಡಿದು ನಕ್ಸಲೀಯ... ಆ ಮಾರ್ಗ ತನ್ನ ಘೋಷಿತ ಉದ್ದೇ... ಈಡೇರಿಸಲಾರದು, ಬದಲಿಗೆ ವಿಶಾಲ ತ... ಸಮರಶೀಲ ಪ್ರಜಾತಾಂತ್ರಿಕ ಚಳವಳಿಯ ... ಸಮಾಜವಾದವನ್ನು ತರಬೇಕೆಂದು ಬಯಸಿ... ಹೋರಾಟಗಾರರು ಭೂಗತ ಬದುಕಿನಿಂದ ಹ... ಬರಲು ಒಪ್ಪಿದ್ದಾರೆ.

ಇಂತಹವರನ್ನು ಪ್ರಜಾತಂತ್ರದ ಅಧಿಕಾರಸ್ಥ... ಪ್ರಜಾತಂತ್ರದಲ್ಲಿ ನಂಬಿಕೆಯಿಟ್ಟ ನಾಗರಿಕ ಸಮಾ... ನಡೆಸಿಕೊಳ್ಳಬೇಕು? ಪ್ರಜಾತಂತ್ರದಲ್ಲಿ ನಂಬಿಕೆ... ಇನ್ನಷ್ಟು ಪ್ರಜಾತಾಂತ್ರಿಕವಾಗಿ ನಡೆದುಕೊಳ್ಳಬ... ಅಂತಹದೊಂದು ಪ್ರಯತ್ನವನ್ನು ಶಾಂತಿಗಾಗಿ ... ವೇದಿಕೆ ನಡೆಸಿತು ಮತ್ತು ಅದಕ್ಕೆ ಸರ್ಕಾರವ್ರ... ಮಟ್ಟಿಗೆ ಪೂರಕವಾಗಿ ನಡೆದುಕೊಂಡಿದೆ.

ಆದರೆ, ಪ್ರಜಾಪ್ರಭುತ್ವವನ್ನು ಅರ್ಥಪೂರ್ಣ... ಕ್ರಿಯೆಯಾಗಿ ಇದನ್ನು ನೋಡದಿದ್ದರೆ, ಇದರ ಅರ್ಥ... ಸಾಧ್ಯತೆಗಳನ್ನು ಹಿಗ್ಗಿಸುವ ಒಂದು ಅವಕಾಶವನ್ನಾ... ಬಳಸಿಕೊಳ್ಳದಿದ್ದರೆ ಸಮಸ್ಯೆಯಾಗುತ್ತದೆ. ಆಗ ... ಹೋದವರನ್ನು ಮರಳಿ ತರುವ, ಕಾನೂನಿನ ... ಒಳಪಡಿಸುವ' ಪ್ರಕ್ರಿಯೆಯಾಗಿ ಇದು ಕಳೆದುಹೋ... ಈ ಕುರಿತು ನಾವೆಲ್ಲರೂ ಆತ್ಮಾವ... ಮಾಡಿಕೊಳ್ಳಬೇಕಿದೆ. ಮೇಲೆ ಈಗಾಗಲೇ ... ನಾವು ಪ್ರಜಾತಂತ್ರದ ಅರ್ಥವ್ಯಾಪ್ತಿಗಳು ಕು... ಸಂದರ್ಭದಲ್ಲಿದ್ದೇವೆ. ಈ ವ್ಯವಸ್ಥೆಯ ಕುರಿತು ಮ... ಪ್ರಶ್ನೆಗಳನ್ನೆತ್ತಿದ ಇಬ್ಬರು ಚಳವಳಿಗಾರರನ್ನು, ಪ್ರ... ಚಳವಳಿಗಳ ಮುಖ್ಯವಾಹಿನಿಯೊಳಗೆ ನ... ಹೃತ್ಪೂರ್ವಕವಾಗಿ ಬರಮಾಡಿಕೊಳ್ಳೋಣ. ಅ... 'ಬಯಸುವ ಸಮಾಜವಾದ, ನಿಜವಾದ ಪ್ರಜಾಪ್ರಭುತ್ವವನ್ನು ಸಾಧ್ಯವಾಗಿಸುವಲ್ಲಿ ಇನ್ನೊಂ... ಹೆಜ್ಜೆಯಾಗುತ್ತದೆ.




ಕಿತ್ತು ಹಾಕುವುದನ್ನು ವಿದೇಶಗಳ ಭಾರೀ ವೇದಿಕೆಗಳಲ್ಲಿ ಹೇಳಿದ್ದರೆ, ಜನರ ಮೇಲೆ ಗುಪ್ತಚರ ಇಲಾಖೆಯ ನಿಗಾ ಹೆಚ್ಚಿಸುವ ಕುರಿತು 3 ದಿನಗಳ ಕೆಳಗೆ ಮಾತನಾಡಿದ್ದಾರೆ.

ಅಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ವಿದ್ಯಮಾನ ಹಲವು ರೀತಿಗಳಲ್ಲಿ ವ್ಯವಸ್ಥಿತವಾಗಿ ಮುಂದಿನ ದಿನಗಳಲ್ಲಿ ಬಿಚ್ಚಿಕೊಳ್ಳಲಿದೆ. ಎಲ್ಲಿ ಬಗೆಯ ಭಿನ್ನಮತವನ್ನು ಸುಮ್ಮನೇ ವೈಭವೀಕರಿಸಬೇಕಿಲ್ಲ. ಆದರೆ ಭಿನ್ನ ಬಗೆಯ ಭಿನ್ನಮತಗಳಿಗೂ ಅವಕಾಶವಿರಬೇಕಿದೆ. ಕಿಸ್ ಆಫ್ ಲವ್ ಪ್ರತಿಭಟನೆಯ ರೀತಿಯ ಕುರಿತು ಅದರ ಆಯೋಜಕರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅದು ಕೇವಲ ಗಂಡು-ಹೆಣ್ಣು ಬಹಿರಂಗವಾಗಿ ಚುಂಬಿಸುವ ಕಾರ್ಯಕ್ರಮವಲ್ಲ, ಅದೂ ಸೇರಿದಂತೆ ವಿವಿಧ ರೀತಿಗಳಲ್ಲಿ ನೈತಿಕ ಪೊಲೀಸ್‌ಗಿರಿಗೆ ತೋರಿಸಬಯಸುವ ಪ್ರತಿಭಟನೆ ಆದಾಗಿತ್ತು. ಆದರೂ ಆ ಪ್ರತಿಭಟನೆಯ ಸ್ವರೂಪದ ಬಗ್ಗೆ ನಮಗೆ ತಕರಾರುಗಳಿರಬಹುದು. ಆದರೆ ನೈತಿಕ ಪೊಲೀಸ್‌ಗಿರಿಯ ಕುರಿತು ದೊಡ್ಡ ಗಂಟಲಲ್ಲಿ ಮಾತನಾಡುವುದು ಬಹಳ ಮುಖ್ಯವಾದುದಾಗಿದೆ. ಅದನ್ನು ಮಾಡದೇ, ಕೇವಲ ಪ್ರತಿಭಟನೆಯ ಸ್ವರೂಪದ ಕುರಿತು ಮಾತ್ರ ತಕರಾರುಗಳನ್ನೆತ್ತುವುದು ಯಾರಿಗೆ ಲಾಭ ಮಾಡಿಕೊಡುತ್ತದೆ. ಈ ಪ್ರಶ್ನೆ ಏಕೆಂದರೆ, ಕಿಸ್ ಆಫ್ ಲವ್ ಒಂದು ಅತಿರೇಕದ ಪ್ರತಿಭಟನೆಯ ರೂಪವೆಂದೂ, ಅದನ್ನು ಮಾಡುವುದರಿಂದ ನೈತಿಕ ಪೊಲೀಸರಿಗೇ ಅನುಕೂಲವಾಗುತ್ತದೆಂದೂ ಹೇಳುವ ಒಂದು ವಾದವಿದೆ. ಜನರು, ಗಂಡು-ಹೆಣ್ಣು ಹೇಗಿರಬೇಕು, ಹೇಗಿರಬಾರದು ಎಂಬುದರ ಕುರಿತು ಅಪ್ರಜಾತಾಂತ್ರಿಕವಾದ ಸಂಪ್ರದಾಯವಾದೀ ನಿಲುವುಗಳನ್ನು ಹೇರುವ ಆಷಾಢಭೂತಿ ಅನೈತಿಕ ಪೊಲೀಸರ ನೈತಿಕ ಪೊಲೀಸ್‌ಗಿರಿಯ ಕುರಿತು ಮೌನವಾಗಿರುವುದು ಯಾರಿಗೆ ಸಹಾಯ ಮಾಡುತ್ತದೆ?

ಇದಕ್ಕಿಂತ ಭಿನ್ನವಾದ ಇನ್ನೂ ಕೆಲವು ಉದಾಹರಣೆಗಳಿಂದಲೂ ನಾವು ಪ್ರಜಾತಂತ್ರದ ಸಾಧ್ಯತೆಗಳ ಕುರಿತು ಚರ್ಚಿಸಬಹುದು. 1948ರ ಹೊತ್ತಿಗೆ ಸಂವಿಧಾನ ರಚನಾ ಸಭೆಯಲ್ಲಿ ಯಾವ ವಯಸ್ಸಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಸರ್ಕಾರ

ಟ ಆಡುತ್ತಲೇ ಹೊರಟುಹೋದ ಫಿಲ್ ಹ್ಯೂಸ್





• ಗೌರಿ ಲಂಕೇಶ್
editorlankesh@gmail.com

ಯುವ ಕ್ರಿಕೆಟಿಗ ಫಿಲ್ ಹ್ಯೂಸ್‌ನ ಸಾವು ಆದ್ಯಾಕೋ ಷ್ಟು ಕಾಡುತ್ತಿದೆ. ನಿನ್ನೆ ನಮ್ಮ ಶಿವಸುಂದರ್ ರಿನಿಂದ ಬೆಂಗಳೂರಿಗೆ ಬರುತ್ತಿದ್ದಾಗ ಮಂಡ್ಯ ಹತ್ತಿರದ ದ್ರೋ ಹಳ್ಳಿಯ ಹುಡುಗರು 'ಫಿಲ್ ಹ್ಯೂಸ್‌ಗೆ ರ್ಪಾರ್ಣ ಶ್ರದ್ಧಾಂಜಲಿ' ಎಂದು ಫ್ಲೆಕ್ಸ್ ಹಾಕಿಸಿದ್ದರ ಹೇಳಿದರು. ಕೊಲ್ಕತ್ತಾದಲ್ಲಿ ಎರಡು ತಂಡಗಳು ಆಟ ಪ್ರಾರಂಭಿಸುವ ಮುನ್ನ ಫಿಲ್ ನೆನಪಲ್ಲಿ ನ್ನು ಆಚರಿಸಿದ್ದು ವರದಿಯಾಗಿತ್ತು. ಹಾಗೆಯೇ ಯಲ್ಲೂ ಹಲವು ಮಕ್ಕಳು ಮೋಂಬತ್ತಿ ಹತ್ತಿಸಿ ನ್ನು ನೆನಪಿಸಿಕೊಂಡಿದ್ದಾರೆ. ಇನ್ನು ಫಿಲ್‌ನ ಆಸ್ಟ್ರೇಲಿಯಾ ಂತೂ ಇಡಿಯಾಗಿ ಫಿಲ್‌ನ ಅಕಾಲಿಕ ಸಾವಿಗೆ ಿದೆ. ನಿನ್ನೆ (ಬುಧವಾರ) ಆತನ ಅಂತ್ಯಕ್ರಿಯೆಯನ್ನು ಶದ ಎಲ್ಲಾ ಟಿವಿ ಚಾನೆಲ್‌ಗಳು -ತಮ್ಮ ಇತರೆ ಕಾರ್ಯಕ್ರಮಗಳನ್ನು ರದ್ದು ಮಾಡಿ- ನೇರ ಪ್ರಸಾರ ದೆ.



ಫಿಲ್ ಹ್ಯೂಸ್ ಬಾಲಕನಾಗಿದ್ದಾಗ

ೇಶ, ಭಾಷೆ, ಪ್ರಾಂತ್ಯ... ಇತ್ಯಾದಿ 'ಗಡಿ'ಗಳನ್ನೂ ಯಾಕೆ ಫಿಲ್ ಸಾವು ಇಷ್ಟೊಂದು ಜನರನ್ನು ೆ? ಆಟವಾಡುವಾಗ ಆಕಸ್ಮಿಕವಾಗಿ ಆತ ್ಟಿದ್ದರಿಂದಾಗಿಯೇ? ಹತ್ತಾರು ದೇಶಗಳಲ್ಲಿ ಕ್ರಿಕೆಟ್ ಬಗ್ಗೆ ತುಂಬಾ ಕ್ರೇಜ್ ಇರುವುದರಿಂದಾಗಿಯೇ? ಇನ್ನೂ 25 ವರ್ಷ ವಯಸ್ಸಿನ ಯುವಕ ಎಂದೇ? ಪ್ರತಿಭಾವಂತ ಆಟಗಾರನಾಗಿದ್ದಕ್ಕಾಗಿಯೇ?

ಕೆಟ್ ಬಗ್ಗೆ ನನಗೆ ಸ್ವಲ್ಪ 'ಅಲರ್ಜಿ' ಇರುವುದರಿಂದ



ಚೆಂಡು ಸಿಡಿದಾಗ....

ಸು ಹತ್ತ ಫಿಲ್ ಬಗ್ಗೆ ಕೇಳಿಯೇ ಇರಲಿಲ್ಲ. ಸೀನ್ ಅಬಾಟ್ ಎಂಬ ಬೌಲರ್ ಬೌನ್ಸರ್ 80 ಕಿಲೋಮಿಟರ್ ವೇಗದಲ್ಲಿ ಕುತ್ತಿಗೆಗೆ ಬಡಿದು ಆತ ಮೈದಾನದಲ್ಲೇ ್ ಹೋದಾಗ, ಆತ ಚೇತರಿಸಿಕೊಳ್ಳಲಿ ಒಂದು ದೇಶ ಆಶಿಸುತ್ತಿದ್ದುದರ ಬಗೆಗಿನ ನ್ನು ಓದಿದಾಗ ಫಿಲ್ ಬಗ್ಗೆ ಸಲಗೊಂಡೆ. ಆತ ಅಪ್ಪಟ ಹಳ್ಳಿಗ, ರೈತ, ಣಿಕ ಮತ್ತು ಅಪಾರ ಶ್ರದ್ಧೆ ಹೊಂದಿದ್ದ ವಂತ ಆಟಗಾರ ಎಂದು ಗೊತ್ತಾಗಿ ೊಂಡೆ.

ಲ್ ಆಸ್ಟ್ರೇಲಿಯಾದ ಮ್ಯಾಕ್ಸ್‌ವಿಲ್ಲೆ ಎಂಬ ಹಳ್ಳಿಯವನು. ಅಲ್ಲಿ ಅವನ ತಂದೆ ಟ ಹೊಂದಿದ್ದಾರೆ. ಅಮ್ಮ ಗೃಹಿಣಿ.

ಚಿಕ್ಕವನಾಗಿದ್ದಾಗಲೇ ಫಿಲ್ ಫುಟ್‌ಬಾಲ್ ಮತ್ತು ಕ್ರಿಕೆಟ್ ಕ್ರೀಡೆಗಳಿಗೆ ಆಕರ್ಷಿತನಾದ. ಕೊನೆಗೆ ಆಯ್ಕೆ ಮಾಡಿಕೊಂಡಿದ್ದು ಕ್ರಿಕೆಟ್ ಆಟವನ್ನೇ. ಮ್ಯಾಕ್ಸ್‌ವಿಲ್ಲೆ ಎಷ್ಟು ಚಿಕ್ಕ ಊರೆಂದರೆ ಅದರ ಜನಸಂಖ್ಯೆ 2,500. ಆತ ಬೆಳೆಯುತ್ತಿದ್ದಾಗ ಆ ಹಳ್ಳಿಯಲ್ಲಿ ಕ್ರಿಕೆಟ್ ಕೋಚಿಂಗ್ ಎಂಬುದೆಲ್ಲ ಇರಲಿಲ್ಲ. ಆದ್ದರಿಂದ ಫಿಲ್ ಸಾಂಪ್ರದಾಯಿಕವಲ್ಲದ ಆದರೆ ತನ್ನದೇ ಆದ ಆಟದ ಶೈಲಿಯನ್ನು ರೂಢಿಸಿಕೊಂಡ. ಹಲವರು ಹೇಳಿರುವ ಪ್ರಕಾರ "ಆತನ ಶೈಲಿ 'ರೈತಾಪಿಯ ಕೃಷಿ'ಯಂತಿತ್ತು", "ಟೆನ್ನಿಸ್ ರ್‍ಯಾಕೆಟ್ ಹಿಡಿದು ಗಾಲ್ಫ್ ಆಡುವಂತೆ ಫಿಲ್ ಕ್ರಿಕೆಟ್ ಆಡುತ್ತಿದ್ದ."

ಬಾಲಕ ಫಿಲ್ ಎಷ್ಟು ಅದ್ಭುತವಾಗಿ ಕ್ರಿಕೆಟ್ ಆಡಲಾರಂಭಿಸಿದ್ದನೆಂದರೆ ಮ್ಯಾಕ್ಸ್‌ವಿಲ್ಲೆನಲ್ಲಿರುವ ಕ್ರಿಕೆಟ್ ಕ್ಲಬ್ ತನ್ನ ಬಳಿ ಇದ್ದ ಬೌಲಿಂಗ್ ಮೆಷಿನ್‌ಅನ್ನು ಫಿಲ್ ಮನೆಗೇ ಸಾಗಿಸಿತ್ತು. ಹೈಸ್ಕೂಲಿಗೆ ಬರುವ ಹೊತ್ತಿಗೆ ಫಿಲ್ ಲೋಕಲ್ ಮ್ಯಾಚುಗಳಲ್ಲಿ ಗಮನ ಸೆಳೆದಿದ್ದ. ಫಿಲ್ ಜೂನಿಯರ್ ಲೀಗ್‌ನಲ್ಲಿ ಒಂದು ಸಾವಿರ ರನ್‌ಗಳನ್ನು ದಾಟಿದಾಗ ಸ್ಥಳೀಯ ಪತ್ರಿಕೆಯೊಂದು 'ವಾಚ್ ಔಟ್ ಬ್ರ್ಯಾಡ್‌ಮನ್!' ಎಂಬ ತಲೆಬರಹದಡಿ ವರದಿ ಪ್ರಕಟಿಸಿತ್ತು. ಅವನಿಗೆ ಹದಿನೇಳು ವರ್ಷ ತುಂಬಿದಾಗ ಮೊದಲ ಬಾರಿಗೆ ತನ್ನ ಹಳ್ಳಿ ತೊರೆದು ಸಿಡ್ನಿಗೆ ಬಂದು ಅಲ್ಲಿನ ಖ್ಯಾತ ಕ್ಲಬ್ ಪರವಾಗಿ ಆಡಲಾರಂಭಿಸಿದ. ತನ್ನ ವಿಶಿಷ್ಟ ಶೈಲಿ ಮತ್ತು ಗ್ರಾಮೀಣ ಪ್ರದೇಶದ ಸರಳತೆಯಿಂದಾಗಿ ಎಲ್ಲರಿಗೂ ಅಚ್ಚುಮೆಚ್ಚಿನ ಯುವಕನಾದ. ಆಸ್ಟ್ರೇಲಿಯಾದ ಕ್ರಿಕೆಟ್ ತಂಡದ ಕ್ಯಾಪ್ಟನ್ ಮೈಕೆಲ್ ಕ್ಲಾರ್ಕ್ "ಮೂಲಭೂತವಾಗಿ ಫಿಲ್ ಪ್ರಾಮಾಣಿಕ ಮೌಲ್ಯಗಳನ್ನು, ವೃತ್ತಿ ನೈತಿಕತೆಯನ್ನು ಹೊಂದಿದ್ದ ಸರಳ ಸ್ವಭಾವದ ಹಳ್ಳಿಗ. ಅಪಾರ ನಿಷ್ಠೆ ಸದಾ ಆಶಾವಾದ, ಮುಕ್ತ ಹೃದಯ, ಚೇಷ್ಟೆ ಮಾಡುವ ಹಾಸ್ಯ ಪ್ರವೃತ್ತಿ ಜೀವನೋತ್ಸಾಹ... ಇವು ಅವನ ವ್ಯಕ್ತಿತ್ವದ ಮುಖ್ಯ ಲಕ್ಷಣಗಳಾಗಿದ್ದವು" ಎಂದು ಹೇಳಿದ್ದಾರೆ.

2009ರಲ್ಲಿ ಫಿಲ್ ಆಸ್ಟ್ರೇಲಿಯಾದ ಅಂತಾರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ. ಆಗ ಆತನ ವಯಸ್ಸು ಕೇವಲ 20. ಆಫ್ರಿಕಾ ವಿರುದ್ಧ ಡರ್ಬನ್‌ನಲ್ಲಿ ನಡೆದ ಟೆಸ್ಟ್ ಮ್ಯಾಚ್‌ನ ಎರಡೂ ಇನ್ನಿಂಗ್ಸ್‌ಗಳಲ್ಲಿ ಫಿಲ್ ಶತಕಗಳನ್ನು ಬಾರಿಸುವ ಮೂಲಕ ಅಂತಹ ಸಾಧನೆ ಗೈದ ಅತಿಚಿಕ್ಕ ವಯಸ್ಸಿನ ಆಟಗಾರ ಎಂಬ ದಾಖಲೆ ನಿರ್ಮಿಸಿದ. ಈ ಯಶಸ್ಸನ್ನು ಫಿಲ್ ಸಂಭ್ರಮಿಸಿದ್ದಕ್ಕಿಂತಲೂ ಹೆಚ್ಚಾಗಿ ಸಂತೋಷಗೊಂಡಿದ್ದು ಆತನ ಮ್ಯಾಕ್ಸ್‌ವಿಲ್ಲೆ ಹಳ್ಳಿಯ ಜನರು.

ಆತನ ಕ್ರಿಕೆಟ್ ವೃತ್ತಿ ಭರ್ಜರಿಯಾಗಿ ಆರಂಭಗೊಂಡಿದ್ದರೂ ಆನಂತರ ಹಲವು ಏರುಪೇರುಗಳನ್ನು ಕಂಡಿತು. ಆತ ಫಾರ್ಮ್‌ನಲ್ಲಿ ಇಲ್ಲದಿದ್ದಾಗ ಹಲವು ಬಾರಿ ಅವನನ್ನು ಆಸ್ಟ್ರೇಲಿಯಾ ತಂಡದಿಂದ ಕೈಬಿಡಲಾಗಿತ್ತು. ಹಾಗಾದಾಗ ಆತ ಎಂದೂ ಬೇಸರಗೊಳ್ಳುತ್ತಿರಲಿಲ್ಲ. ಕ್ಲಾರ್ಕ್ ಹೇಳಿರುವಂತೆ "ಆಯ್ಕೆ ಸಮಿತಿಯವರು 'ಫಿಲ್ ಸರಿಯಾಗಿ ಆಡುತ್ತಿಲ್ಲ' ಎಂದು ವಾದಿಸಿದಾಗ ಫಿಲ್ ಅದನ್ನು ಪ್ರತಿಭಟಿಸುತ್ತಿರಲಿಲ್ಲ. ಬದಲಾಗಿ 'ಹೌದು. ನಾನು ಇನ್ನೂ ಹೆಚ್ಚಿನ ಶ್ರಮ ಹಾಕಬೇಕಿದೆ' ಎಂದಷ್ಟೇ ಹೇಳಿ ಸುಮ್ಮನಾಗುತ್ತಿದ್ದ. ಅವನ ಸ್ವಭಾವ ಹೇಗಿತ್ತೆಂದರೆ 'ಪಾಪ, ಬೇರೆಯವರಿಗೆ ಕಷ್ಟ ಕೊಟ್ಟೆ' ಎಂಬ ಮುಜುಗರವನ್ನು ಅನುಭವಿಸುತ್ತಿದ್ದ. ಮಾತ್ರವಲ್ಲ, ಒಂದಿಷ್ಟೂ ಬೇಜಾರು ಮಾಡಿಕೊಳ್ಳದೆ 12ನೇ ಸದಸ್ಯನಾಗಿ ತಂಡದ ಇತರರಿಗೆ ಪಾನೀಯಗಳನ್ನು ತರುತ್ತಾ ನೆರವಾಗುತ್ತಿದ್ದ."

ಕ್ರಿಕೆಟ್ ಅನ್ನು ಅಪಾರವಾಗಿ ಪ್ರೀತಿಸುತ್ತಿದ್ದ, ತನ್ನ ದೇಶಕ್ಕಾಗಿ ಚೆನ್ನಾಗಿ ಆಡಬೇಕೆಂದು ಪ್ರತಿಬಾರಿ ಶ್ರಮಿಸುತ್ತಿದ್ದ ಫಿಲ್‌ಗೆ 25 ವರ್ಷ ವಯಸ್ಸಾಗುವ ಮುನ್ನವೇ ಫಸ್ಟ್ ಕ್ಲಾಸ್ ಕ್ರಿಕೆಟ್‌ನಲ್ಲಿ 26 ಸೆಂಚುರಿಗಳನ್ನು ಬಾರಿಸಿದ್ದ. ಚಿಕ್ಕ ವಯಸ್ಸಿನಲ್ಲೇ ಅಂತರರಾಷ್ಟ್ರೀಯ ಗಮನ ಸೆಳೆದ ಫಿಲ್ ಮುಂಬೈ ಕಿಂಗ್ಸ್ ತಂಡಕ್ಕೂ ಆಯ್ಕೆಯಾಗಿ ಐಪಿಎಲ್ ಮ್ಯಾಚ್‌ಗಳಲ್ಲೂ ಭಾಗವಹಿಸಿದ್ದ.

ಮ್ಯಾಕ್ಸ್‌ವಿಲ್ಲೆ ಎಂಬ ಪುಟ್ಟ ಹಳ್ಳಿಯ ಹೈದನಾಗಿದ್ದ ಫಿಲ್ ಅದೆಷ್ಟೇ ಎತ್ತರಕ್ಕೆ ಬೆಳೆದರೂ ತನ್ನ ರೈತಾಪಿ ಬದುಕಿನಿಂದ ದೂರ ಹೋಗಿರಲಿಲ್ಲ. ಬದಲಾಗಿ ಅವನಿಗೆ ಕ್ರಿಕೆಟ್‌ನಷ್ಟೇ ಪ್ರಿಯವಾಗಿದ್ದದ್ದು ಆತ ತನ್ನ ತೋಟದಲ್ಲಿ ಸಾಕುತ್ತಿದ್ದ ಬ್ಲಾಕ್ ಅಗ್ನಸ್ ಎಂಬ ತಳಿಯ ದನಗಳು. ಅವನ ಈ ಹವ್ಯಾಸದ ಬಗ್ಗೆ ಕ್ಲಾರ್ಕ್ ಹೀಗೆ ಹೇಳಿದ್ದಾರೆ: "ಫಿಲ್ ಸದಾ ತನ್ನ ದನಗಳ ಬಗ್ಗೆ ಮಾತನಾಡುತ್ತಿದ್ದ. ದನಗಳ ಬಗ್ಗೆ ಅವನಿಗೆ ಗೊತ್ತಿಲ್ಲದಿದ್ದದ್ದೇ ಇರಲಿಲ್ಲ. ಬ್ಲಾಕ್ ಅಗ್ನಸ್ ತಳಿಯ ಬಗ್ಗೆ ಆತ ವರ್ಲ್ಡ್ ಚಾಂಪಿಯನ್ ಆಗಿದ್ದ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ಅವನು ತನ್ನ ದನಗಳನ್ನು ಅದೆಷ್ಟು ಪ್ರೀತಿಸುತ್ತಿದ್ದನೆಂದರೆ ನಾನೂ ನನ್ನ ತೋಟದಲ್ಲಿ ದನಗಳನ್ನು ಸಾಕಬೇಕೆಂದು ನನ್ನನ್ನು ಒತ್ತಾಯಿಸುತ್ತಿದ್ದ."


ಇಂತಹ ಫಿಲ್ ಕಳೆದ ವಾರ ಸಿಡ್ನಿಯಲ್ಲಿ ಕ್ರಿಕೆಟ್ ಆಡುತ್ತಿದ್ದಾಗ ಅಬ್ಬಾಟ್ ಎಂಬಾತ ಎಸೆದ ಬೌನ್ಸರ್ ಆತನ ಕುತ್ತಿಗೆಗೆ ಬಡಿಯಿತು. ಬಾಲಿನ ರಭಸಕ್ಕೆ ಕುತ್ತಿಗೆಯಲ್ಲಿನ ರಕ್ತನಾಳವೇ ಒಡೆದು ಫಿಲ್ ಮಿದುಳಿಗೆ ರಕ್ತ ಹರಿಯಿತು. ವೈದ್ಯರ ಪ್ರಕಾರ ಅದೆಷ್ಟು ರಕ್ತ ಹರಿದಿತ್ತೆಂದರೆ ಅದು ಮಿದುಳಿನ ಮೇಲೆ ಒತ್ತಡ ತಂದಿತ್ತು. ಆ ಒತ್ತಡವನ್ನು ತಡೆಯಲು ವೈದ್ಯರು ಫಿಲ್‌ನ ಬುರುಡೆಯ ಒಂದಷ್ಟು ಭಾಗವನ್ನೇ ತೆಗೆಯಬೇಕಾಯಿತು. ಆದರೆ ವೈದ್ಯರು ಅದೆಷ್ಟೇ ಪ್ರಯತ್ನಿಸಿದರೂ ಫಿಲ್ ಎಂಬ ಯುವಕನ ಪ್ರಾಣವನ್ನು ಉಳಿಸಲಾಗಲಿಲ್ಲ.

ಫಿಲ್ ಒಬ್ಬ ಅಪ್ಪಟ ಗ್ರಾಮೀಣ ಯುವಕ. ಗ್ರಾಮೀಣ ಜನರ ಸರಳತೆ, ಪ್ರಾಮಾಣಿಕತೆ, ಮೌಲ್ಯ ಮತ್ತು ನೈತಿಕತೆಯನ್ನು ಮೈಗೂಡಿಸಿಕೊಂಡೇ ತನ್ನ ಪ್ರತಿಭೆಯಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಶಸ್ಸು ಪಡೆದವನು. ಕ್ರಿಕೆಟ್ ಬಗ್ಗೆ ಅಪಾರ ಶ್ರದ್ಧೆ ಹೊಂದಿದ್ದರೂ ಬದುಕಿನಲ್ಲಿನ ಏರಿಳಿತಗಳನ್ನು ತನ್ನ ಹಾಸ್ಯ ದೃಷ್ಟಿಕೋನದಿಂದಲೇ ನೋಡುತ್ತಿದ್ದ ಆಶಾವಾದಿ. ಇಂತಹ ಫಿಲ್ ತಾನು ಪ್ರೀತಿಸುವ ಕ್ರಿಕೆಟ್‌ಅನ್ನು ಆಟವಾಡುವಾಗಲೇ ಯಾರೂ ನಿರೀಕ್ಷಿಸದೆ ಇದ್ದ ಅಪಘಾತದಿಂದಾಗಿ ಅಕಾಲಿಕ ಮರಣವನ್ನು ಹೊಂದಿದ್ದು ಎಲ್ಲರ ಹೃದಯದಲ್ಲಿ ದುಃಖವನ್ನು ತುಂಬಿದ್ದು ಸಹಜ ಎನಿಸುತ್ತದೆ.

ಸದಾ ಚೇಷ್ಟೆ ಮಾಡುತ್ತಿದ್ದ, ತಮ್ಮ ಹಳ್ಳಿಗೆ ಖ್ಯಾತಿ ತಂದುಕೊಟ್ಟಿದ್ದ ಫಿಲ್‌ನನ್ನು ಮ್ಯಾಕ್ಸ್‌ವಿಲ್ಲೆಯ ಜನರು ಕರೆಯುತ್ತಿದ್ದದ್ದು 'ಬೂಫ್' (ಬಫೂನ್ ಪದದ ಭಾಗ) ಎಂದು. ನಿನ್ನೆ ಮ್ಯಾಕ್ಸ್‌ವಿಲ್ಲೆ ಜನ ಫಿಲ್‌ಗಾಗಿ ಕಣ್ಣೀರಿಟ್ಟರು, ಜೊತೆಗೆ ಚಪ್ಪಾಳೆ ತಟ್ಟುವ ಮೂಲಕ ಆತನ ಬದುಕನ್ನೂ ಸಂಭ್ರಮಿಸಿದರು. ಅದು ಫಿಲ್‌ನ ವ್ಯಕ್ತಿತ್ವಕ್ಕೆ ಮತ್ತು ಸಾಧನೆಗೆ ಸೂಕ್ತ ಶ್ರದ್ಧಾಂಜಲಿಯಾಗಿತ್ತು ಎಂದು ಅನ್ನಿಸುವುದಿಲ್ಲವೇ... •




ಅಂತ್ಯಕ್ರಿಯೆಗೆ ಸೇರಿದ್ದ ಜನಸ್ತೋಮ



'ಸಹೋದರ' ಫಿಲ್‌ಗೆ ಕ್ಯಾಪ್ಟನ್ ಕ್ಲಾರ್ಕ್ ಅವರಿಂದ ಪ್ರೀತಿಯ ನಮನ

ಕಾರವಾರ: ಚೋರ ಆರ್.ಪಿ. ನಾಯ್ಕನ ಚಾಂಡಾಲ ಚರಿತ್ರೆ!!


ಆರ್.ಪಿ. ನಾಯ್ಕ್

ಉತ್ತರ ಕನ್ನಡದ ಜಿಲ್ಲಾ ನಗರಾಭಿವೃದ್ಧಿ ಕೋಶದ ಕಚೇರಿಯಲ್ಲೊಂದು ಭರ್ಜರಿ ಹೆಗ್ಗಣ ಬಿಲ ಕೊರೆದು ಹಾಯಾಗಿ ಬೀಡುಬಿಟ್ಟಿದೆ! ಐಎಎಸ್ ಬೆಕ್ಕುಗಳನ್ನೇ ಬೆಚ್ಚಿ ಬೀಳಿಸಿ ಎದುರು ಕಂಡದ್ದೆಲ್ಲ ಕ್ಷಣಾರ್ಧದಲ್ಲಿ ಮುಕ್ಕಿ ಈ ಜುಜುಬಿ ಡಿಪ್ಲೋಮಾದ ಹೆಗ್ಗಣ ಸ್ವಚ್ಛಂದವಾಗಿ ಲಗಾಟಿ ಹೊಡೆಯುತ್ತಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶವೆಂದರೆ, ಸುಮ್ಮನೆ ಮಾತಲ್ಲ; ವರ್ಷಂಪ್ರತಿ ಪಟ್ಟಣ-ಪುರ-ನಗರದ ಅಭಿವೃದ್ಧಿಗೆಂದು ಬರುವ ನೂರಾರು ಕೋಟಿ ರೂ. ಕಾಮಗಾರಿ ಉಸ್ತುವಾರಿ ಈ ನಗರಾಭಿವೃದ್ಧಿ ಕೋಶದ್ದು. ಇಂಥ ಪ್ರೊಗದಸ್ತಾದ ಅಭಿವೃದ್ಧಿ ಕೋಶದ ಕಾರ್ಯಪಾಲ ಅಭಿಯಂತರಿಕೆ ಹುಟ್ಟಾ ಕಳ್ಳಸುಳ್ಳನ ಕೈಗೆ ಸಿಕ್ಕರೆ ಆ ಸರ್ಕಾರಿ ಏಜೆನ್ಸಿ ಪರಿಸ್ಥಿತಿ ಅದೇನಾಗಬೇಡ?!

ಕಾರವಾರದ ನಗರಾಭಿವೃದ್ಧಿ ಕೋಶಕ್ಕೆ ಯಾವಾಗ ಆರ್.ಪಿ. ನಾಯ್ಕ್ ಪರ್ಸೆಂಟೇಜ್ ಪರಾಕ್ರಮಿ ಎಣ್ಣ ಎಂದು ವಕ್ಕರಿಸಿದನೋ, ಆ ಗಳಿಗೆಯಲ್ಲೇ ಅದು ದೊಡ್ಡ ಲೇವಾದೇವಿ ಅಡ್ಡೆಯಂತಾಗಿ ಹೋಯ್ತು! ನಾಚಿಕೆ-ಮರ್ಯಾದೆಯೆಲ್ಲ ಬಿಟ್ಟು ಕಮಿಷನ್ ಅಂಗಡಿ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿ ಶುರು ಹಚ್ಚಿಕೊಂಡು ಕುಂತಿರುವ ಈ ಗೋಲ್‌ಮಾಲ್ ಭೂಪ ತನ್ನ ಪಾಲು ಬರದೇ ಯಾವ ಕಾಮಗಾರಿಗೂ ಮೋಕ್ಷ ತೋರಿಸಲಾರ. ಆತನಿಗೆ ನಗರಾಡಳಿತದ ಮುಖ್ಯಸ್ಥರು- ಕಂಟ್ರಾಕ್ಟರರು ಐದು ಪರ್ಸೆಂಟೇಜ್ ಕಣ್ಮುಚ್ಚಿ ಬಿಸಾಕಲೇಬೇಕು! ಆಗಾತ ಎಂಥ ಕಳಪೆ ಜನಪೀಡಕ ಕಾಮಗಾರಿಗಾದರೂ ಅಭಿವೃದ್ಧಿ ಕೋಶದ ಪರವಾನಗಿ ಕರುಣಿಸುತ್ತಾನೆ. ಒಂದು ಕಾಲದಲ್ಲಿ ಹೊನ್ನಾವರ ಮುನ್ಸಿಪಾಲಿಟಿಯಲ್ಲಿ ರೂ. 20 ದಿನಗೂಲಿಯಾಗಿ ಒಪ್ಪತ್ತು ಗಂಜಿಗೂ ತತ್ವಾರ ಪಡುತ್ತಿದ್ದ ಆರ್.ಪಿ. ನಾಯ್ಕ ಇವತ್ತು ಹತ್ತಾರು ಕೋಟಿಗೆ ತೂಗುತ್ತಾನೆ.

ಆರ್.ಪಿ. ನಾಯ್ಕ್ ಅದ್ಯಾವ ಪರಿ' ಪ್ರಳಯಾಂತಕವಾಗಿ ಅವತರಿಸಿದ್ದಾನೆಂದರೆ, ನಗರಾಭಿವೃದ್ಧಿ ಕೋಶದ ಒಂದು ಕಾಮಗಾರಿ ಫೈಲೂ ಆತನ ಒಪ್ಪಿಗೆಯಿಲ್ಲದೆ ತೆರೆದುಕೊಳ್ಳುವುದೇ ಇಲ್ಲ! ನಗರಾಭಿವೃದ್ಧಿ ಕೋಶದ ನಿರ್ದೇಶಕನಿಂದ ಐಎಎಸ್ ಜಿಲ್ಲಾಧಿಕಾರಿ ತನಕ, ನಗರಾಡಳಿತದ ಮುಖ್ಯಾಧಿಕಾರಿ- ಕಮಿಷನರ್‌ನಿಂದ ಗುತ್ತಿಗೆದಾರರೆಲ್ಲರೂ ಈ ಭ್ರಷ್ಟನ ಬೆರಳ ಇಶಾರೆಯಂತೆಯೇ ನಾಜೂಕಾಗಿ ಹೆಜ್ಜೆ ಇಡಬೇಕಾಗಿದೆ. ಇಲ್ಲದಿದ್ದರೆ ಜಿಲ್ಲಾ ಉಸ್ತುವಾರಿ ಮಂತ್ರಿ ದೇಶಪಾಂಡೆ ಮನೆಯಂಗಳದಿಂದ ಬೆಂಗಳೂರಿನ ಪೌರಾಡಳಿತ- ನಗರಾಭಿವೃದ್ಧಿ ಇಲಾಖೆಯ ಐಎಎಸ್ ಪ್ರಭೃತಿಗಳ ಆ್ಯಂಟಿ ಚೇಂಬರ್‌ತನಕ ಬೆಳೆಸಿಕೊಂಡಿರುವ ಕಾಲಾ ಫೈಸಾ, ಒಳಗೆಜ್ಜೆ ಬಲದಿಂದ ಸತಾಯಿಸಿ ಸುಸ್ತಾಗಿಸಿಬಿಡುತ್ತಾನೆ. ಎಲ್ಲಿಗೇ ವರ್ಗವಾದರೂ ತಿಂಗಳೊಪ್ಪತ್ತಲ್ಲೇ ಕಾರವಾರಕ್ಕೆ ಅಪ್ಪಳಿಸುವ ಈ ಧೂಮಕೇತು ಮಹಿಮೆಗೆ ಕಳ್ಳ ಕಾಸಿನಷ್ಟೇ ಕಸುವು ಆತ ಆಫೀಸಲ್ಲಿ ನೇಮಿಸಿಕೊಂಡಿರುವ ಲಲನಾಮಣಿಗಳ 'ಕಾಲ್ಗುಣ'ವೂ ಕೊಟ್ಟಿದೆ ಎಂದು ಹೇಳುವವರೂ ಇದ್ದಾರೆ.

ಕಾರವಾರದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ ಶುರುವಾಗಿದ್ದು 17.06.2003ರಲ್ಲಿ. ಆರ್.ಪಿ. ನಾಯ್ಕ್ ಅಡ್ಡದಾರಿಯಿಂದ ಇಲ್ಲಿಗೆ ಬರೀ ಮೂರೇ ತಿಂಗಳಲ್ಲಿ ಸಹಾಯಕ ಕಾರ್ಯಪಾಲ ಇಂಜಿನಿಯರ್ ಆಗಿ ಬಂದಿದ್ದಾನೆ. ತಾಂತ್ರಿಕ ಜ್ಞಾನವೇ ಸರಿಯಾಗಿಲ್ಲದಿದ್ದರೂ ಈ ಇಂಜಿನಿಯರ್ ಬೋಗಸ್ ದಾಖಲೆ ಸೃಷ್ಟಿಸಿ ಸುಳ್ಳು ಬಿಲ್ ಮಾಡಿ ಅಥವಾ ಕಳಪೆ ಕಾಮಗಾರಿ ಮಾಡಿಸಿ ಸ್ವಾಹಾ ಮಾಡುವುದರಲ್ಲಿ ಮಾತ್ರ ಪರಿಣತ. ಜಿಲ್ಲೆಯ ಹನ್ನೊಂದು ನಗರಾಡಳಿತ ಸಂಸ್ಥೆಗಳಿಗೆ ಸರಿಸುಮಾರು 100 ರಿಂದ 150 ಕೋಟಿ ಪ್ರತಿವರ್ಷ ಕಾಮಗಾರಿಗೆಂದೇ ಅನುದಾನ ಬರುತ್ತದೆ. ಇದೆಲ್ಲ ಸ್ಥಳೀಯಾಡಳಿತದ ಮುಖ್ಯಸ್ಥರು- ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರು ಆರ್.ಪಿ. ನಾಯ್ಕ್‌ನ ಮನದಿಚ್ಛೆಯಂತೆಯೇ ನಿರ್ವಹಿಸಬೇಕು. ಜತೆಗೆ ಶೇ.5 ಕಾಣಿಕೆ. ಆರ್.ಪಿ. ಹುಂಡಿಗೆ ಭಯ-ಭಕ್ತಿಯಿಂದ ಹಾಕಲೇಬೇಕು. 18.09.2003ರಲ್ಲಿ ಕಾರವಾರದ ಜಿಲ್ಲಾ ಅಭಿವೃದ್ಧಿ ಕೋಶದ ಆಯಕಟ್ಟಿನ ಕಾಮಗಾರಿ ವಿಭಾಗದ ಇಂಜಿನಿಯರ್ ಆಗಿ 'ಸೇವೆ' ಆರಂಭಿಸಿರುವ ಆರ್.ಪಿ. ಇವತ್ತಿಗೂ ಆ ಪೀಠದಲ್ಲಿ ಅಬಾಧಿತವಾಗಿ ಮುಂದುವರಿದಿದ್ದಾನೆ; ವರ್ಗವಾದಂತೆಲ್ಲ ರದ್ದುಪಡಿಸಿಕೊಂಡು ಮಂತ್ರಿ-ಶಾಸಕ-ಜಿಲ್ಲಾಧಿಕಾರಿಗಳಿಗೇ ಸೆಡ್ಡು ಹೊಡೆದಿದ್ದಾನೆ.

2009-10ರ ಸಮಯದಲ್ಲಿ ಕೃಷ್ಣಯ್ಯ ಎಂಬ ಖಡಕ್ ಜಿಲ್ಲಾಧಿಕಾರಿ ಆರ್.ಪಿ. ನಾಯ್ಕನ ಕರ್ಮಕಾಂಡವನ್ನು ರೆಡ್‌ಹ್ಯಾಂಡಾಗಿ ಹಿಡಿದು ಶಿಸ್ತು ಕ್ರಮಕ್ಕೆ ಪೌರಾಡಳಿತ ಇಲಾಖೆಗೆ ಪತ್ರವೂ ಬರೆದಿದ್ದರು. 2008-09 ರಲ್ಲಿ ಕುಮಟಾ ಪುರಸಭೆ ವ್ಯಾಪ್ತಿಯ 'ಚಿತ್ರಗಿ ಶೇಷಾದ್ರಿಪುರಕ್ಕೆ ಹೋಗುವ ರಸ್ತೆಯಿಂದ ವಕ್ಕನಳ್ಳಿಗೆ ಸಂಪರ್ಕ ರಸ್ತೆ' ಕಾಮಗಾರಿ ಈಗಿನ ಶಾಸಕಿ ಶಾರದಾ ಶೆಟ್ಟಿಯ ಕುಲದೀಪಕ ರವಿಕುಮಾರ್ ಶೆಟ್ಟಿಯ ಕೆ.ವಿ. ಶೆಟ್ಟಿ ಕಂಪನಿ ನಿರ್ವಹಿಸಿತ್ತು. ಇದರಲ್ಲಿ 1.2 ಲಕ್ಷ ಹೆಚ್ಚುವರಿ ಬಿಲ್ ತಯಾರಿಸಿ ಆರ್.ಪಿ. ನಾಯ್ಕ್ ಪಾಲು ಹೊಡೆದಿದ್ದ. ಇದು ಅಪ್ಪಟ ಕಳಪೆ ಕಾಮಗಾರಿ ಎಂದು ಜನ ಅಂದು ಭುಗಿಲೆದ್ದಿದ್ದರು. ಜಿಲ್ಲಾಧಿಕಾರಿಗಳು ಆಕ್ಷೇಪ ಎತ್ತಿದ್ದರು. ಆದರೆ ಇದ್ಯಾವುದನ್ನು ಕೇರ್ ಮಾಡದ ಆರ್.ಪಿ. ನಾಯ್ಕ್ ತನ್ನಪ್ಪನ ಮನೆ ಆಸ್ತಿ ಎಂಬಂತೆ ಕುಮಟಾ ಪುರಸಭೆಯ ರೂ. 1,20,477 ಬೋಗಸ್ ಬಿಲ್ ತಯಾರಿಸಿ ಗುತ್ತಿಗೆದಾರನಿಗೆ ಕೊಟ್ಟಿದ್ದ. ಪುರಸಭೆಗಾದ ನಷ್ಟ ಆರ್.ಪಿ.ಗೆ ಲಾಭವಾಗಿ ಪರಿಣಮಿಸಿತ್ತು.

ಬೋಗಸ್ 'ಬಿಲ್ ವಿದ್ಯಾ' ಪಾರಂಗತನಾದ ಆರ್.ಪಿ. ಬೇನಾಮಿ ಕಂಟ್ರಾಕ್ಟರನೂ ಹೌದು. ಕಾಗದ-ಕಡತದಲ್ಲಷ್ಟೇ ಮುನ್ಸಿಪಾಲ್ಟಿ ಅಧಿಕಾರಿ-ಇಂಜಿನಿಯರ್‌ಗಳಿಂದ ಕಾಮಗಾರಿ ಮಾಡಿಸಿ ಹಣ ಹೊಡೆಯುವ ಕಲೆ ಆರ್.ಪಿ.ಗೆ ಕರಗತವಾಗಿ ಹೋಗಿದೆ. ನಗರಾಡಳಿತದ ಅಧಿಕಾರಿಗಳಿಗೆ ಬ್ಲ್ಯಾಕ್‌ಮೇಲ್ ಮಾಡಿಯೋ, ಪಾಲು ಕೊಟ್ಟು ಋಣಭಾರದಲ್ಲಿ ಕೆಡವಿಯೋ ಚೋರ ಕಾರ್ಯಾಚರಣೆ ನಡೆಸುವ ಆರ್.ಪಿ. 2009-10ರಲ್ಲಿ ಭಟ್ಕಳ ನಗರಸಭೆ ವ್ಯಾಪ್ತಿಯಲ್ಲಿ ಗಟಾರದಲ್ಲಿ ಬಾಯಿ ಹಾಕಿ ತಿಂದಿದ್ದಾನೆ. ಭಟ್ಕಳದ 27 ವಾರ್ಡ್‌ಗಳಲ್ಲಿನ ಗಟಾರದ ಹೂಳೆತ್ತುವ ಕಾಮಗಾರಿ ಮಾಡಿಸಬೇಕಾಗಿದ್ದು ಪೌರಕಾರ್ಮಿಕರಿಂದ. ಆ ಕೆಲಸಕ್ಕೆ ಬೇಕಾದ ಪೌರಕಾರ್ಮಿಕರ ಕೊರತೆಯೇನೂ ಇರಲಿಲ್ಲ.


24 ಪೌರಕಾರ್ಮಿಕರಿಗೆ 2,500 ರೂ.ನಂತೆ ಪ್ರತಿ ತಿಂಗಳು ಕೊಟ್ಟರೂ 60,000 ರೂ.ನಲ್ಲಿ ಕೆಲಸ ಅಚ್ಚುಕಟ್ಟಾಗಿ ಮುಗಿಯುತ್ತಿತ್ತು. ನಗರಸಭೆಯ ಮತ್ತು ಪೌರಾಡಳಿತ ಇಲಾಖೆಯ ಹಲವು ನಿಯಮದಂತೆ ಹೀಗೆ ಪೌರಕಾರ್ಮಿಕರಿಂದ ಕೆಲಸ ಮಾಡಿಸುವ ದರ್ದು ಇತ್ತು. ಆದರೆ ಆರ್.ಪಿ. ನಾಯ್ಕ ನಗರಸಭೆಯ ಅಧಿಕಾರಿಗಳಿಗೆ ಬೆದರಿಸಿ ಅಡ್ಡದಾರಿಗಿಳಿಸಿದ್ದಾನೆ. ಪ್ರತಿ ತಿಂಗಳಿಗೆ 1.30 ಲಕ್ಷದ ಕಾಮಗಾರಿ ಅಂದಾಜು ಪಟ್ಟಿ ತಯಾರಿಸಿ ಮಾರ್ಗದರ್ಶನ ನೀಡಿದ್ದಾನೆ. 12 ತಿಂಗಳಿಗೆ 12 ಪ್ರತ್ಯೇಕ ರೂ. 1.30 ಲಕ್ಷದ ಅಂದಾಜು ಪಟ್ಟಿ ತಯಾರಿಸಿ ತುಂಡುಗುತ್ತಿಗೆ ಕೊಡಿಸಿದ್ದಾನೆ ಈ ಪೀಸ್‌ವರ್ಕ್ ಪಿತಾಮಹ! ಈ ದೋಖಾ ದಂಧೆಯಲ್ಲಿ ಬರೋಬ್ಬರಿ 12,98,639 ರೂ. ಮೊತ್ತ ಅನಾಮತ್ತಾಗಿ ಕಿಸೆಗಿಳಿಸಿಕೊಂಡಿದ್ದಾ... ಪಾತಕವನ್ನೆಲ್ಲ ನಗರಸಭೆ ಅಧಿಕಾರಿಗಳ ಹೆಗಲಿಗೇ... ತಪ್ಪಿಸಿಕೊಂಡಿದ್ದಾನೆ. ಪ್ರತಿ ತಿಂಗಳು 60 ಸಾವಿರದ... ಕೆಲಸ ಹೆಚ್ಚುವರಿ 70 ಸಾವಿರ ಕಬಳಿಸಿ ನ... ನಿವ್ವಳ ಹಾನಿ ಮಾಡಿದ್ದಾನೆ. ಆರ್.ಪಿ. ನಾಯ್ಕನ ಅಭಿ... ಕಾರ್ಯವೈಖರಿ ಸ್ಯಾಂಪಲ್ ಅಂದ್ರೆ ಇದು!!


ಕೇವಲ ಎರಡು ಸ್ಯಾಂಪಲ್ ಅಷ್ಟೇ... ಬರೆಯಲಾಗಿದೆ. ಜಿಲ್ಲೆಯ 11 ನಗರಾಡಳಿತದ... ಬಾರಾಭಾನ್ಗಡಿ ಆರ್.ಪಿ. ಪ್ರತ್ಯಕ್ಷ ಪರೋಕ್ಷವಾಗಿ... ಮೋಕಳೀಕ್ ಆಗಿದ್ದಾನೆ. ಸಾರ್ವಜನಿಕರು ಈತನ ... ಬಗ್ಗೆ ದಂಡಿಯಾಗಿ ಜಿಲ್ಲಾಧಿಕಾರಿ-ಪೌರಾಡಳಿತ ಇಲಾ... ದೂರಿದ್ದೂ ಇದೆ. ಈ ಕಂಪ್ಲೇಂಟುಗಳ ಒತ್ತಡ ತಡೆಯ... 2009ರ ಜೂನ್‌ನಲ್ಲಿ ಅಂದಿನ ಜಿಲ್ಲಾಧಿಕಾರಿ ... ಆರ್.ಪಿ. ನಾಯ್ಕನನ್ನು ಕಾರವಾರದಿಂದ ವರ್ಗ... ಸಾರ್ವಜನಿಕರ-ಆಡಳಿತದ ಹಿತ ಕಾಪಾಡಬೇ... ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಿ... ಬರೆದಿದ್ದರು. ಪಾಪದ ಹಣವನ್ನು ನಗರಾಭಿವೃದ್ಧಿ ಇ... ಆಯಕಟ್ಟಿನ ಸೀಟುಗಳಲ್ಲಿ ಸುರಿವ ಪಾಪಿ ... ಕಾರವಾರದಲ್ಲೇ ಗೂಟ ಗಟ್ಟಿಯಾಗಿ ಜಡಿದು... ಕೂತಿದ್ದಾನೆ. ದೇಶಪಾಂಡೆಗೂ ಆರ್.ಪಿ. ಭ... ಹಾಕಿದ್ದಾನೆ. 2013 ಉಡುಪಿಗೆ ವರ್ಗಾ ಮಾಡಿದ ... ದೇಶಪಾಂಡೆಯೇ ಮುತುವರ್ಜಿ ವಹಿಸಿ ಕಾರವಾ... ಉಳಿಸಿಕೊಂಡಿದ್ದಾನೆ.

ಅಕ್ರಮ-ಅನ್ಯಾಯ-ಅವಾಂತರಗಳೇ ಜಿಲ್ಲಾ ... ಕೋಶದ ಸಹಾಯಕ ಕಾರ್ಯಪಾಲ ಇಂಜಿ... ಸಾಹೇಬರ ಆದ್ಯ ಕರ್ತವ್ಯ ಎಂಬಂತೆ ಹಾರಾ... ಆರ್.ಪಿ. ನಾಯ್ಕ್ ಜಿಲ್ಲಾಡಳಿತಕ್ಕೂ ತನ್ನ 'ಡ್ಯೂಟಿ... ಪ್ರಶಸ್ತ ಎಂದು ದಾರಿ ತಪ್ಪಿಸಿರುವುದು ತಮಾಷೆ... ಕಳೆದ ಗಣ ರಾಜ್ಯೋತ್ಸವದಂದು ಈತನಿಗೆ ಜಿ... ಅತ್ಯುತ್ತಮ ಅಧಿಕಾರಿ ಎಂದು 'ಸೇವಾ ಸರ್ವೋ... ಎಂಬ ಪ್ರಶಸ್ತಿ ನೀಡಿ ನಗೆಪಾಟಲಿಗೀಡಾಗಿದೆ. ದಶದಿಕ್ಕಲ್ಲೂ ಆರ್.ಪಿ.ಗೆ ದುಷ್ಟ-ಭ್ರಷ್ಟ-... ಮುಕ್ಕುವವನೆಂದು ಉಗುಳುತ್ತಿದ್ದರೂ ಜಿಲ್ಲಾಡಳಿತ ... ಈತ ಪ್ರಶಸ್ತಿಗೆ ಅರ್ಹನಾಗಿ ಕಂಡಿರುವುದು ವಿ... ಸಿ. ಡಿಸ್‌ಮಿಸ್ ಆಗಿ ಕಂಬಿ ಎಣಿಸಬೇಕಾಗಿರುವ ... ಆರ್.ಪಿ. ನಾಯ್ಕ ಹಲ್ಲು ಕಿಸಿಯುತ್ತ ಪ್ರಶಸ್ತಿ ಪಡೆದ... ಆತ ನಗರಾಡಳಿತ ಸಂಸ್ಥೆಗಳನ್ನು ದರೋಡೆ ಮಾ... ಹಾಕಿಕೊಂಡಿರುವ ಕಪ್ಪು ಕಾಸಿನ ಪ್ರಭಾವ ಜಿಲ್... ಮೇಲೆ ಎಷ್ಟಾಗಿದೆ ಎನ್ನುವುದಕ್ಕೆ ಸಾಕ್ಷಿಯಂತಿದೆ...

ಆರ್.ಪಿ. ನಾಯ್ಕ ಪ್ರಶಸ್ತಿ ಖರೀದಿಸಿ ... ಪತ್ರಿಕೆಗಳಲ್ಲಿ ತನ್ನವರಿಂದ ಅಭಿನಂದನೆಯ ಜಾ... ಹಾಕಿಸಿಕೊಂಡು ಬೀಗಿದ್ದೇ ಬೀಗಿದ್ದು. ಈ ಜಾ... ಪ್ರಾಯೋಜಕ ಸ್ವತಃ ಆರ್.ಪಿ.ಯೇ. ಈ ... ಜಾಹಿರಾತುಗಳೇ ಆತನ ಬಳಿ ಇರುವ ಅನ್ಯಾಯ... ಪ್ರಮಾಣ ಹೇಳುವಂತಿದೆ. ಮಜಾ ಎಂದರೆ, ... ನಾಯ್ಕನ ಹಲ್ಲು ಕಿಸಿದ ಕ್ಲೋಸ್‌ಅಪ್ ಫೋ... ಜಾಹಿರಾತಿನ ಬಿಸಿ ಆರುವ ಮೊದಲೇ ಆತ... ಕರ್ಮಕಾಂಡವೊಂದು ಸಾಕ್ಷ್ಯಾಧಾರ ಸಮೇತ ಜಗಜ... ಹೋಯ್ತು! ಈ ಹಸಿಹಸೀ ಮೋಸಗಾರ ... ಮೀರಿದ ಸಂಬಳ-ಸವಲತ್ತು-ಭತ್ಯೆ ಪಡೆದು ಸರ್ಕಾರ... ಜೈಲು ಪಾಲಾಗುವ ಪಾತಕ ಮಾಡಿದ್ದಾನೆಂದು ... ಇಲಾಖೆಯ ನಿರ್ದೇಶಕರೇ ಸಾರಿದ್ದಾರೆ!

ಆರ್.ಪಿ. ನಾಯ್ಕನ ಹೆಚ್ಚುವರಿ ಸಂಬಳ ಪಡೆ... ವೃತ್ತಾಂತ ಕುತೂಹಲಕರವಾಗಿದೆ. ಬರೋಬ್ಬರಿ ... ವರ್ಷಗಳ ಕಾಲ ಹಲವು ಲಕ್ಷ-ಲಕ್ಷ ಈತ... ಬೊಕ್ಕಸದಿಂದ ಕದ್ದಿದ್ದಾನೆ. ಲೆಕ್ಕ ಪರಿಶೋ... ಜಿಲ್ಲಾಧಿಕಾರಿಗೆ ಮತ್ತು ಪೌರಾಡಳಿತ ಇ... ಕಣ್ಕಟ್ಟುತ್ತಲೇ ಇಷ್ಟು ವರ್ಷ ಕಳೆದ ಆರ್.ಪಿ. ಈಗ...





ಕಳ್ಳಾಸ್ತಿ ಕಿಂಗ್

ಹೊನ್ನಾವರದಲ್ಲಿ ಸ್ವಿಸ್ ಬ್ಯಾಂಕ್ ಮಟ್ಟದ ಕಳ್ಳ ಕುಬೇರ ಯಾರಾದರೂ ಇದ್ದಾರಾ ಎಂದು ಕೇಳಿದರೆ, ಜನ ತಟ್ಟನೇ ನಗರಾಭಿವೃದ್ಧಿ ಕೋಶದ ಬನಾವಟಿ ಇಂಜಿನಿಯರ್ ಆರ್.ಪಿ. ನಾಯ್ಕನತ್ತ ಬೆರಳು ತೋರಿಸುತ್ತಾರೆ. ಕಳ್ಳ ರಾಜಕಾರಣಿಗಳು ತಮ್ಮ ಕಪ್ಪು ಕಾಸು ಸ್ವಿಸ್ ಬ್ಯಾಂಕ್‌ನಲ್ಲಿಟ್ಟರೆ ಆರ್.ಪಿ. ತಮಿಳುನಾಡಿನ ಚೆನ್ನೈನ ಬ್ಯಾಂಕುಗಳಲ್ಲಿ ತನ್ನ ಅಕ್ರಮ ಅಪಥಮನಿ ಸಂರಕ್ಷಿಸಿಟ್ಟಿದ್ದಾನಂತೆ. ಈ ಖದೀಮ ಇಂಜಿನಿಯರ್ ಆಗಾಗ ಚೆನ್ನೈಗೆ ಹೋಗಿ ಬರುತ್ತಾನೆ. ಅಲ್ಲಾತನಿಗೆ ಏನು ಕೆಲಸ? ಸಂಬಂಧಿಕರು-ಗೆಳೆಯರು ಯಾರೂ ಇಲ್ಲ. ಹೀಗಿರುವಾಗ ಆರ್.ಪಿ. ಪದೇಪದೇ ಚೆನ್ನೈಗೆ ಹೋಗುವುದು ಅಕ್ರಮ ಸಂಪತ್ತಿನ ನಿಗಾ ವಹಿಸಲೆಂದು ಆತನ ಹತ್ತಿರದಿಂದ ಬಲ್ಲವರು ವ್ಯಾಖ್ಯಾನಿಸುತ್ತಾರೆ.

ಚೆನ್ನೈನ ಈ ಲಿಂಕು ಬಳಸಿಯೇ ಆರ್.ಪಿ. ಹೊನ್ನಾವರಕ್ಕೊಂದು ಅಕ್ರಮ ಎಲ್‌ಪಿಜಿ ಗ್ಯಾಸ್ ವಿತರಣಾ ಏಜೆನ್ಸಿ ಬೇನಾಮಿಯಾಗಿ ಗಿಟ್ಟಿಸಿದ್ದಾನೆ. ಹೊನ್ನಾವರ ಮುನ್ಸಿಪಾಲಿಟಿಯಲ್ಲಿ ಆರ್.ಪಿ. ನಾಯ್ಕ ದಿನಗೂಲಿ ನೌಕರನಾಗಿದ್ದಾಗಲೇ ಅಂದಿನ ಅಧ್ಯಕ್ಷ ಕೃಪಾಕಟಾಕ್ಷ ಪಡೆದು ಆಯಕಟ್ಟಿನ ವ್ಯವಹಾರ ನಿಭಾಯಿಸುತ್ತಿದ್ದ. ಆಗಾತ ಬರೋಬ್ಬರಿ 11 ಮುನ್ಸಿಪಾಲಿಟಿ ಸೈಟ್‌ಗಳನ್ನು ಗೋಲ್‌ಮಾಲ್ ಮಾಡಿದ್ದಾನೆ. ಸತ್ತವರು, ಊರಲ್ಲಿಲ್ಲದವರು, ಅನಾಮಧೇಯರ ಹೆಸರಲ್ಲೆಲ್ಲ ಸೈಟ್ ಮಾಡಿರುವ ಆರ್.ಪಿ. ಕರ್ಮಕಾಂಡ ಬೆಳಗಾವಿಯ ವಿಭಾಗಾಧಿಕಾರಿ ಕಚೇರಿಯಲ್ಲಿ ವಿಚಾರಣೆಯಲ್ಲಿದೆ. ಕಳೆದ ಎರಡು ದಶಕದಿಂದ ಈ ವಿಚಾರಣೆ ನಡೆಯುತ್ತಿದ್ದರೂ ತಾರ್ಕಿಕ ಅಂತ್ಯ ಕಾಣದಂತೆ ಆರ್.ಪಿ. ಮನಿ ಮ್ಯಾಜಿಕ್ ಮಾಡುತ್ತಿದ್ದಾನೆ. ಇದೇನಾದರೂ ನಿಷ್ಠುರ ತನಿಖೆಯಾದರೆ ಆರ್.ಪಿ. ಮತ್ತಾತನಿಗೆ ಅಂದು ಸಹಕರಿಸಿದ ಮುನ್ಸಿಪಾಲಿಟಿ ಅಧ್ಯಕ್ಷರು ಜೈಲು ಪಾಲಾಗುವುದು ಗ್ಯಾರಂಟಿ.

ಹೊನ್ನಾವರದಲ್ಲಿ ಆರ್.ಪಿ. ನಾಯ್ಕ ಕಳ್ಳಾಸ್ತಿ ಕಿಂಗ್ ಎಂದೇ ಚಿರಪರಿಚಿತ. ರಥಬೀದಿಯ ಬಳಿಯಲ್ಲಿ ಸುಮಾರು 800 ಚದರ ಅಡಿಯ ಮನೆಯೊಂದರಲ್ಲಿ ಆರ್.ಪಿ. ವಾಸವಾಗಿದ್ದಾನೆ. ಇದು ಆತನ ಹೆಂಡತಿಯ ಸಹೋದರರ ಹೆಸರಲ್ಲಿದೆ. ಆ ಮನೆಯ ಪಕ್ಕದಲ್ಲೇ ಆತನ ಭಾಮೈದನೊಬ್ಬನ 1,500 ಚ.ಅಡಿ. ಮನೆಯಿದೆ. ಗಾಂಧಿನಗರದಲ್ಲಿ 2,400 ಚ.ಅಡಿಯ ಎರಡಂತಸ್ತಿನ ಭವ್ಯ ಬಂಗಲೆಗೆ ಎಸ್.ಆರ್. ನಾಯ್ಕ ಎಂಬ 'ನಪುಂಸಕ' ಯಜಮಾನ. ಸ್ಥಳೀಯಾಡಳಿತದಲ್ಲಿ ಈ ಮನೆಯ ಮಾಲೀಕ ಶ್ರೀಮತಿ ಅಥವಾ ಶ್ರೀ ಎಂಬ ಬಗ್ಗೆ ದಾಖಲೆಯಿಲ್ಲ. ಒಂದು ಮೂಲದ ಪ್ರಕಾರ ಇದು ಆರ್.ಪಿ. ನಾಯ್ಕನ ಬೇನಾಮಿ ಆಸ್ತಿ; ಆತನ ಹೆಂಡತಿ ಹೆಸರು ಸುರೇಖಾ. ಹೀಗಾಗಿ ಈ ಮನೆಯ ಒಡತಿ ಎಸ್.ಆರ್. ನಾಯ್ಕ ಎಂದು ಜನ ಹೇಳುತ್ತಾರೆ. ಸದ್ರಿ ಸುರೇಖಾ ನಾಯ್ಕ ಈಚೆಗೆ ಎಡ್ವಿನ್ ರಾಡ್ರಿಗಸ್ ಎಂಬವರಿಂದ 1,400 ಚ.ಅಡಿ ಮನೆ ಖರೀದಿಸಿದ್ದಾರೆ. ಕೊಂಬೆಕೇರಿಯಲ್ಲಿ ಮೂರು ಗುಂಟೆಯ ಒಂದು ಸೈಟ್ ಆರ್.ಪಿ. ಬೇನಾಮಿಯಾಗಿ ಕೊಂಡುಕೊಂಡಿದ್ದಾನೆ.

ಮುನ್ಸಿಪಾಲಿಟಿಯ ಕುಖ್ಯಾತ 11 ಸೈಟ್ ಹಗರಣದಲ್ಲಿ ಬಹಳಷ್ಟಕ್ಕೆ ಅಸಲಿ ಅಪ್ಪ ಆರ್.ಪಿ. ನಾಯ್ಕನೇ ಎಂಬ ಮಾತು ಇವತ್ತಿಗೂ ಕೇಳಿಬರುತ್ತಿದೆ. ಇದೆಲ್ಲ ಲೋಕಾಯುಕ್ತಕ್ಕೆ ತಿಳಿದಿಲ್ಲವಾ? ತಿಳಿದಿದೆ. ಸ್ಥಳೀಯ ಲೋಕಾಯುಕ್ತರನ್ನು ಆತ ನಿಭಾಯಿಸುತ್ತಿದ್ದಾನೆ. ಹೀಗಾಗಿ ಬೆಂಗಳೂರಲ್ಲಿರುವ ಲೋಕಾಯುಕ್ತದ ದೊಡ್ಡವರು ಆರ್.ಪಿ. ನಾಯ್ಕನ ಮೇಲೊಂದು ಕಣ್ಣಿಡುವ ಜರೂರತ್ತಿದೆ. ಈತನನ್ನು ಹೀಗೇ ಬಿಟ್ಟರೆ ಸರ್ಕಾರದ-ಸಾರ್ವಜನಿಕರ ಯಾವ್ಯಾವ ಸಂಪತ್ತು ನುಂಗಿ ನೊಣೆಯುತ್ತಾನೋ ಹೇಳಲಾಗದು!!

ತುತ್ತಿದ್ದಾನೆ. ಬಚಾವಾಗಲು ಹಟಬೆ ಹಣ ನೀರಂತೆ
ತ್ತಿದ್ದಾನೆ! ತಿರಬೋಕಿಯಂತಿದ್ದ ಆರ್.ಪಿ. ಪೌರಾಡಳಿತ
ಸೇರಿದ್ದು 1983ನೇ ಇಸ್ವಿಯ ಡಿಸೆಂಬರ್ 26ರಂದು.
ತ ಪೊನ್ನಾವರ ಮುನ್ಸಿಪಾಲಿಟಿಯ ಅಧ್ಯಕ್ಷನೊಬ್ಬನ
ತೆಯ ಬಂಟನಾಗಿದ್ದ. ಹೀಗಾಗಿ ಕೌನ್ಸಿಲ್ ನಿರ್ಣಯ
04 ದಿನಾಂಕ 06.01.1983. ಅಂದಾತನ ಸಂಬಳ
ಲಿಯಂತೆ ನಿಕ್ಕಿ ಆಗಿದ್ದು 20 ರೂಪಾಯಿಗಳು
!!

ದ್ದಕ್ಕಿದ್ದಂತೆಯೇ ಈತನಿಗೆ 1986ರ ಜುಲೈ 1ರಂದು
-2750ರ ವೇತನ ಶ್ರೇಣಿಯಲ್ಲಿ ಪಗಾರ ನಿಗದಿಯಾಗಿ
ದೆ. ಆತನ ಸರ್ವೀಸ್ ರಿಜಿಸ್ಟರ್‌ನ ಪುಟ ಸಂಖ್ಯೆ 6
987ರ ವೇತನ ಶ್ರೇಣಿಯಲ್ಲಿ ಸಂಬಳ ನಿಗದಿಯಾಗಿದೆ
ಅಂಶವಿದೆ. ಮಹತ್ವದ ಅಂಶವೆಂದರೆ 1987ರ
ಶ್ರೇಣಿ ನಾಲಾಯಕ್ ಆರ್.ಪಿ. ನಾಯ್ಕನಿಗೆ 1986ರ
ನಲ್ಲೇ ಸಿಕ್ಕಿದೆ!! ಇದು ಅಪ್ಪಟ ಅಕ್ಷಮ್ಯ, ಪೌರಾಡಳಿತ
ಯ ನೌಕರರ ವೇತನ ನಿಯಮಕ್ಕೆ ವಿರುದ್ಧ. ಅಷ್ಟೇ
ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದ ವೇತನ
.. ಈ ದೊಡ್ಡಮಟ್ಟದ ಸಂಬಳ ತಾಂತ್ರಿಕ ತೂತುಗಳಲ್ಲಿ
ಕದಿಯಲು ಆರ್.ಪಿ.ಗೆ ಅನುಕೂಲ ಕಲ್ಪಿಸಿದ್ದು
ು ಲೆಕ್ಕ ಪರಿಶೋಧನಾ ವರ್ತುಲದ ಸಹಾಯ
ತ್ರಕನ ಬೋಗಸ್ ತಾರೀಫ್ ಪತ್ರ!

.. 30.10.1989ರಂದು ಈ ಅಧಿಕಪ್ರಸಂಗಿ
ುಕ ನಿಯಂತ್ರಕ ತಿರುಬೋಕಿ ಆರ್.ಪಿ.ಗೆ ಕಾಯಂ
ಗೆ ಕೊಡುವ ಸೌಲಭ್ಯಗಳೆಲ್ಲ ಕೊಡಬಹುದೆಂಬ
ಯ ವ್ಯಕ್ತಪಡಿಸುತ್ತಾನೆ. ಅಂದರೆ ಅಂಥದೊಂದು
ಯ ಆರ್.ಪಿ.ಯೇ ಧನಬಲದಿಂದ ಲೆಕ್ಕಪರಿಶೋಧಕ
ತ್ರಕನ ಮೇಲೆ ಹಾಕಿಸಿ ಪಡೆದುಕೊಂಡು ವಂಚನೆಯ
ಚರಣೆಗೆ ಇಳಿಯುತ್ತಾನೆ. ಆದರೆ ಲೆಕ್ಕ ಪರಿಶೋ
ನಗರಾಡಳಿತದ ಲೆಕ್ಕ ತಪಾಸಣೆ ಮಾಡಬಹುದೇ
ತು ನೌಕರರ ಸೇವಾ ವಿಚಾರದಲ್ಲಿ ಮೂಗು
ುವಂತಿಲ್ಲ ಎಂದು ಮುನ್ಸಿಪಲ್ ಆ್ಯಕ್ಟ್ 1964ರ
» 290ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಸರ್ವೀಸ್
ರ್ ಬಗ್ಗೆ ಮಾತಾಡುವ ಅಧಿಕಾರ ಇಲ್ಲದಿದ್ದರೂ
ಅಧಿಕಪ್ರಸಂಗಿತನ ಲೆಕ್ಕಪರಿಶೋಧಕ ಮಾಡಿದ್ದಾನೆ.
ರ್.ಪಿ. ನಾಯ್ಕನ ಚಾಕರಿ ಕಾಯಂ ಆಗಿದ್ದು ದಿನಾಂಕ
997 (ಪೌನಿ/ಸಿಬ್ಬಂದಿ/ಉಕ/ಸಿಆರ್-21/96-
ು. ಅಂದರೆ ಈ ಕಳ್ಳ 1986ರ ಜುಲೈ 1
1993ರ ಡಿಸೆಂಬರ್ 26ರ ತನಕ ವಿಳೂವರೆ
ಯೋಗ್ಯತೆ ಇಲ್ಲದೆ ಹೆಚ್ಚುವರಿ ಸಂಬಳ ತಿಂದಿದ್ದಾನೆ!!
ಹೆಚ್ಚುವರಿ ಆರ್ಥಿಕ ಸೌಲಭ್ಯಗಳನ್ನು ದಗಲುಬಾಜಿ
.. ನಾಯ್ಕನಿಂದ ವಸೂಲಿ ಮಾಡುವಂತೆ ಪೌರಾಡಳಿತ
ಶಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲದ
ುಕ ನಿರ್ದೇಶಕರಿಗೆ ಕಳೆದ ಏಪ್ರಿಲ್ 30ರಂದು
ಬರೆದಿದ್ದಾರೆ. ಈ ಅವಾಂತರಕ್ಕೆ ಲೆಕ್ಕಪರಿಶೋಧನಾ
ಯ ಅವಾಂತರವೇ ಕಾರಣವಾದ್ದರಿಂದ ಅವರೇ
. ನಾಯ್ಕ್ ಪಡೆದಿರುವ ಹೆಚ್ಚುವರಿ ಆರ್ಥಿಕ ಸೌಲಭ್ಯ
ಯಲು ಹೊಣೆಗಾರರು ಎಂದು ಆ ಪತ್ರದಲ್ಲಿ
ುಸಲಾಗಿದೆ. ಆದರೆ ಸಕ್ಷಮ ಪ್ರಾಧಿಕಾರವಲ್ಲದ
ಯಿಂದ ಬಂದ ಪತ್ರವನ್ನು ಪರಿಗಣಿಸಿರುವ ಅಂದಿನ
ಕಾರಿ ಮತ್ತು ಪೌರಾಡಳಿತ ಇಲಾಖೆಯ ಘಟಂಗ
ರೂ ಈ ಭಾನ್ಗಡಿಯಲ್ಲಿ ಪಾಲುದಾರರೇ!
ನಾಯ್ಕನ ದೋಖಾ ದುಡ್ಡಿಗೆ ಬಾಯಿ ತೆರೆದು
ಬೊಕ್ಕಸಕ್ಕೆ ಕನ್ನ ಹಾಕಲು ನೆರವಾದವರೆಲ್ಲರೂ
ಜತೆಗೇ ಪ್ರಾಯಶ್ಚಿತ್ತ ಅನುಭವಿಸಬೇಕಾದ್ದು
ಷ್ಟೇ ಅಲ್ಲ, ಅನಿವಾರ್ಯವೂ ಹೌದು. ಈ ಕೇಸ್
ಾಕಲು ಆರ್.ಪಿ. ಹಣದ ಪಿಂಡಿಗಳ ಬಳಸುತ್ತಿದ್ದಾನೆ.
ತನಿಖೆ ಸಾಧ್ಯವಾ?
ಕಮಾಯಿಯಲ್ಲಿ ಪೌರಾಡಳಿತ-ನಗರಾಭಿವೃದ್ಧಿ
ನಿರ್ದೇಶಕ-ಕಾರ್ಯದರ್ಶಿಗಳಿಗೆಲ್ಲ ಪಾಲಿದೆ. ಹಾಗಾಗಿ
ರೂ ಏನೂ ಮಾಡಲಿಕ್ಕಾಗದೆಂದು ಆರ್ಭಟಿಸುವ
ನಾಯ್ಕಗೆ ಅಂಕುಶ ಇಡುವ ತಾಕತ್ತು ನಗರಾಭಿವೃದ್ಧಿ
ಸೊರಕೆ ಸಾಹೇಬರಿಗೆ ಇದೆಯಾ? ಜಿಲ್ಲಾಧಿಕಾರಿ
ಮಣಿಸುವ, ಶಾಸಕರಿಗೇ ಸೆಡ್ಡು ಹೊಡೆಯುವ,
ಗಳ ಹೆಸರು ದುರ್ಬಳಕೆ ಮಾಡಿಕೊಂಡು ಬ್ಲ್ಯಾಕ್
ಮಾಡುವ ಈ ಕಳ್ಳ ಬೆಕ್ಕಿಗೆ ಗಂಟೆ ಕಟ್ಟೋರು
?

ಸರ್ಕಾರದಿಂದ ಅಪ್ರಮಾಣಿ ಆರ್.ಪಿ. ನಾಯ್ಕನನ್ನು
ಮಾಡದಿದ್ದರೆ ಉತ್ತರ ಕನ್ನಡದ ನಗರಗಳ ಉದ್ಧಾರ
ಇಲ್ಲವೆಂಬುದು ಸಾರ್ವತ್ರಿಕ ಅಭಿಪ್ರಾಯ! ಈ
ವಿಧಾನಸೌಧದಲ್ಲಿ ಕುಳಿತವರಿಗೆ ಕೇಳಿಸೀತಾ?!
ನಿಷ್ಠ ಇಲಾಖೆಯ ಅಧಿಕಾರಿಗಳು ಇತ್ತ ಗಮನ
ರೆ? ಇಲ್ಲವೇ ಆರ್.ಪಿ.ಯ ಪಾಪದ ದುಡ್ಡಿಗೆ
ಒಡ್ಡುವರಾ?

● ನಸುಪ


ಹರಿಹರದ ಬೂಸಿ ಶಾಸಕನಿಗೆ ಭಾರೀ ಮರ್ಯಾದೆ!

ಅಪ್ಪ ಮಳ್ಳ-ಮಗ ಸುಳ್ಳ!!

ಸುಳ್ಳುಗಳಲ್ಲೇ ಸೌಧ ಕಟ್ಟುವ ಹರಿಹರದ ಜೆಡಿಎಸ್ ಶಾಸಕ ಎಚ್.ಎಸ್.ಶಿವಶಂಕರ್‌ಗೆ ಇತ್ತೀಚೆಗೆ ಭರ್ಜರಿ ಮುಖಭಂಗವೇ ಆಗಿದೆ. ಅದೂ ತಾನೆ ಆಹ್ವಾನ ಸ್ವೀಕರಿಸಿ ಹೋಗಿದ್ದ ಸಾರ್ವಜನಿಕ ವೇದಿಕೆಯಲ್ಲಿ! ಮೊನ್ನೆ ಹರಿಹರದ ಒಂದಷ್ಟು ಸಮಾನ ಮನಸ್ಕರು ಸೇರಿಕೊಂಡು ಕಿತ್ತೂರು ರಾಣಿ ಚೆನ್ನಮ್ಮಳ ಸ್ಮರಣಾ ದಿನಾಚರಣೆಯನ್ನು ಆಯೋಜಿಸಿದ್ದರು. ಶಾಸಕ ಎನ್ನುವ ಕಾರಣಕ್ಕೆ ಶಿವಶಂಕರ್‌ಗೂ ಆಹ್ವಾನವಿತ್ತು. ಒಬ್ಬ ವ್ಯಕ್ತಿ ಒಂದು ಸಮಾರಂಭಕ್ಕೆ ಆಹ್ವಾನಿತನಾದರೆ ಆ ಸಂದರ್ಭಕ್ಕೆ ಔಚಿತ್ಯಕ್ಕೆ ತಕ್ಕಂತೆ ತನ್ನ ನಡೆನುಡಿಗಳನ್ನು ಹೊಂದಿಸಿಕೊಳ್ಳುವುದು ಸಭಾ ಮರ್ಯಾದೆಯ ತಥ್ಯವಾಗಿದೆ. ಆದರೆ ನಾಲ್ಕು ಜನ ಸೇರುವ ವೇದಿಕೆ ಸಿಕ್ಕರೆ ಸಾಕು ತನ್ನ ಮತ್ತು ತನ್ನಪ್ಪ ಮಾಜಿ ಮಂತ್ರಿ ಎಚ್.ಶಿವಪ್ಪನ (ಈಗ ದಿವಂಗತ) ರಾಜಕೀಯ ಪುರಾಣಗಳನ್ನು ಮೈಕಿನ ಮುಂದೆ ಪೋಣಿಸುವ ಶಿವಶಂಕರ್‌ಗೆ ಸಭಾ ಮರ್ಯಾದೆಯ ಎಬಿಸಿಡಿಯಾದರೂ ಎಲ್ಲಿಂದ ಅರ್ಥವಾಗಬೇಕು. ಅಂತಹ ಯಡವಟ್ಟೇ ಜನರ ಮುಂದೆ ಅವನ ಬೆವರಿಳಿಸಿದ್ದು.



ಎಚ್. ಶಿವಪ್ಪ



ಶಿವಶಂಕರ್

ಅವತ್ತು ಆದದ್ದು ಇಷ್ಟೇ. ಔಪಚಾರಿಕತೆಗೆ ಕಟ್ಟುಬಿದ್ದ ಆಯೋಜಕರು ವೇದಿಕೆ ಮೇಲೆ ಆಸೀನನಾಗಿದ್ದ ಶಿವಶಂಕರ್‌ನನ್ನು ಮಾತಿಗೆ ಆಹ್ವಾನಿಸಿದ್ದರು. ಕಾರ್ಯಕ್ರಮದ ಘನತೆಯ ಬಗ್ಗೆ ಅರಿವಿದ್ದಿದ್ದರೆ ಚೆನ್ನಮ್ಮಳ ಬಗ್ಗೆಯೋ, ಬ್ರಿಟಿಷ್ ವಿರುದ್ಧ ಅವಳ ಹೋರಾಟದ ಬಗ್ಗೆಯೋ, ಆಕೆಯ ವೀರತ್ವದ ಬಗ್ಗೆಯೋ, ಸಂಗೊಳ್ಳಿ ರಾಯಣ್ಣನ ಬಗ್ಗೆಯೋ ಕಡೇಪಕ್ಷ ಅಂತಹ ವೀರವನಿತೆ ಬಾಳಿದ ನಾಡಲ್ಲಿ ಇಂದು ಮಹಿಳೆಯರ ಮೇಲೆ ಆಗುತ್ತಿರುವ ಅನಾಗರಿಕ ಅತ್ಯಾಚಾರಗಳ ಬಗ್ಗೆಯೋ ಮಾತನಾಡಬಹುದಿತ್ತು. ಆದರೆ ಶಿವಶಂಕರ್ ಆ ಉಸಾಬರಿಗೇ ಹೋಗಲಿಲ್ಲ. ತನ್ನಪ್ಪ ಹರಿಹರಕ್ಕೆ ಆ ರಸ್ತೆ ಮಾಡಿಸಿದ, ಈ ಮಳಿಗೆ ಕಟ್ಟಿಸಿದ, ಹರಿಹರ-ಹಾವೇರಿ ನಡುವಿನ ಸೇತುವೆ ದುರಸ್ತಿಗೆ ಅಪ್ರೂವ್ ಕೊಡಿಸಿದ ಅಂತೆಲ್ಲಾ ಬಂಡಲ್ ಬಡಾಯಿ ಬಿಡಲು ಶುರು ಮಾಡಿಕೊಂಡ. ಹರಿಹರದ ಜನಕ್ಕೆ ಇವನ ಭಾಷಣ ಬಾಯಿಪಾಠ ಆಗುವಷ್ಟರ ಮಟ್ಟಿಗೆ ಇಂತಹದ್ದೇ ಹೇಳಿಕೊಂಡು ಬಂದಿದ್ದ ಶಿವಶಂಕರ್‌ನನ್ನು ಇದೂ ಒಮ್ಮೆ ಜೀರ್ಣಿಸಿಕೊಳ್ಳಲು ಜನ ಸಿದ್ಧರಿದ್ದರು, ಆದರೆ ಆತ ಜಾತಿ ಮಠದ ಸೊಲ್ಲೆತ್ತಿ ಅಲ್ಲಿಯೂ ತಮ್ಮ ಕುಟುಂಬ ಘರಾಕಿಗೆ ನಿಂತಾಗಲೇ ಯಡವಟ್ಟು ಆದದ್ದು. ಪಂಚಮಸಾಲಿ ಲಿಂಗಾಯತರಿಗೆಂದೇ ಹರಿಹರದಲ್ಲಿ ಒಂದು ಮಠ ಕಟ್ಟಬೇಕೆನ್ನುವುದು ಇಲ್ಲಿಗೆ ಆರೇಳು ವರ್ಷಗಳಿಂದಲೂ ನಡೆಯುತ್ತಿರುವ ಪ್ರಯತ್ನ. 10 ಜನವರಿ 2008ರಂದು ರಚನಾ ಟ್ರಸ್ಟ್ ಸಭಾಂಗಣದಲ್ಲಿ ಸಭೆ ಸೇರಿದ್ದ ಜಾತ್ಯಸ್ಥ ಮುಖಂಡರಾದ ಬಾವಿಬೆಟ್ಟಪ್ಪ ಬಸವರಾಜ ದಿಂಡೂರ, ನಂದಿಹಳ್ಳಿ ಹಾಲಪ್ಪ ಸೋಮನಗೌಡ ಪಾಟೀಲ ಮೊದಲಾದವರು ಮಠ ಕಟ್ಟುವ ತೀರ್ಮಾನಕ್ಕೆ ಬಂದಿದ್ದರು. ಭಾಷಣಕ್ಕೆ ನಿಂತಿದ್ದ ಶಿವಶಂಕರ್ 'ಪಂಚಮಸಾಲಿ ಲಿಂಗಾಯತ ಮಠ ಕಟ್ಟಲು ನಮ್ಮಪ್ಪ ಲಕ್ಷಾಂತರ ಬೆಲೆಬಾಳುವ 4.5 ಎಕರೆ ಜಮೀನನ್ನೇ ಬಿಟ್ಟು ಕೊಟ್ಟರು, ನಾನು ಅನಾಮತ್ತು ಹತ್ತು ಲಕ್ಷ ರೊಕ್ಕವನ್ನೇ ದೇಣಿಗೆ ಕೊಟ್ಟೆ' ಎಂಬಿತ್ಯಾದಿಯಾಗಿ ಬಡಬಡಿಸಿದ್ದ. ಇಂತದೇ ಡೈಲಾಗನ್ನು ಹಲವಾರು ವೇದಿಕೆಗಳಲ್ಲಿ ಉದುರಿಸಿದ್ದನಾದರೂ ಅವನ ದುರಾದೃಷ್ಟಕ್ಕೆ ಅವತ್ತಿನ ವೇದಿಕೆಯಲ್ಲಿ ಜವಳಿ ಉದ್ಯಮಿ ಬಿ.ಸಿ.ಉಮಾಪತಿ ಕೂಡಾ ಉಪಸ್ಥಿತರಿದ್ದರು. ಮಠದ ಅಸ್ತಿತ್ವಕ್ಕಾಗಿ 2008ರಿಂದಲೂ ಹಗಲಿರುಳು ಓಡಾಡಿ ಚಪ್ಪಲಿ ಸವೆಸಿದ ವ್ಯಕ್ತಿ ಈ ಉಮಾಪತಿ. ಈ ವಿಚಾರದಲ್ಲಿ ಯಾರ್‍ಯಾರ ಪಾತ್ರ, ಪಾಲು ಎಂತದ್ದು ಎಂಬುದರ ಅಷ್ಟೂ ಆಳ ಅಗಲಗಳು ಉಮಾಪತಿಗೆ ಚೆನ್ನಾಗಿಯೇ ಗೊತ್ತಿದೆ. ಶಿವಶಂಕರ್ ಉದುರಿಸಿದ್ದ ಡೈಲಾಗ್‌ಗಳು ಅರ್ಧವಷ್ಟೇ ಸತ್ಯವಾಗಿದ್ದವು, ಇನ್ನರ್ಧ ಸತ್ಯವನ್ನಾತ ಬೇಕಂತಲೇ ಮುಚ್ಚಿಟ್ಟಿದ್ದ. ಒಟ್ಟಿನಲ್ಲಿ ಮಠದ ನೆಪದಲ್ಲಿ ಜಾತಿ ಓಟುಗಳನ್ನು ಗಿಂಚುಕೊಳ್ಳಲು (ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶಿವಶಂಕರ್ ಗೆದ್ದದ್ದು ಇದೇ ಜಾತಿ ಮಠದ ಪೊಲಿಟಿಕ್ಸ್‌ನಿಂದ) ನಿಜವಾದ ಶ್ರಮಿಕರನ್ನು ಗೌಣ ಮಾಡಿ ಹೀರೋ ಆಗಲು ಹೊರಟಿದ್ದು ಉಮಾಪತಿಗೆ ಭರ್ಜರಿ ಸಿಟ್ಟು ತರಿಸಿತ್ತು.

ತನ್ನ ಪಾಕು ಪುರಾಣ ಮುಗಿಸಿ ಮೈಕಿನಿಂದ ಶಿವಶಂಕರ್ ತೊಲಗುತ್ತಿದ್ದಂತೆಯೇ ಆಯೋಜಕರು ಉಮಾಪತಿಯನ್ನೇ ಮಾತಿಗೆ ಕರೆದರು. ಛಾನ್ಸು ಸಿಕ್ಕಿದ್ದೇ ತಡ, ತಮ್ಮೊಳಗೆ ಅದುಮಿಟ್ಟುಕೊಂಡಿದ್ದ ಆಕ್ರೋಶವನ್ನೆಲ್ಲ ಉಮಾಪತಿ ಜನರ ಮುಂದೆ ಕಾರಿಕೊಂಡುಬಿಟ್ಟರು. ಶಿವಶಂಕರ್‌ನ ಸುಳ್ಳುಗಳ ಒಂದೊಂದು ಅಸಲಿಯತ್ತನ್ನೂ ಬಿಡಿಬಿಡಿಯಾಗಿ ತೆರೆದಿಡುತ್ತಾ ಹೋದರು. ಮೊದಲನೆಯದಾಗಿ ಅವರು ತಡವಿಕೊಂಡದ್ದು, ಶಿವಶಂಕರ್‌ನ ಅಪ್ಪ ಮಾಜಿ ಮಂತ್ರಿ ಎಚ್. ಶಿವಪ್ಪ ಮಠದ ನಿರ್ಮಾಣಕ್ಕೆ ಕೊಟ್ಟರೆಂದು ಹೇಳಲಾಗುವ ಜಮೀನಿನ ವಿಷಯವನ್ನು. ಬೆಂಗಳೂರು ಹೈವೇಯ ಆಜುಬಾಜಿನಲ್ಲೆ ಮೈಚಾಚಿಕೊಂಡಿರುವ ಅಷ್ಟು ಜಮೀನನ್ನು ಪುಕ್ಕಟೆಯಾಗಿ ಬಿಟ್ಟುಕೊಡಲು ಶಿವಪ್ಪನಿಗೇನು ಬುದ್ಧಿಭ್ರಮಣೆ ಆಗಿರಲಿಲ್ಲ. ಅಸಲಿಗೆ ಅದು ಶಿವಪ್ಪನ ಜಮೀನೇ ಅಲ್ಲ. ಅದು ಹರಿಜನ ಅಶೋಕ ಮತ್ತು ಅವನ ಸೋದರರ ಸ್ವತ್ತಾಗಿತ್ತು. 2008ರಲ್ಲಿ ಶಿವಪ್ಪ ಎಕರೆಗೆ 4.75 ಲಕ್ಷದಂತೆ ಖರೀದಿ ಮಾಡಲು ಅಗ್ರಿಮೆಂಟ್ ಮಾಡಿಸಿಕೊಂಡಿದ್ದ. ಆದರೆ ಸಂಪೂರ್ಣ ಹಣ ಕೊಟ್ಟಿರದಿದ್ದರಿಂದ ಖಾತೆ ಬದಲಾವಣೆ ಆಗಿರಲಿಲ್ಲ. ಇದೇ ಹೊತ್ತಿನಲ್ಲಿ ಮಠ ಕಟ್ಟಲು ಹರಿಹರದ ಆಸುಪಾಸಿನಲ್ಲಿ ಸೂಕ್ತ ಜಮೀನಿಗಾಗಿ ತಲಾಶ್ ನಡೆಸುತ್ತಿದ್ದಾಗ ತಾನು ಖರೀದಿಸಬೇಕೆಂದುಕೊಂಡಿದ್ದ ಜಮೀನನ್ನೆ ನೀಡುವುದಾಗಿ ಶಿವಪ್ಪ ಘೋಷಿಸಿದ್ದ. ಹಾಗಂತ ಆತ ಪುಕ್ಕಟೆಯಾಗೇನೂ ಕೊಟ್ಟಿಲ್ಲ. ಶಿವಪ್ಪ ಹರಿಜನ ಸಹೋದರರಿಂದ ಖರೀದಿಸಬೇಕೆಂದುಕೊಂಡಿದ್ದ ಮೊತ್ತಕ್ಕಿಂತ ಒಂದು ಲಕ್ಷ ಹೆಚ್ಚು ಹಣವನ್ನು ಅಂದರೆ ಎಕರೆ 5.75 ಲಕ್ಷವನ್ನು ಜಮೀನಿನ ಮಾಲೀಕರಿಗೆ ಕೊಟ್ಟು ಮಠ ಖರೀದಿಸಿತ್ತು. ರಿಜಿಸ್ಟ್ರೇಷನ್ ಆಗುವ ದಿನ ಈ ಮೊದಲು ತಾನು ಜಮೀನಿನ ಮಾಲೀಕರಿಗೆ ಸಂದಾಯ ಮಾಡಿದ್ದ ಮುಂಗಡ ಹಣವನ್ನು ಮಠದವರಿಂದ ಪಡೆದುಕೊಂಡ ಮೇಲೆಯೇ ಹಳೆಯ ಅಗ್ರಿಮೆಂಟ್ ವಜಾ ಮಾಡಿಕೊಂಡು ಜಮೀನು ಮಾರಾಟ ಮಾಡಲು ಶಿವಪ್ಪ ಅನುವು ಮಾಡಿಕೊಟ್ಟದ್ದು ವಾಸ್ತವ ಸಂಗತಿ. ಇಲ್ಲಿ ಶಿವಪ್ಪನ 'ತ್ಯಾಗ' (?) ಏನೆಂದರೆ, ತಾನು ಖರೀದಿ ಮಾಡಬೇಕೆಂದುಕೊಂಡಿದ್ದ ಜಮೀನನ್ನು ಮಠ ಖರೀದಿಸಲು ಬಿಟ್ಟುಕೊಟ್ಟಿದ್ದು ಅಷ್ಟೇ; ಅದೂ ತನ್ನ ಗಂಟನ್ನು ವಾಪಸ್ ಪಡೆದ ನಂತರ. ಇದಿಷ್ಟು ಸತ್ಯವನ್ನು ಮುಚ್ಚಿಟ್ಟಿದ್ದ ಶಿವಶಂಕರ್ ತನ್ನ ತಂದೆಯೇ ಸ್ವಾರ್ಜಿತ ಆಸ್ತಿಯನ್ನು ಬಿಡಿಗಾಸಿಲ್ಲದೆ ದಾನ ಮಾಡಿಬಿಟ್ಟಿದ್ದಾನೇನೊ ಎನ್ನುವಂತೆ ಬಿಲ್ಡಪ್ ಕೊಟ್ಟುಕೊಳ್ಳುತ್ತಲೇ ಬರುತ್ತಿದ್ದ. ಅವತ್ತಿನ ವೇದಿಕೆಯಲ್ಲಿ ಇದಿಷ್ಟನ್ನೂ ಬಿಚ್ಚಿಟ್ಟ ಉಮಾಪತಿ 'ಇನ್ನು ಮುಂದಾದರು ಶಿವಶಂಕರ್ ಜನರಿಗೆ ಸುಳ್ಳು ಹೇಳಿ ದಾರಿ ತಪ್ಪಿಸುವುದನ್ನು ನಿಲ್ಲಿಸಲಿ' ಎಂಬುದಾಗಿ ಚಾಟಿ ಬೀಸಿದ್ದರು.

ಇನ್ನು ಮಠಕ್ಕೆ ತಾನು 10 ಲಕ್ಷ ದೇಣಿಗೆ ನೀಡಿದ್ದೆ ಎನ್ನುವ ಶಿವಶಂಕರ್‌ನ ಉವಾಚವೂ ಅಪ್ಪಟ ಸುಳ್ಳೆನ್ನುವುದನ್ನು ಉಮಾಪತಿ ಅದೇ ವೇದಿಕೆಯಲ್ಲಿ ಜಗಜ್ಜಾಹೀರುಗೊಳಿಸಿದರು. ಮಠ ನಿರ್ಮಾಣ ಮಾಡಬೇಕೆಂದು ತೀರ್ಮಾನವಾಗುವ ವೇಳೆಗೆ ಶಿವಶಂಕರ್ ಎಂ.ಎಲ್.ಸಿ ಆಗಿದ್ದ. ಆಗ ತನ್ನ ಶಾಸಕ ಅನುದಾನದಲ್ಲಿ ಮಠದ ನಿರ್ಮಾಣಕ್ಕೆಂದು ಸರ್ಕಾರದ ಬೊಕ್ಕಸದಿಂದ 10 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡಿಸಿದ್ದ. ಆದರೆ ತಮ್ಮ ಸ್ವಂತ ತಿಜೋರಿಯಿಂದಲೇ ಹಣ ಎತ್ತಿಕೊಟ್ಟವನಂತೆ ಅಷ್ಟೂ ಹಣವನ್ನು ತಾನೇ ದೇಣಿಗೆ ನೀಡಿದ್ದಾಗಿ ಹೇಳಿಕೊಂಡು ಬರುತ್ತಿದ್ದಾನೆ. ತಮ್ಮ ಮಾತಿನ ನಡುವೆ ಅದನ್ನೂ ಪ್ರಸ್ತಾಪಿಸಿದ ಉಮಾಪತಿ '10 ಲಕ್ಷ ಹಣವನ್ನು ಯಾರಪ್ಪನ ಮನೆಯಿಂದ ತಂದುಕೊಟ್ಟಿದ್ದಾರೆ, ಸರ್ಕಾರದಿಂದ ಮಂಜೂರು ಮಾಡಿಸಿಕೊಟ್ಟಿದ್ದಾರಷ್ಟೆ' ಎಂಬರ್ಥದಲ್ಲಿ ಶಿವಶಂಕರ್‌ನನ್ನು ಬಹಿರಂಗವಾಗಿಯೇ ತಿವಿದರು. ತನ್ನ ಕ್ಷೇತ್ರದ ಜನರ ಮುಂದೆಯೇ ತನ್ನ ಸುಳ್ಳುಗಳು ಈ ಪರಿ ಅನಾವರಣವಾಗಿ ಮುಖದ ಬೆವರಿಳಿಸುತ್ತವೆ ಎಂಬ ಕಿಂಚಿತ್ತೂ ಅನುಮಾನವಿರದ ಶಿವಶಂಕರ್‌ನ ಕರ್ಚೀಫು ಉಮಾಪತಿ ಮೈಕಿನಿಂದ ದೂರ ಸರಿಯುವ ವೇಳೆಗಾಗಲೇ ಒದ್ದೆಯಾಗಿ ಹೋಗಿತ್ತು. ಶಿವಶಂಕರ್‌ನ ಅವಸ್ಥೆಯನ್ನು ಕಂಡು ಜನ ಮುಸಿಮುಸಿ ನಗಾಡುತ್ತಿದ್ದರು.

ರಾಜ್ಯದಲ್ಲಿ ಲಿಂಗಾಯತ ಸಮುದಾಯ ನಿರ್ಣಾಯಕ ಮತಸಮೂಹವಾದರೂ ಪಂಚಮಸಾಲಿ ಲಿಂಗಾಯತರಲ್ಲಿ ಸಾಧು ಲಿಂಗಾಯತರಷ್ಟು ಹೇಳಿಕೊಳ್ಳುವಂತಹ ಜಾತಿ ನಾಯಕತ್ವ ಕಾಣಲೇ ಇಲ್ಲ. ದಿವಂಗತ ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಜಾತಿಗೆ ಕಟ್ಟುಬೀಳಲು ಪುರುಸೊತ್ತಿಲ್ಲದೆ ಇಂದಿರಾ-ದೇವರಾಜ ಅರಸರ ಜೊತೆ ರಾಜಕೀಯ ಕಿತ್ತಾಟದಲ್ಲಿ ಕಳೆದುಹೋದರು. ಜನತಾ ಪರಿವಾರದಿಂದ ಮುಖ್ಯಮಂತ್ರಿ ಗಾದಿಗೇರಿದ್ದ ಜೆ.ಹೆಚ್.ಪಟೇಲರು ಕೂಡಾ ಜಾತಿ ಲೀಡರ್‌ಗಿರಿಯನ್ನು ಹುಟ್ಟುಹಾಕಲಿಲ್ಲ. ಸಮುದಾಯದ ಗಾಂಜಿ ವೀರಪ್ಪ ಮಂತ್ರಿಯಾಗಿದ್ದರೂ ಶಿವಪ್ಪನ ಶಿಷ್ಯತ್ವಕ್ಕೇ ಸೀಮಿತವಾಗಿ ಹೋದರು. ಈ ಎಲ್ಲಾ ಲೋಪಗಳಿಂದಲೇ ಎಚ್. ಶಿವಪ್ಪ ಎರಡು ಬಾರಿ ಶಾಸಕನಾದದ್ದು; 2 ವರ್ಷಗಳ ಕಾಲ ಕೈಗಾರಿಕಾ ಮಂತ್ರಿಯಾಗಿ ಮೆರೆದಾಡಿದ್ದು. ಅಷ್ಟಾದರು ಆತನಿಂದ ಹರಿಹರಕ್ಕಾದ ಪ್ರಯೋಜನವಾದರು ಅಷ್ಟಕ್ಕಷ್ಟೆ. ಈ ಭಾಗದ ರೈತರಿಗೆ ಆಸರೆಯಾಗಬಹುದಾಗಿದ್ದ ಭದ್ರಾ ಸಹಕಾರಿ ಸಕ್ಕರೆ ಕಂಪನಿಗೆ ಮರುಜನ್ಮ ನೀಡುವ ಅವಕಾಶ ಕೈಯಲ್ಲಿದ್ದರೂ ಕಾರ್ಖಾನೆಯನ್ನೇ ಮುಕ್ಕಿದ ಅಪಖ್ಯಾತಿಯೂ ಶಿವಪ್ಪನಿಗಿದೆ. ಸಾವಿರಾರು ಕಾರ್ಮಿಕರು ಶಿವಪ್ಪನ ಸರ್ವಾಧಿಕಾರಿ ಧೋರಣೆಗೆ ಹಿಡಿಶಾಪ ಹಾಕಿದ್ದರು. ಕೈಗಾರಿಕಾ ಮಂತ್ರಿಯಾಗಿದ್ದರೂ ಹರಿಹರಕ್ಕೆ ಒಂದೇಒಂದು ನಟ್ಟು ಬೋಲ್ಟನ್ನೂ ಹೊತ್ತು ತರಲಿಲ್ಲ.

ಅಂತಹ ಶಿವಪ್ಪನ ಮಗ ಎಚ್.ಎಸ್.ಶಿವಶಂಕರ್ ಎಂ.ಎಲ್.ಸಿ ಗದ್ದುಗೆ ಹಿಡಿದು ತಂದೆಯನ್ನೂ ಮೀರಿಸುವ ಬಫೂನ್ ರಾಜಕಾರಣಿಯಾಗಿಬಿಟ್ಟ. 2008ರಲ್ಲಿ ಜೆಡಿಎಸ್‌ನಿಂದ ಎಂಎಲ್‌ಎ ಎಲೆಕ್ಷನ್‌ಗೆ ಸ್ಪರ್ಧಿಸಿದ್ದನಾದರು ಯಡ್ಡಿ ಪ್ರೇರಿತ ಬಿಜೆಪಿ ಅಲೆಗೆ ಸಿಕ್ಕು ಕಮಲದ ಬಿ.ಪಿ. ಹರೀಶನೆದುರು ಸೋತಿದ್ದ. ಇವನಪ್ಪ ಮಂತ್ರಿಯಾಗಿದ್ದರೂ, ಈತ ಒಮ್ಮೆ ಎಂಎಲ್‌ಸಿ ಆಗಿದ್ದರೂ ಕ್ಷೇತ್ರಕ್ಕೆಂದು ನಯಾಪೈಸೆ ಜೀವ ಸವೆಸದದ್ದು ಗೊತ್ತಿದ್ದ ಜನ ಹೀನಾಯವಾಗಿ ಸೋಲಿಸಿ ಮನೆಗೆ ಕಳಿಸಿದ್ದರು. ಆಗಿಂದಲೇ ಈತ ಜಾತಿರಾಜಕಾರಣದ ಬಾಲ ಹಿಡಿದದ್ದು. ಪಂಚಮಸಾಲಿ ಮಠಕ್ಕೆ ಜಮೀನು, ರೊಕ್ಕ ನೀಡಿದ ಸುಳ್ಳುಗಳನ್ನು ಸಭೆ ಸಮಾರಂಭಗಳಲ್ಲಿ ಹೇಳುತ್ತಾ ನಾವು ಸಮಾಜಕ್ಕೆ ಇಷ್ಟೆಲ್ಲಾ ಮಾಡಿದ್ದೇವೆ, ಆದರೆ ಸಮಾಜದವರು ನಮಗೇನು ಕೊಟ್ಟರು ಎಂಬರ್ಥದಲ್ಲಿ ಎಮೋಷನಲ್ ಬ್ಲ್ಯಾಕ್‌ಮೇಲ್‌ಗೆ ಇಳಿದುಬಿಟ್ಟ. ಈ ಸಲದ ಅವನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದೇ ಇದು. ಹಾಗಂತ ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಶಿವಶಂಕರನೇ ಅದ್ವಿತೀಯ ನಾಯಕ ಎಂದೇನಲ್ಲ. ಅದೇ ಸಮಾಜದ ಸುರೇಶ್ ಗೌಡ ಪತ್ರಕರ್ತನಾಗಿ ಪ್ರಾಮಾಣಿಕ ಮನುಷ್ಯ ಎನ್ನುವ ಇಮೇಜ್ ಹೊಂದಿದ್ದರೂ ಅಪ್ಪ-ಮಗ ಆತ ರಾಜಕೀಯವಾಗಿ ಮೇಲೇಳಲು ಬಿಡಲೇ ಇಲ್ಲ. ಇಂತಹ ಬೂಸಿ ಫ್ಯಾಮಿಲಿಯನ್ನು ಮುಖಂಡರನ್ನಾಗಿಸಿಕೊಳ್ಳುವುದಕ್ಕಿಂತ ಹೊಸಬರನ್ನು ಮುಂದೆ ತರುವ ಪ್ರಯತ್ನ ಮಾಡಬೇಕಾದ್ದು ಮಠ ಕಟ್ಟುವುದಕ್ಕಿಂತ ಮುಖ್ಯವಾದ ಕೆಲಸ ಎನ್ನುವುದನ್ನು ಜನ ಈಗಲಾದರೂ ಅರ್ಥಮಾಡಿಕೊಳ್ಳಬೇಕಿದೆ.

ಇವನ ಮತ್ತೊಂದು ವಂಚಕತನವೆಂದರೆ ಬೇರೆ ಯಾರ್‍ಯಾರದೋ ಕೆಲಸಗಳಿಗೆ ತನ್ನಪ್ಪನ ಲೇಬಲ್ ಅಂಟಿಸಿ ಸಾಧನೆಯ ಸರ್ಟಿಫಿಕೇಟು ಕೊಟ್ಟುಕೊಳ್ಳುತ್ತಿದ್ದಾನೆ. ಹರಿಹರ-ಹಾವೇರಿ ನಡುವಿನ ಸೇತುವೆ ಶಿಥಿಲಾವಸ್ಥೆ ತಲುಪಿ ಭಾರೀ ವಾಹನಗಳು ಹೆದರಿ ಸುತ್ತಿಬಳಸಿ ದೂರದ ಹಾದಿಯಲ್ಲಿ ಸಾಗುತ್ತಿದ್ದವು. ಎಚ್. ಶಿವಪ್ಪ ಕೈಗಾರಿಕಾ ಮಂತ್ರಿಯಾಗಿದ್ದಾಗ ಅದಕ್ಕೊಂದು ಮುಕ್ತಿ ಕಲ್ಪಿಸಬಹುದಿತ್ತು, ಆದರೆ ಆ ಬಗ್ಗೆ ಗಮನವನ್ನೇ ಹರಿಸಲಿಲ್ಲ. ಮುಂದೆ ಡಾ. ವೈ. ನಾಗಪ್ಪ ಕೃಷ್ಣ ಸರ್ಕಾರದಲ್ಲಿ ಮಂತ್ರಿಯಾಗಿದ್ದಾಗ ದುರಸ್ತಿಗೆ 10 ಕೋಟಿಯ ಅನುದಾನ ತಂದಿದ್ದರು. ಅಷ್ಟೊತ್ತಿಗಾಗಲೇ ಸರ್ಕಾರ ಏರುಪೇರಾದ್ದರಿಂದ ಕಾಮಗಾರಿ ನನೆಗುದಿಗೆ ಬಿದ್ದಿತ್ತು. ನಂತರ ಬಿ.ಪಿ. ಹರೀಶ ಶಾಸಕನಾದ ಮೇಲೆ ಟೆಂಡರ್ ಕರೆದು ಮರುಚಾಲನೆ ನೀಡಲಾಗಿತ್ತು. ಆದರೆ ಶಿವಶಂಕರ್ ಸೇತುವೆ ದುರಸ್ತಿಗೆ ಅಪ್ರೂವ್ ಕೊಡಿಸಿದ್ದೇ ನಮ್ಮಪ್ಪ ಎಂಬ ಬೊಗಳೆ ಬಿಡುತ್ತಿದ್ದಾನೆ. ನಗರವನ್ನು ಸೀಳಿಕೊಂಡು ಹೋಗುವ ಬೆಂಗಳೂರು ಹುಬ್ಬಳ್ಳಿ ರೈಲು ಮಾರ್ಗದ ಹಳಿಯ ಪಕ್ಕ ಪ್ಯಾರಲಲ್ ರಸ್ತೆ ನಿರ್ಮಿಸಬೇಕೆಂದು ಸರ್ಕಾರದಿಂದ ಒಪ್ಪಿಗೆ ಪಡೆದದ್ದು 1983ರಲ್ಲಿ ಜನತಾ ಪಾರ್ಟಿಯಿಂದ ಶಾಸಕನಾಗಿದ್ದ ಕೆ. ಮಲ್ಲಪ್ಪ. ಕಾರಣಾಂತರದಿಂದ ಅದು ಈಗ ಜನ್ಮ ಪಡೆಯುತ್ತಿದೆ. ಆದರೆ ಸರ್ಕಾರದಲ್ಲಿ ಈ ಯೋಜನೆಗೂ ಅಪ್ರೂವ್ ಕೊಡಿಸಿದ್ದೂ ನಮ್ಮಪ್ಪನೇ ಅಂತ ಶಿವಶಂಕರ್ ಹೇಳಿಕೊಂಡು ತಿರುಗಾಡುತ್ತಿದ್ದಾನೆ.

ಅಸಲಿಗೆ ಅವನಪ್ಪ ಶಿವಪ್ಪನ ಕುರುಹಾಗಿ ಇದ್ದದ್ದು ಪುರಸಭೆ ಎದುರಿನ 22 ಮಳಿಗೆಗಳು ಮಾತ್ರ. 1995-96ರಲ್ಲಿ ದಳದಿಂದ ಶಿವಪ್ಪ ಮಂತ್ರಿಯಾಗಿದ್ದಾಗ ಹರಿಹರದ ಪುರಸಭೆಯಲ್ಲೂ ದಳ ಅಧಿಕಾರದಲ್ಲಿತ್ತು. ಆಗ ಪುರಸಭೆಯ ಮುಂದೆ ಇದ್ದ ಸುಸಜ್ಜಿತ ಪಾರ್ಕನ್ನು ನೆಲಸಮ ಮಾಡಿ 22 ವ್ಯಾಪಾರಿ ಮಳಿಗೆಗಳನ್ನು ಕಟ್ಟಿ ತನ್ನ ಚೇಲಾಗಳಿಗೆ ಹಂಚಿದ್ದಷ್ಟೇ ಶಿವಪ್ಪನ ಸಾಧನೆಯಾಗಿತ್ತು. ಆದರೆ ಮೊನ್ನೆ ಅಂದರೆ 08.11.2014ರಂದು ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾರ್ಯಾಚರಣೆಯಲ್ಲಿ ಆ ಮಳಿಗೆಗಳನ್ನೂ ಹೊಡೆದು ನೆಲಕ್ಕುರುಳಿಸಲಾಗಿದೆ. ಅಲ್ಲಿಗೆ ಶಿವಪ್ಪನೆಂಬ ಬಡಾಯಿ ಮಾಜಿಮಂತ್ರಿಯ ಕುರುಹುಗಳು ನಾಶವಾದಂತಾಗಿವೆ. ಆದರೇನಂತೆ ಮಗ ಶಿವಶಂಕರ್ ಯಾರಿಗೋ ಹುಟ್ಟಿದ ಕೂಸುಗಳಿಗೆ ತನ್ನಪ್ಪನ ವಾರಸ್ಸುದಾರಿಕೆ ಕೊಟ್ಟು ಘರಾಕು ಹೊಡೆಯುವುದು ಮಾತ್ರ ಬಿಟ್ಟಿಲ್ಲ.

ಉಮಾಪತಿ ಬಹಿರಂಗವಾಗಿ ಸಾರ್ವಜನಿಕ ವೇದಿಕೆಯಲ್ಲಿ ಮಾನ ಕಳೆದ ಮೇಲಾದರು ಶಿವಶಂಕರ್ ಪಾಠ ಕಲಿತು ಬೂಸಿ ಹೊಡೆಯುವುದು ಬಿಡುತ್ತಾನೊ ನೋಡಬೇಕು. ಆದರೆ ಅಪ್ಪಮಕ್ಕಳ ಸುಳ್ಳು ಘರಾಕುಗಳ ಅಸಲಿಯತ್ತು ಜಗಜ್ಜಾಹೀರಾದ ನಂತರ ಅವರ ಮೇಲೆ ಜನ ಇಟ್ಟಿದ್ದ ಅಷ್ಟೋ ಇಷ್ಟೋ ವಿಶ್ವಾಸ ಕೂಡ ತುಂಗಭದ್ರಾ ನದಿಯಲ್ಲಿ ಕೊಚ್ಚಿಹೋಗಿರೋದು ಮಾತ್ರ ಸುಳ್ಳಲ್ಲ.

● ಟಿ.ಎನ್.ಷಣ್ಮುಖ





ಗಂಗೊಳ್ಳಿಗೆ ಬೆಂಕಿಯಿಟ್ಟ ಭಜರಂಗಿ ಭಂಡದ್ವಯರು!!


ಗಂಗೊಳ್ಳಿ ರಾಜ್ಯದ ಪ್ರಮುಖ ಮೀನುಗಾರಿಕಾ ಬಂದರಿರುವ ಊರು. ಭರ್ಜರಿ ಮೀನು ಬಿಸ್ನೆಸ್‌ನಿಂದ ಈ ಹಳ್ಳಿಗೆ ನಗರಗಳ ನೆಗೆಟಿವ್ ಚಹರೆ ಬಂದುಬಿಟ್ಟಿದೆ. ಮೀನು, ಮರಳು, ಮೈ... ಮುಂತಾದ ತರಹೇವಾರಿ ಮಾಫಿಯಾ ಅಡರಿಕೊಂಡಿರುವ ಗಂಗೊಳ್ಳಿಯಲ್ಲಿ ಕೋಮು ಕಲಹಗಾರರ ಪಡೆಯ ಪುಂಡಾಟ ಯಾವಾಗಲೂ ಜೋರು. ಮುಸ್ಲಿಮರು ಗಣನೀಯವಾಗಿರುವ ಈ ಊರಿಗೆ ಬೆಂಕಿಯಿಕ್ಕಿ ಮೈಕಾಯಿಸಿಕೊಳ್ಳಲು ಭಜರಂಗಿ-ಬಿಜೆಪಿ ಕೊಳ್ಳಿ ದೆವ್ವಗಳು ಸದಾ ಸನ್ನದ್ಧವಾಗಿರುತ್ತವೆ!

ಸಂಘಪರಿವಾರದ ಮುಸ್ಲಿಂ ವಿರೋಧಿ ಕಾಳಗಕ್ಕೆ ಇಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮೀನುಗಾರ ಸಂಕುಲದ 'ಖಾರ್ವಿ'ಗಳೇ ಕಾಲಾಳುಗಳು. ಖಾರ್ವಿಗಳು ಆಳ ಸಮುದ್ರಕ್ಕಿಳಿದು ಲಾಂಚುಗಟ್ಟಲೆ ಮೀನು ಬೇಟೆಯಾಡಿ ಧಕ್ಕೆಗೆ ತಂದರೆ ಅದನ್ನು ಖರೀದಿಸಿ ಮಾರುವ ಮಧ್ಯವರ್ತಿಗಳು ಮುಸ್ಲಿಂ ಸಮುದಾಯದವರು ಈ ಎರಡೂ ಮೀನುಗಾರಿಕಾ ಕಸಬುದಾರರ ನಡುವಿನ ವೃತ್ತಿ ಮಾತ್ಸರ್ಯ, ವ್ಯಾಪಾರಿ ವೈಮನಸ್ಸು ಬಳಸಿಕೊಂಡು ಮೀನು ತಿನ್ನುವ ಮೇಲ್ವರ್ಗದ ಕೊಂಕಣಿ 'ಬ್ರಾಹ್ಮಣ'ರು ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಗಂಗೊಳ್ಳಿಯ ಖಾರ್ವಿ-ಸಾಬಿಗಳ ಲಾಗಾಯ್ತಿನ ದಂಧೆ ದ್ವೇಷಾಸೂಯೆಯಲ್ಲಿ ಶಕುನಿ ಮಾಮನ ಪಾತ್ರವಾಡುತ್ತಾ ಈ ಕೊಂಕಣಿಗರು ತಮ್ಮ ವ್ಯಾಪಾರಿ ಹಿತಾಸಕ್ತಿ ಕಾಪಾಡಿಕೊಳ್ಳುತ್ತ ಬಂದಿದ್ದಾರೆ!

ಕೋಮು ಸೂಕ್ಷ್ಮ ಪ್ರದೇಶವೆಂಬ ದೃಷ್ಟಿ ಬೊಟ್ಟು ಇಡಲ್ಪಟ್ಟಿರುವ ಗಂಗೊಳ್ಳಿಯಲ್ಲಿ ಯಾವ ಮತೀಯ ದಂಗೆಯಾದರೂ ಅದರಲ್ಲಿ ಕೊಂಕಣಿಯೊಬ್ಬನ ಕಿತಾಪತಿ ಇದ್ದೇ ಇರುತ್ತದೆ! ಕಳೆದ ನವೆಂಬರ್‌ನ ಕೊನೆಯ ಮೂರ್‍ನಾಲ್ಕು ದಿನ ಇದ್ದಕ್ಕಿದ್ದಂತೆ ಗಂಗೊಳ್ಳಿ ಕೋಮು ಗಂಡಾಂತರಕ್ಕೆ ಸಿಲುಕಿ ಒದ್ದಾಡಿಬಿಟ್ಟಿತು. ವಿನಾಕಾರಣ ಸಾಬಿಗಳ ಮೇಲೆ ಮುಗಿಬಿದ್ದ ಭಜರಂಗಿ ಮತ್ತು ಬಿಜೆಪಿಯ ಮತೋನ್ಮತ್ತರು ರಾಜಕೀಯ ಮೈಲೇಜಿಗೆ ದೊಡ್ಡ ಪಾತಕವನ್ನೇ ಮಾಡಿಮುಗಿಸಿದ್ದಾರೆ! ನಿಷ್ಪಾಪಿ ಮುಸ್ಲಿಮರಿಗೆ ಹೊಡೆದು-ಬಡಿದು ಹಿಂಸಿಸಿ ಅವರ ಕೋಟ್ಯಂತರ ರೂ. ಆಸ್ತಿ-ಪಾಸ್ತಿ ಸುಟ್ಟು ಬೂದಿ ಮಾಡಿ ಕೇಕೆ ಹಾಕಿದ್ದಾರೆ. ಕೋಟಾ ಪತ್ರಕರ್ತ ರಾಘವೇಂದ್ರ ಪೈ ಮತ್ತು ತಿರಸ್ಕೃತ ನಕಲಿ ನಾಯಕ ಗುಡ್ಡೆ ಸುಕುಮಾರ ಶೆಟ್ಟಿಯ ಮತಾಂಧ ತೆವಲಿಗೆ ಪಡಬಾರದ ಪಾಡುಪಟ್ಟ ಗಂಗೊಳ್ಳಿ ಈಗ ಬೂದಿ ಮುಚ್ಚಿದ ಕೆಂಡದಂತಾಗಿದೆ!!

ಹನೀಫ್‌ಗೆ ಹಲ್ಲೆ!

ಗಂಗೊಳ್ಳಿಯಲ್ಲಿ ಹನೀಫ್ ಎಂಬ ಅಡ್ಡ ಕಸುಬಿ ಸಾಬಿಯೊಬ್ಬನಿದ್ದಾನೆ. ಈತ ದನದ ದಂಧೆದಾರನೂ ಹೌದು. ಈತನನ್ನು ಕಂಡಾಗ ಜಗಳಗಂಟ ಸಂಘಿಗಳು ಗುರಾಯಿಸುವುದು-ಅಟಕಾಯಿಸುವುದು ನಿತ್ಯ ಕರ್ಮ! ಹನೀಫನ ಹಿಡಿದು ಬಡಿದರೆ ಸಾಬಿಗಳು ಕೆರಳುತ್ತಾರೆ; ಆಗ ಕೋಮು ಗಲಭೆ ಭುಗಿಲೇಳುತ್ತದೆ. ಆ ಕಿಚ್ಚಲ್ಲಿ ತಮ್ಮ ರಾಜಕೀಯ-ಆರ್ಥಿಕ ಹಿಡನ್ ಅಜೆಂಡಾಗಳು ಈಡೇರುತ್ತವೆಂಬ ಸ್ಕೆಚ್ಚು ಬಿಜೆಪಿ-ಭಜರಂಗಿ ಭಂಡರದು. ಹನೀಫ್ ಕದ್ದು ದನ ತಂದು ಕಡಿಯುತ್ತಾನೆಂಬ ಗುಲ್ಲೆಬ್ಬಿಸಿ ಸಂಜೆಯಾಗುತ್ತಲೇ ಸಂಘ ಪರಿವಾರಿಗಳು ಪಹರೆ ನಡೆಸುವುದು ಹಲವು ದಿನಗಳಿಂದ ನಡೆದೇ ಇತ್ತು. ಕಳೆದ ನವೆಂಬರ್ 28ರಂದು ಹನೀಫ್ ಮೇಲೆರಗಲು ಚೆಡ್ಡಿಗಳು ಗೋಧೂಳಿ ಮುಹೂರ್ತ ಫಿಕ್ಸ್ ಮಾಡಿಕೊಂಡಿದ್ದರು.



ಸುಕುಮಾರ ಶೆಟ್ಟಿ

ಆದರೆ ರಾತ್ರಿ ಹೊತ್ತಿಗೆ ಗಣೇಶ್ ಶೆಣೈ, ವೀರು ಶೆಣೈ, ನರೇಶ್ ಕಿಣಿ, ಸಿದ್ದು ನಾಯ್ಕ ವಗೈರೆ ಬರೋಬ್ಬರಿ ಒಂಬತ್ತು ಹಿಂದೂ ಹರಾಮಿಗಳ ಗ್ಯಾಂಗ್ ಕೈಗೆ ಹನೀಫ್ ಸಿಕ್ಕಿದ್ದಾನೆ. ಇಲಿಯಾಸ್ ಎಂಬವನೊಂದಿಗೆ ಬೈಕಲ್ಲಿ ಮನೆಯತ್ತ ಹೋಗುತ್ತಿದ್ದ ಹನೀಫ್‌ನನ್ನು ರಾಮಮಂದಿರದ ಬಳಿ ರಾತ್ರಿ 9.30ಕ್ಕೆ ಅಡ್ಡ ಹಾಕಿದ ಭಜರಂಗಿ ರೌಡಿಗಳು ಆತನಿಗೆ ಸುಖಾಸುಮ್ಮನೆ ಹೊಡೆದಿದ್ದಾರೆ; ಇಲಿಯಾಸ್‌ಗೂ ತದುಕಿದ್ದಾರೆ. ಇಲಿಯಾಸ್ ಎರಡೇಟು ಬೀಳುತ್ತಿದ್ದಂತೆಯೇ ತಪ್ಪಿಸಿಕೊಂಡರೆ ಹನೀಫ್‌ನ ಜೀವ ಹಿಂಡಿದ್ದಾರೆ. ಅದ್ಹೇಗೂ ಹಿಂದೂ ಪಾತಕಿಗಳ ಕೈಯಿಂದ ಬಚಾವಾಗಿ ಹೋದ ಹನೀಫ್ ಬಳಗದ ಬಗ್ಗೆ ಹಲ್ಲೆಕೋರರಿಗೆ ಭಯವಿತ್ತು,

ಕಮ್ಯುನಲ್ ಪತ್ರಕರ್ತನ ಪ್ರವೇಶ!

ಹನೀಫ್‌ಗೆ ಹೊಡೆದ ನವಗ್ರಹಗಳ ಪಡೆ ತಕ್ಷಣ ತಮ್ಮ ಚಾಂಡಾಲ ಗುರು ರಾಘವೇಂದ್ರ ಪೈಗೆ ವರದಿ ಒಪ್ಪಿಸಿದ್ದಾರೆ. ಗಂಗೊಳ್ಳಿಯ ಸಮಸ್ತ ಹಿಂದೂತ್ವದ ಗೂಂಡಾಗಳಿಗೆಲ್ಲ ಈ ಪೈ ಮಾಮನೇ ಬಾಸ್! ಪೆಟ್ಟು ತಿಂದ ಹನೀಫ್ ಪೊಲೀಸ್ ಕಂಪ್ಲೇಂಟು ಕೊಡಬಹುದು ಅಥವಾ ಸಾಬಿಗಳ ತಂಡ ಕಟ್ಟಿಕೊಂಡು ಬಂದು ಪ್ರತಿ ದಾಳಿ ಮಾಡಬಹುದು ಎಂಬ ಲೆಕ್ಕಾಚಾರ ಹಾಕಿದ ನಕಲಿ ಪತ್ರಕರ್ತ ರಾಘವೇಂದ್ರ ಪೈ ತಕ್ಷಣ ಪೊಲೀಸ್ ಠಾಣೆಗೆ ಹೋಗಿದ್ದಾನೆ. ಅಲ್ಲೆಲ್ಲೂ ಹನೀಫ್ ಸಂಗಡಿಗರು ಕಾಣದಿದ್ದಾಗ ಸಾಬರ ಕೇರಿಗೊಂದು ರೌಂಡು ಹೊಡೆದು ಬಂದಿದ್ದಾನೆ. ಹನೀಫ್ ಅಲ್ಲೇ ಎಲ್ಲೋ ಅಡ್ಡೆ ಹಾಕಿ ಕುಂತಿದ್ದು ಆತನಿಗೆ ಕಂಡಿದೆ. ದೂರದಲ್ಲಿ ನಿಂತು ಹನೀಫ್ ಬಳಗದ ಚಲನವಲನ ನೋಡುತ್ತ ಗಳಿಗೆಗೊಮ್ಮೆ ಮೊಬೈಲ್ ಎತ್ತಿ ಯಾರ್‍ಯಾರದೋ ಬಳಿ ಮಾತಾಡಿದ್ದಾನೆ.

'ಹೊಸ ದಿಗಂತ' ಎಂಬ ಚೆಡ್ಡಿ ಮುಖವಾಣಿಯ ಪತ್ರಕರ್ತ ತಾನೆಂದು ಇಡೀ ಗಂಗೊಳ್ಳಿಯಲ್ಲಿ ಭಯೋತ್ಪಾದನೆ ನಡೆಸುತ್ತಿದ್ದ ರಾಘು ಪೈ ಮೇಲೆ ಸಾಬರಿಗೂ ಸಹಜವಾಗೇ ಅನುಮಾನಗಳಿದ್ದವು. ಆತ ಫೋನಾಯಿಸಿ ಹಿಂದೂ ಹುಡುಗರ ಕರೆಸಿ ಮತ್ತೆ ದಾಳಿಗೆ ಸಂಚು ಮಾಡುತ್ತಿದ್ದಾನೆಂಬ ಸಂಶಯ ಸಾಬರಲ್ಲಿ ಮೂಡಿದೆ. ಆತನ ಬಳಿ ಹೋಗಿ "ನೀನ್ಯಾಕೆ ಈ ಅಪರಾತ್ರಿಯಲ್ಲಿ ಇಲ್ಲಿಗೆ ಬಂದಿದ್ದೀಯಾ...? ಯಾರಿಗೆ ಫೋನು ಮಾಡ್ತಿದ್ದೀಯಾ....?" ಎಂದು ಸಾಬರ ಪೋರರು ಕಿತಾಪತಿ ಪತ್ರಕರ್ತ ರಾಘು ಮಾಮನಿಗೆ ಕೇಳಿದ್ದಾರೆ.

ಇದಕ್ಕೆ ಸೊಕ್ಕಿನಿಂದಲೇ ಆತ ಉತ್ತರಿಸಿದ್ದಾನೆ. "ನಾನು ಪತ್ರಕರ್ತ... ನಿಮ್ಮ ಹೊಡೆದಾಟದ ವರದಿ ಮಾಡಲು ಬಂದಿದ್ದೇನೆ.... ನಂಗೆ ಕೇಳಲಿಕ್ಕೆ ನೀವ್ಯಾರು... ನಿಮ್ಗೆ ಪಾಠ ಕಲಿಸ್ತೇನೆ...." ಎಂದು ಗುಟುರು ಹಾಕಿದ್ದಾನೆ. ಮಾತಿಗೆ ಮಾತು ಬೆಳೆದಿದೆ. ರಾಘು ಪದೇಪದೇ ತಮ್ಮ ಸಮುದಾಯಕ್ಕೆ ತೊಂದರೆ ಕೊಡುವ ಕೋಮು ಕರಾಮತ್ತು ಮಾಡೋದು, ಈಚೆಗೆ ನಡೆದ ಗ್ರಾಮಸಭೆಯಲ್ಲಿ ಸಾಮಾಜಿಕ-ಕಾರ್ಯಕರ್ತನೂ-ಫ್ರೀಲ್ಯಾನ್ಸ್ ವರದಿಗಾರನೂ ಆಗಿರುವ ಜನಪರ ಸಾಬರ ಹುಡುಗ ಇಬ್ರಾಹಿಂಗೆ ಕಾಟ ಕೊಟ್ಟಿದ್ದು, ಮೊನ್ನೆ-ಮೊನ್ನೆ ಸಾಬರ ಏರಿಯಾದ ಬಸ್ ನಿಲ್ದಾಣ ಒಂದರಲ್ಲಿ ಚೆಡ್ಡಿ ಕುಲ ಗುರು ಸಾವರ್ಕರ್‌ನ ಚಿತ್ರವಿರುವ ದೊಡ್ಡ ಗೋಡೆ ಗಡಿಯಾರ ಹಠದಿಂದ ನೇತು ಹಾಕಿಸಿದ್ದು.... ಇಂಥದೆಲ್ಲ ಆ್ಯಂಟಿ ಮುಸ್ಲಿಮ್ ಹಿಕಮತ್ತುಗಳು ಸಾಬರ ಹುಡುಗರಿಗೆ ತಂತಾನೆ ನೆನಪಾಗಿದೆ. ಸಮಾ[...] ತದುಕಿದ್ದಾರೆ ಆ ಹುಂಬ ಹುಡುಗರು. ಆಗ ಕೇರಿಯ[...] ಸಜ್ಜನ ಸಾಬರೇ ನಿದ್ದೆಯಿಂದೆದ್ದು ಬಂದು ಅಧಿಕ[...] ರಾಘು ಪೈನ ಬಚಾಯಿಸಿ ಸುರಕ್ಷಿತವಾಗಿ [...] ಮುಟ್ಟಿಸಿದ್ದಾರೆ. ಚಪಾತಿ ಆಗುತ್ತಿದ್ದ ರಾಘು ಪೈ[...] ಕಾಪಾಡಿದ್ದೇ ಮುಸ್ಲಿಮರು!!

ಪರಸ್ಪರ ಕಂಪ್ಲೇಂಟು

ಎರಡೂ ಕಡೆಯವರು ಪರಸ್ಪರರ ಮೇಲೆ ದ[...] ದಾಖಲಿಸಿ ರಾತ್ರಿ ಮನೆಗೆ ಹೋಗಿದ್ದಾರೆ. [...] ಬೆಳಗಾಗುತ್ತಲೇ ಗಂಗೊಳ್ಳಿ ಪೇಟೆಯಲ್ಲಿ ಒಂಥರಾ ಕಮ[...] ಟೆನ್ಷನ್ ಶುರುವಾಗಿದೆ. ಎರಡೂ ಕಡೆಯಲ್ಲಿ ಅವ[...] ಅಸಮಾಧಾನ-ಪ್ರತಿಕಾರದ ಗುಂಪುಚರ್ಚೆ ಆರಂಭವ[...] ಎಸ್‌ಐ ಗೋವರ್ಧನ್ ಗಸ್ತು ಹೊಡೆವಾಗಲೇ ನ[...] ಕಿಣಿ ಎಂಬ ಭಜರಂಗಿಯ ತೂಫಾನ್ ಗಾಡಿಯಲ್ಲಿ [...] ಆರೆಂಟು ಹಿಂದೂ ಘಂಟರ್‌ಗಳು ಸಾಬರಿಗೆ ಚ[...] ಹಾಕಿದ್ದಾರೆ; "ರಾಘವೇಂದ್ರ ಪೈಗೆ ಹೊಡೆದಿದ್ದೀ[...] ಬಡ್ಡಿ ಸಮೇತ ತೀರಿಸ್ತೇವೆ... ಹುಷಾರ್!" ಎಂದು [...] ಸಾಹೇಬರ ಎದುರೇ ಆವಾಜ್ ಮಾಡಿದ್ದಾರೆ. [...] ಬೋಳಿ ಮಕ್ಕಳಿಗೆ ಬಿಡುವುದಿಲ್ಲ..." ಎಂದು ಆರುಚಾರಿ[...] ಅಂದು (29.11.2014) ಗಂಗೊಳ್ಳಿಯಲ್ಲಿ ಸಾಬರಿಗಿ[...] ಹಿಂದೂಗಳೇ ಹೆಚ್ಚು ಉದ್ವಿಗ್ನತೆಯಲ್ಲಿ ಸೇಡು ತೀರಿಸಿಕೊ[...] ಹಠದಲ್ಲಿ ಅಂಡಲೆಯ ತೊಡಗಿದ್ದರು.

ಸುಕುಮಾರ ಶೆಟ್ಟಿ ಪ್ರಚೋದನೆ!

ಇಷ್ಟಾಗುವ ಹೊತ್ತಿಗೆ ಅದೆಲ್ಲಿಂದಲೋ ಬೈಂ[...] ಬಿಜೆಪಿಯ ತಿರಸ್ಕೃತ ಮುಖಂಡಮಣಿ ಗುಡ್ಡೆ ಸುಕು[...] ಶೆಟ್ಟಿ ಗಂಗೊಳ್ಳಿಯ ಹಿಂದೂ ಹುಡುಗರ ಅ[...] ಪ್ರತ್ಯಕ್ಷನಾಗಿದ್ದಾನೆ. ಗಂಗೊಳ್ಳಿಯ ಹಿಂದೂ ಹುಡುಗರ [...] ಹುಂಬತನ ಬಳಸಿಕೊಂಡು ಬೈಂದೂರು ಬಿಜೆಪಿ[...] ತನ್ನ ಎದುರಾಳಿಗಳಾದ ಬಾಬು ಹೆಗ್ಡೆ, ಮಾಜಿ [...] ಲಕ್ಷ್ಮೀನಾರಾಯಣರ ಬಗ್ಗು ಬಡಿದ ಸ್ಕೆಚ್ ಹಾಕಿಕ[...] ಸುಕುಮಾರ ಶೆಟ್ಟಿ ಗಂಗೊಳ್ಳಿಗೆ ವಕ್ಕರಿಸಿದ್ದ. ಕಳೆದ [...] ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ಗೋಪಾಲ ಪೂಜಾರಿ [...] ದೊಡ್ಡ ಅಂತರದಲ್ಲಿ ಮಣ್ಣು ಮುಕ್ಕಿದ್ದ ಸುಕುಮಾರ [...] ಪಕ್ಷದಲ್ಲೇ ವಲಸಿಗನೆಂದು ದೂರ ಇಡುವ ದೊಡ್ಡ ಗ[...] ಕಾಟ ಶುರುವಾಗಿತ್ತು.

ಬೈಂದೂರು ಬಿಜೆಪಿಯಲ್ಲಿ ತಾನು ಏಕಮೇವ[...] ಯನಾಗಬೇಕೆಂದರೆ ಸಾಬರ ವಿರುದ್ಧ ಹಿಂದೂ ಹು[...] ಛೂ ಬಿಡದೆ ಬೇರೆ ಗತಿಯೇ ಇಲ್ಲವೆಂಬ ನಿ[...] ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸೋತ ತಕ್ಷಣವೇ ಆತ ಬ[...] ಹಿಂದೂ ಹುಡುಗರಲ್ಲಿ ಕೋಮು ಕ್ರೌರ್ಯ ಕೆರಳಿಸಿ [...] ಆಗುವ ಅವಕಾಶ ಸುಕುಮಾರ ಶೆಟ್ಟಿಗೆ ಗಂ[...] ಗಲಭೆಯಲ್ಲಿ ಸಿಕ್ಕಿದೆ. ಆತ ಹಿಂದೂ ಹುಡು[...]





“ಪತ್ರಕರ್ತ” ಪೈ ಪಾತಕ ಜಾತಕ!

ಮತ್ಸಗಂಧಿ ಗಂಗೊಳ್ಳಿಯ ಸೌಹಾರ್ದತೆ-ಶಾಂತಿ-
...ವಿಯ ಬದುಕಿಗೆ ಗಂಡಾಂತರಕಾರಿಯಾಗಿ ಅವತರಿಸಿರು
...ನ ಹೆಸರು ರಾಘವೇಂದ್ರ ಪೈ! ಈತ ಸ್ವಯಂಘೋಷಿತ
...ಕರ್ತ. ಗಂಗೊಳ್ಳಿಯ ಅಷ್ಟೂ ಪತ್ರಿಕೆಗೆ ತಾನೇ
...ಮೇವಾದ್ವಿತೀಯ ಪತ್ರಕರ್ತ ಪ್ರಭೃತಿ ಎಂಬಂತೆ ಪೋಸು
...ಡುವ ಪೈ ಮಾಮ ಈ ಅಸ್ತ್ರ ಬಳಸಿಯೇ ಗಂಗೊಳ್ಳಿಯಲ್ಲಿ
...ಕೋತ್ಪಾದನೆ ನಡೆಸಿದ್ದಾನೆ. ಪೈ ಹುಟ್ಟಾ ಹರಾಮಿ ಚೆಡ್ಡಿ,
...ನಕೊಂಡು ಕೋಲ್ಡ್ ಡ್ರಿಂಕ್ಸ್ ಅಂಗಡಿ ಇಟ್ಟುಕೊಂಡಿ
ಈತ ಸಂಘ ಪರಿವಾರದ ಗಂಗೊಳ್ಳಿ ಏರಿಯಾದ
...ಕೇವಾರಿ ಕೇಸರಿ ವಿಂಗ್‌ಗಳೆಲ್ಲದರ ರಿಂಗ್‌ಮಾಸ್ಟರ್!
...ಖತರ್‌ನಾಕ್ ಕೋಮುವಾದಿಯಾದ ಪೈ ಗೋಲ್
...ರ್ ಚೆಡ್ಡಿಯೂ ಹೌದು. ಈತ ಕೇಸರಿ ಲುಂಗಿ ಎತ್ತಿ
ಹೊರಟನೆಂದರೆ ಗಂಗೊಳ್ಳಿಯ ಯಾವುದಾದರೂ
...ಶದಲ್ಲಿ ಕೋಮು ಕೊಳ್ಳಿ ಹೊತ್ತಿಕೊಳ್ಳುತ್ತದೆಂದೇ
...ಥನೆ! ಈತ ಹಿಂದೆಂದೋ “ಹೊಸ ದಿಗಂತ”
... ಸಂಘ ಪರಿವಾರದ ಬುಲೆಟಿನ್‌ನಲ್ಲಿ ವರದಿಗಾರನಾಗಿ
...ತ. ಈಗ ಅದೂ ಇಲ್ಲ. ಆದರೂ ತಾನು ಎಲ್ಲ
...ಗಳ ಪ್ರತಿನಿಧಿ ಎಂದೇ ಭೋಂಗು ಬಿಟ್ಟು ಆಯಕಟ್ಟಿನ
...ರಿ ಕಚೇರಿಗಳಲ್ಲಿ ಮತ್ತು ಗಂಗೊಳ್ಳಿಯ
...ಮಾಜಿಕ-ಧಾರ್ಮಿಕ-ರಾಜಕೀಯ ಪುಢಾರಿ ರಂಗದಲ್ಲಿ
...ಮತ್ತು ನಡೆಸುತ್ತಿದ್ದಾನೆ.


ಪೈ ಮಾಮ ಟೋಪ್ಪಿಗೆ ಹಾಕುವ ಕುಕಲೆಯಲ್ಲಿ ನಿಸ್ಸೀಮ.
...ಮೊಂದರ ಉದ್ಧಾರದ ಹೆಸರಲ್ಲಿ ವಂತಿಗೆ ಎತ್ತಲು
...ಬಿದ್ದಿದ್ದ ಈ ದಗಲುಬಾಜಿ ಸಾತ್ ನಂಬರಿ ಡೂಪ್ಲಿ
ರಸೀದಿ ಹಲವರಿಗೆ ನೀಡಿ ದುಡ್ಡು ದೋಚಿದ್ದಾನೆ.
...ಗಳಿಗೆಂದು ಜಾಹೀರಾತು ಪಡೆದು ವಂಚಿಸಿದ್ದಾನೆ.
...ಮು ದಳ್ಳುರಿ ಎದ್ದರೆ ಈತನ ಹಲವು ತಿಂಗಳ
...ನ ಈ ಗೊಂದಲದಲ್ಲೇ ನಡೆದುಹೋಗುತ್ತದೆ.
...ವಾರು ಸಾಗಣೆ ಕಂಡರೆ-ಕೇಳಿದರೆ ಅದೇ ಗೋರಕ್ಷಣೆ
...ಲ್ಲಿ ಲಗುಬಗೆಯಲ್ಲಿ ಓಡುವ ಈತನಿಗೆ ಅದೇ ದೊಡ್ಡ
...ಆಗಿದೆ. ಸಂಘ ಪರಿವಾರದ-ಬಿಜೆಪಿಗಳ ತುತ್ತೂರಿ
...ದ್ದು ಬಿಟ್ಟರೆ ಈತ ಜನಪರವಾದ ನಾಲ್ಕೇ ನಾಲ್ಕು
ಬರೆದ ದಾಖಲೆ ಇಲ್ಲ. ಆದರೂ ಭಜರಂಗಿಗಳಿಗೆ
“ದಿ ಗ್ರೇಟ್ ಜರ್ನಲಿಸ್ಟ್!!

...ದಿನಾದರೊಂದು ಕೋಮು ಕಾರ್ಯಾಚರಣೆ
...ಕದಿದ್ದರೆ ಪೈಗೆ ತಿಂದ ಅನ್ನ ಮೈಗೆ ಹತ್ತುವುದೇ
ಕೆಲವು ವರ್ಷದ ಹಿಂದೆ ಈತನ ಶನಿಸಂತಾನ

ಗಂಗೊಳ್ಳಿ ಚರ್ಚ್‌ಗೆ ಗಂಟುಬಿದ್ದಿತ್ತು. ಈ ಚರ್ಚ್‌ನಲ್ಲಿ ವರ್ಷಕ್ಕೊಮ್ಮೆ ನಡೆಯುವ “ಪೇಸ್ತ್”ನಲ್ಲಿ ಎಲ್ಲ ಧರ್ಮದವರೂ ಮೊಂಬತ್ತಿ ಹಚ್ಚಿ ಶ್ರದ್ಧೆ-ಭಕ್ತಿಯಿಂದ “ತೆರಾಲಿ” ಆಚರಿಸುತ್ತಾರೆ. ಹಿಂದೂಗಳು ಸದ್ರಿ ತೆರಾಲಿಗೆ ಹೋಗದಂತೆ ಈ ದೊಣ್ಣೆ ನಾಯಕ ಫರ್ಮಾನು ಹೊರಡಿಸಿದ್ದ. ಪೇಸ್ತ್‌ಗೆ ಹೋಗದಂತೆ ಹಿಂದೂಗಳನ್ನು ತಡೆಯಲು ಈತ ಮತಾಂಧ ಕರಪತ್ರ ಹೊರಡಿಸಿದ್ದ. ಈತನ ಕೊಳಕು ಮನಸ್ಸು ಅರ್ಥವಾದ ಹಿಂದೂಗಳು ತೆರಾಲಿ ನಿಲ್ಲಿಸಲಿಲ್ಲ. ಏನೂ ಮಾಡಲಾಗದ ಪೈ ಮಾಮ ಇವತ್ತಿಗೂ ಈ ತೆರಾಲಿಗೆ ಕಲ್ಲು ಹಾಕುವ ರಹಸ್ಯ ಅಭಿಯಾನ ಮಾತ್ರ ಬಿಟ್ಟಿಲ್ಲ.

ತೀರಾ ಈಚೆಗೆ ಗಂಗೊಳ್ಳಿಯ ಸಾಬರ ಪ್ರಾಬಲ್ಯದ ಬಸ್‌ಸ್ಟ್ಯಾಂಡ್ ಒಂದರಲ್ಲಿ ಚೆಡ್ಡಿಗಳ “ಕುಲಗುರು” ಸಾವರ್ಕರ್‌ನ ಭಾವಚಿತ್ರವಿರುವ ಗಡಿಯಾರ ನೇತು ಹಾಕಲು ಹೋಗಿದ್ದ. ಸಾಬಿಗಳ ಕೆಣಕುವ ದುರುದ್ದೇಶದ ಈ ಗಡಿಯಾರಕ್ಕೇನಾದರೂ ಒಂದು ಕಲ್ಲು ಬಿದ್ದರೆ ತನ್ನ ಹಿಡನ್ ಅಜೆಂಡಾ ಕಾರ್ಯಗತಗೊಳಿಸಲು ಅನುಕೂಲ ಎಂಬುದು ಈ ಪಾಪಿಯ ಲೆಕ್ಕಾಚಾರ. ಸಾವರ್ಕರ್‌ನ ಗಡಿಯಾರಕ್ಕೆ ಒಂದಿಷ್ಟು ಪ್ರಜ್ಞಾವಂತರು-ಪ್ರಗತಿಪರ ಸಾಬರ ಹುಡುಗರು ವಿರೋಧ ವ್ಯಕ್ತಪಡಿಸಿದರು. ಸಾವರ್ಕರ್ ಗಡಿಯಾರ ಹಾಕೋದಿದ್ರೆ ಟಿಪ್ಪು ಸುಲ್ತಾನ್ ಚಿತ್ರದ ಗಡಿಯಾರವನ್ನು ಹಾಕೋಣವೆಂದು ಹೇಳಿದರು. ಆದರೆ ಅದಕ್ಕೆ ಪೈ ಆಸ್ಪದ ಕೊಡಲಿಲ್ಲ. ಹಿಂದೂತ್ವದ ಹೆದರಿಸುವ ತಂತ್ರ ಪ್ರಯೋಗಿಸಿ ಬಲಾತ್ಕಾರದಿಂದ ಸಾವರ್ಕರ್ ಗಡಿಯಾರ ಈತ ಹಾಕಿದ್ದಾನೆ.

ಹಿಂದೊಮ್ಮೆ ಗಂಗೊಳ್ಳಿ ಗ್ರಾಮ ಪಂಚಾಯ್ತಿ ಮೆಂಬರನಾಗಿದ್ದ ಈತ ಈಗಲೂ ಪಂಚಾಯ್ತಿ ಆಡಳಿತದಲ್ಲಿ ಮೂಗು ತೂರಿಸುತ್ತಿದ್ದಾನೆ. ಬಿಜೆಪಿ ಆಡಳಿತದ ಪಂಚಾಯ್ತಿಯ ಅಧ್ಯಕ್ಷೆ ಪಾಪದ ಹೆಂಗಸು. ತನ್ನ ಮೇಲ್ವರ್ಗದ ಕೊಂಕಣಿ ಟ್ರಿಕ್ಕುಗಳಿಂದ ಆ ಮೀನುಗಾರ ಹೆಂಗಸನ್ನು ದಾರಿ ತಪ್ಪಿಸುತ್ತಿದ್ದಾನೆ ಈ ಶಕುನಿ ಮಾಮ. ಗಂಗೊಳ್ಳಿಯಲ್ಲಿ ಸಾಹಿಲ ಆನ್‌ಲೈನ್, ಗಂಗೊಳ್ಳಿ ಟೈಮ್ಸ್ ಎಂಬ ಸುದ್ದಿ ವೆಬ್‌ಸೈಟ್‌ಗಳನ್ನು ನಡೆಸುತ್ತಿರುವ ಪತ್ರಕರ್ತ ಇಬ್ರಾಹಿಂಗೆ




ರಾಘವೇಂದ್ರ ಪೈ


ಈತ ಗ್ರಾಮ ಸಭೆಗೆ ಬರದಂತೆ ತಡೆದಿದ್ದ. ಸಭೆಗೆ ಪತ್ರಕರ್ತರ ಪ್ರವೇಶವಿಲ್ಲ ಎಂದು ಅಧ್ಯಕ್ಷೆಯಿಂದ ಹೇಳಿಸಿದ್ದ ಪೈ ಮಾಮನ ಮೂಲ ಉದ್ದೇಶ ಗಂಗೊಳ್ಳಿಯಲ್ಲಿ ತನ್ನ ಬಿಟ್ಟರೆ ಮತ್ತೊಬ್ಬ ಪತ್ರಕರ್ತ ಇರಬಾರದೆಂಬುದಾಗಿತ್ತು.

ಈ ಸೆಕ್ಯುಲರ್ ಇಬ್ರಾಹಿಂನ ಕಂಡರೆ ಕಮ್ಯುನಲ್ ಪೈಗೆ ಒಳಗೊಳಗೇ ಅಸೂಯೆ ಬಾಧಿಸುತ್ತದೆ. ಇಬ್ರಾಹಿಂ **24x7 Help line** ಎಂಬ ಸೇವಾಸಂಸ್ಥೆ ನಡೆಸುತ್ತಿದ್ದಾನೆ. ಜಾತಿ-ಧರ್ಮ ನೋಡದೆ ಎಲ್ಲ ಸಮುದಾಯದ ಅನಾಥ-ಅಸಹಾಯಕ ಮೃತದೇಹಗಳನ್ನು ಸಂಬಂಧಿಕರಿಗೆ ಮುಟ್ಟಿಸುವ ಅಥವಾ ಸಂಸ್ಕಾರ ಮಾಡುವ ಕೆಲಸ ಈ ಇಬ್ರಾಹಿಂ ಮಾಡುತ್ತಿರುವುದು ಕಟ್ಟಾರ್ ಹಿಂದೂ ಬುದ್ಧಿಯ ಪೈಗೆ ಸಹಿಸಲಾಗುತ್ತಿಲ್ಲ. ಹೀಗಾಗಿ ಈತ ಅಡಗಿ ಕುಳಿತು ಇಬ್ರಾಹಿಂನ ಸತಾಯಿಸಲು ಮಾಡಬಾರದ್ದೆಲ್ಲ ಮಾಡುತ್ತಿದ್ದಾನೆ. ಸದ್ಯದಲ್ಲೇ ಆರೆಸ್ಸೆಸ್‌ನ ಬೈಠಕ್ ಒಂದನ್ನು ಗಂಗೊಳ್ಳಿಯಲ್ಲಿ ಮಾಡಿ ಹಿಂದೂತ್ವದ ದಾದಾಗಿರಿ ವರ್ಚಸ್ಸು ವೃದ್ಧಿಸುವ ಯೋಚನೆ ಹಾಕಿಕೊಂಡಿದ್ದಾನೆ.

ಗಂಗೊಳ್ಳಿಯಲ್ಲಿ ಸೋಕಾಲ್ಡ್ ಪತ್ರಕರ್ತ-ಚೆಡ್ಡಿ ಚತುರ ರಾಘು ಪೈ ಎಲ್ಲೇ ಕಾಲು ಹಾಕಲಿ, ಅಲ್ಲಿ ಕೋಮು ಭಾನ್ಗಡಿ ಗ್ಯಾರಂಟಿ ಎಂಬಂತಾಗಿದೆ. ದುರಂತವೆಂದರೆ ಗಂಗೊಳ್ಳಿ ಪೊಲೀಸರೂ ಈತನ ಅವ್ಯವಹಾರ ಅವಾಂತರ-ಅಧಿಕಪ್ರಸಂಗ-ಕಮ್ಯುನಲ್ ಪಾತಕ ಕಂಡೂಕಾಣದಂತಿದ್ದಾರೆ. ಈ ಪೈ ಮಾಮನಿಗೆ ಅಂಕುಶ ಇಡದೇ ಗಂಗೊಳ್ಳಿಯಲ್ಲಿ ನೆಮ್ಮದಿ-ಸುವ್ಯವಸ್ಥೆ ಸಾಧ್ಯವೇ ಇಲ್ಲ! ಈ ಭಯಾನಕ ಭಜರಂಗಿಗೆ ಬುದ್ಧಿ ಕಲಿಸುವ ತಾಕತ್ತು ಜಿಲ್ಲಾ ಎಸ್ಪಿ ರಾಜೇಂದ್ರ ಪ್ರಸಾದ್ ಸಾಹೇಬರಿಗಿದೆಯಾ?



ಪ್ರತಿಭಟನಕಾರರನ್ನು ಹುರಿದುಂಬಿಸುತ್ತಿರುವ ಸುಕುಮಾರ ಶೆಟ್ಟಿ



...ವರ್ಧನ್

...ಸಿದ್ದಾನೆ. ಆ ಬಿಸಿ ರಕ್ತದ ಹುಡುಗರೆದುರು ಪ್ರಚೋದನಾ
...ಮಾತು-ಕತೆ ನಡೆಸಿದ್ದಾನೆ. “ನೀವು ಹಿಂದೂ ಹುಡುಗರು
...ಅಲ್ಲ ಮಾರಾಯಾ... ಆ ಸಾಬ್ರು ಮನೆಯೊಳಗೆ ಹೋಗಿ
...ಡಿ... ಹಿಂದೂಗಳಿಗೆ ಹೊಡೆದವರನ್ನು ತಕ್ಷಣ
...ಸದಿದ್ರೆ ಮುಂದೇನಾಗುತ್ತದೋ ಗೊತ್ತಿಲ್ಲ... ಅನಾಹುತ
...ಹಿಂದೂಗಳು ಕಾರಣ ಅಲ್ಲ... ಏನೇ ಆದ್ರೂ ನಾನು
... ರಕ್ಷಣೆಗೆ ನಿಲ್ತೇನೆ....” ಎಂದು ಪುಂಡ ಹುಡುಗರನ್ನು
...ಗಳ ಮೇಲೆ ದಾಳಿ ಮಾಡಲು ಹುರಿದುಂಬಿಸಿದ್ದಾನೆ.
...ಊ ಹುಡುಗರು “ಬೆಂಕಿ ಕಾಳಗ”ಕ್ಕೆ ಸರ್ವ
...ದ್ಧರಾಗಿದ್ದಾರೆ.

ಹಾರ್ಡ್‌ವೇರ್ ಮಾಫಿಯಾ

...ಪುಡ್ರ ಹುಡುಗರು ಸುಕುಮಾರ ಶೆಟ್ಟಿಯ ಮತಾಂಧ
...ಚಿತಾವಣೆಯಿಂದ ಪ್ರಚೋದಿತರಾಗಿ ಸಾಬರ ಹಣಿಯಲು
...ನೆಸುತ್ತಿದ್ದಾರೆಂಬುದು ಸ್ಥಳೀಯ ಕೊಂಕಣಿ ವ್ಯಾಪಾರಸ್ಥರ
...ಹುಣ್ಣಾಕ್ಕೆ ಗೊತ್ತಾಗಿದೆ. ಈ ಪ್ರತೀಕಾರದ ಸನ್ನಿವೇಶ
... ದಗಾಕೋರ ವ್ಯಾಪಾರಿ ಸಾಮ್ರಾಜ್ಯ ವಿಸ್ತರಣೆಗೆ ಬಳಸಿ
...ಲು ಈ ಕೊಂಕಣಿ ಕುಳಗಳು ಪ್ಲಾನ್ ಹಾಕಿದ್ದಾರೆ.
...ಸುಟಿನಲ್ಲಿ ಹೆಚ್ಚು ಸಕ್ರಿಯವಾಗಿದ್ದು ಹಾರ್ಡ್‌ವೇರ್
...ಸಾಯ. ‘ಹಮ್ಜಲಿ’ ಮಂದಿ ಮೂರ್ನಾಲ್ಕು ಹಾರ್ಡ್‌ವೇರ್
...ಡಿ ಗಂಗೊಳ್ಳಿಯಲ್ಲಿದೆ. ಆದರೆ ರಿಜ್ವಾನ್ ಎಂಬ
...ವ ಅಂಗಡಿಯಲ್ಲಿ ಬಿಸ್ನೆಸ್ ಯಾವಾಗಲೂ ಹೆಚ್ಚು.
... ಕೊಂಕಣಿಗಳ ಹೊಟ್ಟೆಯಲ್ಲಿ ಬಹುಕಾಲದಿಂದ ಕಿಚ್ಚು
...ತ್ತು. ಈ ರಿಜ್ವಾನ್‌ಗೆ ಗಿರಾಕಿಗಳು ದೊಡ್ಡ
...ದಲ್ಲಿದ್ದರು.

...ಗಂಗೊಳ್ಳಿಯ ಮುಸ್ಲಿಮರ ಜಮಾತ್ ಕಾಂಪ್ಲೆಕ್ಸ್‌ನಲ್ಲಿ
...ಟ್ಟು ಹತ್ತು ಅಂಗಡಿಗಳಿವೆ. ಇದರಲ್ಲಿ ರಿಜ್ವಾನ್‌ನ
...ವೇರ್ ಅಂಗಡಿಯೂ ಧ್ವಂಸವಾಗುತ್ತದೆ. ಆಗ ತಮ್ಮ

ಅಂಗಡಿಗಳಿಗೆ ಬಿಸ್ನೆಸ್ ವೃದ್ಧಿಯಾಗುತ್ತದೆಂಬ ದೂ(ದು)ರಾಲೋಚನೆ ಹಾರ್ಡ್‌ವೇರ್ ಮಾಫಿಯಾ ಮಾಡಿತ್ತು. **29.11.2014** ರಾತ್ರಿ ಸುಮಾರು **1** ಗಂಟೆ ಹೊತ್ತಿಗೆ ಜಮಾತ್ ಕಾಂಪ್ಲೆಕ್ಸ್ ಹೊತ್ತಿ ಉರಿದಿದೆ. ಪೆಟ್ರೋಲ್ ಸುರಿದು, ರಿಜ್ವಾನ್‌ನ ಅಂಗಡಿಯ ಗ್ಲಾಸ್‌ಗಳೆಲ್ಲ ಒಡೆದು ಬೆಂಕಿ ಹಾಕಲಾಗಿದೆ. ಈ ಬೆಂಕಿಗೆ ರಿಜ್ವಾನ್‌ನ ಹಾರ್ಡ್‌ವೇರ್ ಅಂಗಡಿಯೇ ಗುರಿ ಆಗಿತ್ತೆಂಬುದು ಸುಟ್ಟು ಕರಕಲಾದ ಕಾಂಪ್ಲೆಕ್ಸ್ ಕಂಡವರಿಗೆ ನಿಸ್ಸಂಶಯವಾಗಿ ಖಾತ್ರಿಯಾಗುತ್ತದೆ. ಒಟ್ಟಿನಲ್ಲಿ ಗಂಗೊಳ್ಳಿಗೆ ಕೊಳ್ಳಿ ಇಡಿಸಿದ್ದು ಎಮ್ಮೆಲ್ಲೆಯಾಗುವ ತೀವ್ರ ತೆವಲಿನಲ್ಲಿರುವ ಸುಕುಮಾರ ಶೆಟ್ಟಿಯಾದರೆ, ಆ ಬೆಂಕಿಯಲ್ಲಿ ಬಿಸ್ನೆಸ್ ಷಡ್ಯಂತ್ರ ಮಾಡಿದ್ದು ಕೊಂಕಣಿಗರ ಹಾರ್ಡ್‌ವೇರ್ ಮಾಫಿಯಾ ಎಂಬುದೀಗ ಕುಂದಾಪುರದಲ್ಲಿ ಬಹಿರಂಗ ರಹಸ್ಯ!!

ಪೊಲೀಸರ ನೆರವು

ಹಾರ್ಡ್‌ವೇರ್ ಮಾಫಿಯಾ ಮತ್ತು ಹಿಂದೂತ್ವದ ಹೊಟ್ಟೆಕಿಚ್ಚಿನಲ್ಲಿ ಇಡೀ ಜಮಾತ್ ಕಾಂಪ್ಲೆಕ್ಸ್ ಸುಟ್ಟು ಬೂದಿಯಾಗಿದೆ. ಒಂದೂವರೆಯಿಂದ ಎರಡು ಕೋಟಿ ರೂ. ಹಾನಿಯಾಗಿದೆ. ಕಾಂಪ್ಲೆಕ್ಸ್‌ಗೆ ಬೆಂಕಿ ಬಿದ್ದಾಗ ಸಾಬರು ಜಮೆಯಾಗಿದ್ದರು. ಹಿಂದೂಗಳ ಮೇಲೆರಗಲು ಒಂದು ಗುಂಪು ರೆಡಿಯೂ ಆಗಿತ್ತು. ಆಕ್ರೋಶದಿಂದ ಧುಮುಗುಡುತ್ತಿದ್ದ ಸ್ವ-ಧರ್ಮದ ಹುಡುಗರನ್ನು ಸಾಬರ ಮುಖಂಡರೇ ಸಮಾಧಾನ ಮಾಡಿ ಮನೆಗೆ ಕಳಿಸಿದ್ದಾರೆ. ಇಲ್ಲದಿದ್ದರೆ ಅಂದು ರಾತ್ರಿ ಇಡೀ ಗಂಗೊಳ್ಳಿಗೆ ಜಮಾತ್ ಕಾಂಪ್ಲೆಕ್ಸ್‌ಗೆ ಬಿದ್ದ ಬೆಂಕಿ ವ್ಯಾಪಿಸುವ ಅಪಾಯವಿತ್ತು!

ಗಂಗೊಳ್ಳಿಯ ಪೊಲೀಸರು ಮಾತ್ರ ದನದ ವ್ಯಾಪಾರಿ ಹನೀಫ್ ಮೇಲೆ ನಿಷ್ಕಾರಣವಾಗಿ ಹಲ್ಲೆ ನಡೆದ ಘಟನೆಯಿಂದ ಜಮಾತ್ ಕಾಂಪ್ಲೆಕ್ಸ್ ಹೊತ್ತಿಉರಿವ ಗಳಿಗೆಯ ತನಕವೂ ಹೊಣೆಗೇಡಿಗಳಂತೆ ವರ್ತಿಸಿದ್ದಾರೆ. ಇದಕ್ಕಿಂತ ದೊಡ್ಡ ಅಪರಾಧವೆಂದರೆ, ಹಿಂದೂತ್ವದ ಹರಾಮಿಗಳ ರಕ್ಷಣೆಗೆ ನಿಂತಂತೆ, ಅವರ ಪಾತಕಕ್ಕೆ ಸಹಾಯವಾಗುವಂತೆ ಗಂಗೊಳ್ಳಿ ಪೊಲೀಸರು ‘ಡ್ಯೂಟಿ’ ಮಾಡಿದ್ದಾರೆ. ಸಾಬರ ಕಾಂಪ್ಲೆಕ್ಸ್‌ಗೆ ಬೆಂಕಿ ಬಿದ್ದಾಗ ಕೆರಳಿದ ಸಾಬಿಗಳ ಗಾಯದ ಮೇಲೆ ಬರೆ ಹಾಕುವಂತೆ ಗಂಗೊಳ್ಳಿಯ ಗಾಂಪ ಪಿಎಸ್‌ಐ ಮಾತಾಡಿದ್ದಾನೆ. ಎಸ್‌ಐ ಗೋವರ್ಧನ್ ಪ್ರಕಾರ ಬೆಂಕಿಗೆ ವಿದ್ಯುತ್ ಶಾರ್ಟ್‌ಸರ್ಕ್ಯೂಟ್ ಕಾರಣ.

ಅಂದು ರಾತ್ರಿ ಗಂಗೊಳ್ಳಿಯಲ್ಲಿ ಸರಿಯಾಗಿ ವಿದ್ಯುತ್ ಸರಬರಾಜೇ ಇರಲಿಲ್ಲ. ಕರೆಂಟ್ ಕಣ್ಣಾಮುಚ್ಚಾಲೆ ಆಡುತ್ತಿತ್ತು. ಇಂಥಾದ್ದರಲ್ಲಿ ಶಾರ್ಟ್‌ಸರ್ಕ್ಯೂಟ್ ಸಾಧ್ಯವಾ? ಎಂದರೆ ಪೊಲೀಸರಲ್ಲಿ ಉತ್ತರ ಇಲ್ಲ. ಹಾಗೊಮ್ಮೆ ಶಾರ್ಟ್‌ಸರ್ಕ್ಯೂಟೇ ಎಂದಿಟ್ಟುಕೊಂಡರೂ ಕಾಂಪ್ಲೆಕ್ಸ್‌ನ ಗಾಜುಗಳೆಲ್ಲ ಹೇಗೆ ಪುಡಿಯಾಯ್ತು? ಹಿಂದೂ ಪುಂಡರು ಕಲ್ಲು ಹೊಡೆದು ಗಾಜು ಹುಡಿಯೆಬ್ಬಿಸಿದ್ದಾರೆ. ಆ ಬಳಿಕ ಪೆಟ್ರೋಲ್ ಸುರಿದು ಬೆಂಕಿ ಇಕ್ಕಿದ್ದಾರೆ. ಇದು ಯಾರಿಗಾದರೂ ಕಾಣಿಸುವ ವಾಸ್ತವ ಚಿತ್ರಣ. ಗಂಗೊಳ್ಳಿ ಪೊಲೀಸರಿಗೆ ಮಾತ್ರ ಈ ಸತ್ಯ ಕಾಣಿಸುತ್ತಿಲ್ಲ ಏಕೆ?

ಒಂದು ತರ್ಕದ ಪ್ರಕಾರ ಸ್ಥಳೀಯ ಪೊಲೀಸರು ಹಿಂದೂ ವಿಧ್ವಂಸಕರೊಂದಿಗೆ ಶಾಮೀಲಾಗಿದ್ದರಿಂದಲೇ ಬೆಂಕಿ ಅವಘಡವಾಗಿದೆ. ಅಂದು ರಾತ್ರಿ ಗಸ್ತಿಗೆಂದು ಪೊಲೀಸರನ್ನು ನೇಮಿಸಲಾಗಿತ್ತು. ಜಮಾತ್ ಕಾಂಪ್ಲೆಕ್ಸ್ ಬಳಿಯೇ ಹಲವು ಪೊಲೀಸರು ಬೀಡುಬಿಟ್ಟಿದ್ದರು. ಇವರ ಕಣ್ಣು ತಪ್ಪಿಸಿ ಬೆಂಕಿ ಹಾಕಲು ಸಾಧ್ಯವೇ ಇಲ್ಲ; ಪೊಲೀಸರ ಸಕಲ ಸಹಕಾರದಿಂದಲೇ ಕೊಳ್ಳಿ ದೆವ್ವಗಳು ನಿರಂತರವಾಗಿ ಕುಣಿದಾಡಿ ಸಾಬರ ಕಾಂಪ್ಲೆಕ್ಸ್ ಬೂದಿ ಮಾಡಿವೆ! ಹಾಗಂತ ಈ ಹಿಂದುಗಳೂ ಬಹಳ ಹೆಮ್ಮೆಯಿಂದ ಹೇಳುತ್ತಿದ್ದಾರೆ. ಕರಾವಳಿಯ ಪೊಲೀಸರು ಇನ್ನೂ ಕೇಸರಿಕರಣದಿಂದ ಹೊರಬಂದಿಲ್ಲ ಎಂಬುದಕ್ಕೆ ಗಂಗೊಳ್ಳಿಯ ಕೋಮು ಕ್ರೌರ್ಯ ಜೀವಂತ ಸಾಕ್ಷಿಯಂತಿದೆ. ಸಾಬರ ಮೇಲೆ ನಾನ್‌ಬೇಲಬಲ್ ಕೇಸ್ ಜಡಿದಿರುವ ಪೊಲೀಸರು ಹಿಂದೂ ಹರಾಮಿಗಳನ್ನು ಬೇಲೆಬಲ್ ಕೇಸ್ ಹಾಕಿ ಕಾಪಾಡಿದ್ದಾರೆ. ಗಂಗೊಳ್ಳಿ ಪೊಲೀಸರ ಹಿಂದೂತ್ವದ ಪಾತಕಕ್ಕೆ ಇನ್ನೇನು ಸಾಕ್ಷಿ ಬೇಕು?! ಎರಡೂ ಕೋಮಿನವರ ಮೇಲೆ ತಲಾ ಸಮಸಂಖ್ಯೆಯ ಪ್ರಕರಣ ದಾಖಲಿಸಿ ಬ್ಯಾಲನ್ಸ್ ಮಾಡಿರುವ ಹೇತ್ಲಾಂಡಿ ಪೊಲೀಸರು ಯೂನಿಫಾರ್ಮ್‌ನ ಕಿಮ್ಮತ್ತು ಕಳೆದಿರುವುದು ದುರಂತವೇ ಸರಿ. ಬೆಂಕಿ ನವಾಬರ ಬಂಧಿಸಲಾಗದ ಪೊಲೀಸರ ಮೇಲೆ ಜನರಿಗೆ ನಂಬಿಕೆಯೇ ಇಲ್ಲದಾಗಿದೆ. ಮುಸ್ಲಿಮರು ನ್ಯಾಯ ಕೇಳಿ ಬೀದಿಗಿಳಿಯುವಂತಾಗಿದೆ.

ಅಡ್ನಾಡಿ ಆಡಳಿತಗಾರರು!


ಗಂಗೊಳ್ಳಿಯ ಪೊಲೀಸರಷ್ಟೇ ಕಳಂಕ ಜಿಲ್ಲಾ ಉಸ್ತುವಾರಿ ಮಂತ್ರಿ ವಿನಯಕುಮಾರ್ ಸೊರಕೆ ಮತ್ತು ಸ್ಥಳೀಯ ಶಾಸಕ ಗೋಪಾಲ ಪೂಜಾರಿಗೆ ಮೆತ್ತಿಕೊಂಡಿದೆ. ಈ ಮಂತ್ರಿ-ಶಾಸಕ ಎಲ್ಲಿ ಅವಾಂತರ-ಅನಾಹುತ ಆದನಂತರ ಗಂಗೊಳ್ಳಿಗೆ ಕಾಟಾಚಾರಕ್ಕೆ ಭೇಟಿ ನೀಡಿದ್ದಾರೆ. 28ರಂದೇ ಈ ಮಂತ್ರಿ ಶಾಸಕರು ಬಂದು ಶಾಂತಿಗಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಿತ್ತು. ಎಡವಟ್ಟು ಗುಡ್ಡೆ ಸುಕುಮಾರ ಶೆಟ್ಟಿ ಗಂಗೊಳ್ಳಿಗೆ ಹೋಗಿ ಹಿಂದೂ ಹುಡುಗರನ್ನು ಪಾತಕಕ್ಕೆ ಪ್ರಚೋದಿಸಿದ್ದಾನೆಂಬುದು ಗೊತ್ತಿದ್ದೂ ಶಾಸಕ ಗೋಪಾಲ ಪೂಜಾರಿ ಅಡಗಿ ಕುಳಿತದ್ದು ನಾಚಿಕೆಗೇಡು. ಪೊಲೀಸರು ಹಿಂದೂಗಳ ಪರ ಇದ್ದಾರೆಂಬುದು ಪತ್ತೆ ಮಾಡಲಾಗದ ಶಾಸಕ-ಮಂತ್ರಿ ಆ ಸ್ಥಾನಕ್ಕೆ ಅನರ್ಹರಲ್ಲವಾ? ಮಂತ್ರಿ ಸೊರಕೆ-ಶಾಸಕ ಪೂಜಾರಿ ಗಂಗೊಳ್ಳಿ ಪರಿಸ್ಥಿತಿ ಅರಿತು ಪೊಲೀಸರಿಗೆ ಅಂಕುಶ ಹಾಕಿದ್ದರೆ ಖಂಡಿತ ಜಮಾತ್ ಕಾಂಪ್ಲೆಕ್ಸ್ ಉರಿದು ಬೂದಿಯಾಗುತ್ತಿರಲಿಲ್ಲ!!

ಒಟ್ಟಿನಲ್ಲಿ ಗಂಗೊಳ್ಳಿಯ ಸೆಕ್ಯುಲರ್ ಜೀವಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಯಾರೂ ಇಲ್ಲದಂತಾಗಿದೆ. ಪಾಪದವರು ಅನಾಥರಾಗಿದ್ದಾರೆ. ಪಾತಕಿಗಳ ಪರವಾಗಿ ಪರೋಕ್ಷವಾಗಿ ಆಡಳಿತ ವ್ಯವಸ್ಥೆ ನಿಂತಂತೆ ಭಾಸವಾಗುತ್ತಿದೆ. ಇನ್ನಾದರೂ ಗೃಹಮಂತ್ರಿ ಜಾರ್ಜ್, ಸಿಎಂ ಸಿದ್ದು ಎಚ್ಚೆತ್ತು ಕೊಳ್ಳುವರಾ? ಕರಾವಳಿಗೆ ಕೋಮು ಕಿಚ್ಚು ಹೊತ್ತಿಸುವ ತಯಾರಿಯಲ್ಲಿ ಸಂಘ ಪರಿವಾರವಿರುವುದು ಗುಪ್ತ ದಳಕ್ಕೆ ಗೊತ್ತಾಗಿಲ್ಲವಾ? ಸದ್ಯಕ್ಕೆ ಗಂಗೊಳ್ಳಿ ಬೂದಿ ಮುಚ್ಚಿದ ಕೆಂಡದಂತಿದೆ. ಅನುಮಾನದ ಸಣ್ಣ ಗಾಳಿ ಸೋಕಿದರೂ ಸಾಕು ಬೆಂಕಿ ಕೆನ್ನಾಲಿಗೆ ಏಳುವುದು ಖಂಡಿತ. ತಕ್ಷಣ ಬೂದಿಯೊಳಗಿನ ಕೆಂಡಕ್ಕೆ ತಣ್ಣೀರು ಸುರಿವ ಜರೂರತ್ತಿದೆ!

● ನಹುಷ



ಮಂಡ್ಯ: ಬಂಧಿತರಾಗಬೇಕಾಗಿದ್ದ ವೈದ್ಯರು ಮರಳಿ ಮಿಮ್ಸ್‌ಗೆ









ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ(ಮಿಮ್ಸ್)ಗೆ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿರುವುದು ಸಾಬೀತಾದ ಹಿನ್ನೆಲೆಯಲ್ಲಿ ವಜಾಗೊಂಡು ಕ್ರಿಮಿನಲ್ ಕೇಸಿನಡಿ ಬಂಧಿತರಾಗಬೇಕಿದ್ದ ಮಿಮ್ಸ್ ವೈದ್ಯರು ಹೈಕೋರ್ಟ್ ನೀಡಿದ ಮಧ್ಯಂತರ ತಡೆಯಾಜ್ಞೆಯಿಂದ ನಿಟ್ಟುಸಿರು ಬಿಟ್ಟಿದ್ದಾರೆ.

ಸುಳ್ಳು ಬೋಧನಾ ಪ್ರಮಾಣಪತ್ರ (False Expeience Certificate) ಸಲ್ಲಿಸಿದ ಮಿಮ್ಸ್‌ನ ಹಲವು ವೈದ್ಯರು ಮಾನ- ಮರ್ಯಾದೆಯಿಲ್ಲದೆ ಪ್ರತಿ ತಿಂಗಳು ಲಕ್ಷ ಲಕ್ಷ ಸಂಬಳ ಎಣಿಸಿ ನವರಂಗಿ ಆಟವಾಡುತ್ತಿದ್ದಾರೆ. ಅಕ್ರಮ ನೇಮಕಾತಿ, ಸುಳ್ಳು ಬೋಧನಾ ಪ್ರಮಾಣಪತ್ರ, ಪದೋನ್ನತಿ, ಖರೀದಿಯಲ್ಲಿನ ಅವ್ಯವಹಾರಗಳಿಂದ ಮಿಮ್ಸ್ ಸಂಸ್ಥೆಯನ್ನು ಕಿತ್ತು ತಿನ್ನುತ್ತಿದ್ದಾರೆ. ಈ ಬಗ್ಗೆ ಗಮನ ಹರಿಸಬೇಕಾದ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ತನ್ನ ಬಂಟರ ಜೊತೆ ಬಾಂಬೆ ಸಿನಿಮಾದ 'ಹಮ್ಮ ಹಮ್ಮ ಹಮ್ಮ ಹಮ್ಮ ಹಮ್ಮ' ಎಂಬ ಹಾಡಿಗೆ ಬಾರಿನಲ್ಲಿ ಕುಡಿದು ಕುಪ್ಪಳಿಸುತ್ತಿದ್ದಾರೆ. ಒಂದಷ್ಟು ಪ್ರಗತಿಪರರು ಮಂಡ್ಯ ಜಿಲ್ಲೆಯ ಜನರ ಜೀವವುಳಿಸುವ ಮಿಮ್ಸ್ ಆಸ್ಪತ್ರೆಯ ರಕ್ಷಣೆಗೆ ಟೊಂಕಕಟ್ಟಿ ಹೋರಾಡುತ್ತಿದ್ದಾರೆ.

ಸುಳ್ಳು ಬೋಧನಾ ಪ್ರಮಾಣಪತ್ರ

ಮಿಮ್ಸ್‌ನಲ್ಲಿ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿ ಪ್ರತಿ ತಿಂಗಳು ಲಕ್ಷಗಟ್ಟಲೆ ಸಂಬಳ ಎಣಿಸಿಕೊಳ್ಳುವ ವೈದ್ಯರ ಸಂಖ್ಯೆ ಸಾಕಷ್ಟು ದೊಡ್ಡದಿದೆ. ಅವರಲ್ಲಿ ಡಾ.ಕಾವ್ಯಶ್ರೀ, ಡಾ.ಸವಿತಾ, ಡಾ.ಕೃಷ್ಣ ಡಾ.ಆನಂದ್, ಡಾ.ನಾರಾಯಣ ಹಾಗೂ ವಿದ್ಯಾರಾಣಿ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿರುವುದು ನಿಜವೆಂದು ಡಾ.ಆರ್.ಗುರುರಾಜನ್ ಅವರಿದ್ದ ಏಕ ಸದಸ್ಯ ತನಿಖಾ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಆದರೆ ಸಮಿತಿಯ ಆದೇಶವನ್ನು ಜಾರಿ ಮಾಡುವ ಉದ್ದೇಶ ಮಿಮ್ಸ್ ನಿರ್ದೇಶಕರಿಗಾಗಲಿ, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಾಗಲಿ ಇರಲೇ ಇಲ್ಲ. ಭ್ರಷ್ಟರನ್ನು ರಕ್ಷಿಸಲು ಮತ್ತೊಬ್ಬ ಭ್ರಷ್ಟನಿಂದ ಸಾಧ್ಯವೆಂಬಂತೆ ಡಾ.ಗುರುರಾಜನ್ ಸಮಿತಿ ನೀಡಿದ್ದ ವರದಿಯನ್ನು ಜಾರಿ ಮಾಡಲು ಯಾರೂ ಸಿದ್ಧರಾಗಲೇ ಇಲ್ಲ. ಕೊನೆಗೂ ಪ್ರಗತಿಪರ ವೇದಿಕೆ ಮುಖಂಡರ ಒತ್ತಡಕ್ಕೆ ಮಣಿದ ಮಿಮ್ಸ್ ಆಡಳಿತ ಪರಿಷತ್ 22-08-2014ರಂದು ನಡೆದ ಸಭೆಯಲ್ಲಿ ಡಾ.ಕಾವ್ಯಶ್ರೀ, ಸಹ ಪ್ರಾಧ್ಯಾಪಕರು ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಇವರಿಗೆ 27-08-2014 ಷೋಕಾಸ್ ನೋಟಿಸ್ ನೀಡಿ ವಿವರಣೆ ಕೇಳಿದ್ದರು.

01.10.2014ರಂದು ಷೋಕಾಸ್ ನೋಟಿಸ್‌ಗೆ ಉತ್ತರ ಕೊಟ್ಟ ಡಾ.ಕಾವ್ಯಶ್ರೀ ತಾನು ಹಿಂದೆ ನೀಡಿರುವ ಬೋಧನಾ ಪ್ರಮಾಣಪತ್ರಗಳು ಸರಿಯಿದೆ ಎಂದು ಸಮರ್ಥಿಸಿಕೊಂಡಿದ್ದಲ್ಲದೆ ತಮ್ಮ ಸೇವೆಯನ್ನು ಸಕ್ರಮಗೊಳಿಸುವಂತೆ ಕೋರಿದ್ದರು. ಆದರೆ 07-10-2014ರಂದು ನಡೆದ ಮಿಮ್ಸ್ ಆಡಳಿತ ಪರಿಷತ್ ಮಂಡಳಿ ಸಭೆಯಲ್ಲಿ ಡಾ.ಕಾವ್ಯಶ್ರೀ ನೀಡಿದ ವಿವರಣೆ ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅವೆಲ್ಲವೂ ಸುಳ್ಳು ಎಂದು ಗೊತ್ತಾಗಿ ಅವರ ವಿವರಣೆಯನ್ನು ಸಭೆ ತಿರಸ್ಕರಿಸಿತು. ಅಲ್ಲದೆ ವೈದ್ಯರ ನೇಮಕಾತಿ ಆದೇಶ ಪ್ರತಿಯಲ್ಲಿ ಅಭ್ಯರ್ಥಿಯು ಸುಳ್ಳು ಮಾಹಿತಿ ಅಥವಾ ಸುಳ್ಳು ಬೋಧನಾ ಅನುಭವ ಪ್ರಮಾಣಪತ್ರ ನೀಡಿದ್ದು ತನಿಖೆಯ ಸಂದರ್ಭದಲ್ಲಿ ಕಂಡುಬಂದರೆ ಯಾವುದೇ ಕಾರಣ ನೀಡದೆ ವಜಾ ಮಾಡಲಾಗುವುದು ಮತ್ತು ಐಪಿಸಿ ಸೆಕ್ಷನ್ ಅಡಿ ಮೊಕದ್ದಮೆ ದಾಖಲಿಸಲಾಗುವುದು ಎಂಬ ಪತ್ರಕ್ಕೆ ಒಪ್ಪಿ ಡಾ.ಕಾವ್ಯಶ್ರೀ ಸಹಿ ಮಾಡಿದ್ದಾರೆ. ಅದರಂತೆ ಡಾ.ಗುರುರಾಜನ್‌ರವರು ಸಲ್ಲಿಸಿರುವ ವರದಿಯ ಪ್ರಕಾರ ಡಾ.ಕಾವ್ಯಶ್ರೀ ಪದೋನ್ನತಿಗಾಗಿ ಮಿಮ್ಸ್ ಸಂಸ್ಥೆಗೆ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿರುವುದು ದೃಢಪಟ್ಟಿದೆ ಹಾಗೂ ಕಠಿಣ ದಂಡನೆಗೆ ಅರ್ಹರು ಎಂದು ಭಾವಿಸಿದ ಮಿಮ್ಸ್ ಆಡಳಿತ ಪರಿಷತ್ ಮಂಡಳಿ ಡಾ.ಕಾವ್ಯಶ್ರೀ ಅವರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ವೇತನ ಹಿಂಪಡೆಯಲು ಹಾಗೂ ಕರ್ನಾಟಕ ನಾಗರಿಕ ಸೇವೆಗಳ ನಿಯಮಾವಳಿಗಳು 1957ರ ಅಧಿನಿಯಮ 8ರ ಅನ್ವಯ ಸಂಸ್ಥೆಯ ಸೇವೆಯಿಂದ ವಜಾಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿರ್ಣಯಕ್ಕೆ ಬರುತ್ತದೆ.


ಅದರಂತೆ ಆದೇಶ ಸಂಖ್ಯೆ: ಮಿಮ್ಸ್/ಸಿಬ್ಬಂದಿ (1) ದೂರು/24/2013-14 ಮಂಡ್ಯ, ದಿನಾಂಕ 18-01-2014ರಂದು ಡಾ.ಕಾವ್ಯಶ್ರೀಯವರು ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿದ್ದು ದೃಢಪಟ್ಟಿರುವುದರಿಂದ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಿತ್ತು. ಮೂರು ಬಾರಿ ನೋಟಿಸ್ ನೀಡಿದ್ದರೂ ಕ್ಯಾರೇ ಎನ್ನದ ಡಾ.ಕಾವ್ಯಶ್ರೀ ಕೊನೆಗೂ ವಜಾಗೊಳ್ಳಲೇಬೇಕಾಯಿತು. ಈ ಸಂದರ್ಭದಲ್ಲಿ ಡಾ.ಕಾವ್ಯಶ್ರೀ ಹೈಕೋರ್ಟ್‌ಗೆ ಹೋಗುತ್ತಾರೆಂಬುದು ಮಿಮ್ಸ್ ನಿರ್ದೇಶಕ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಗೊತ್ತಿದ್ದೂ ಹೈಕೋರ್ಟ್‌ಗೆ ಕೇವಿಯಟ್ ಸಲ್ಲಿಸುವ ಗೋಜಿಗೆ ಹೋಗಲೇ ಇಲ್ಲ. ಡಾ.ಕಾವ್ಯಶ್ರೀಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ಕೇವಿಯಟ್ ಹಾಕಲಿಲ್ಲವೆಂಬುದು ಬೇರೆ ಮಾತು. ಒಂದು ವೇಳೆ ಕೇವಿಯಟ್ ಹಾಕಿದ್ದರೆ ಹೈಕೋರ್ಟ್ ಪ್ರತಿವಾದಿಗಳ ಮಾತಿಗೂ ಮನ್ನಣೆ ನೀಡುತ್ತಿತ್ತು. ಕೇವಿಯಟ್ ಹಾಕದ ಲಾಭ ಪಡೆದ ಡಾ.ಕಾವ್ಯಶ್ರೀ ಹೈಕೋರ್ಟ್‌ನಲ್ಲಿ wp 54265/2014ರ ವಜಾಗೊಳಿಸದಂತೆ ತಡೆಯಾಜ್ಞೆ ನೀಡುವಂತೆ ಹೇಳಿಕೊಂಡಿದ್ದರು. normal statue of desciplinary procedingsನ್ನು ಸರ್ಕಾರ ಪಾಲನೆ ಮಾಡದೆ ಏಕಾಏಕಿ ವಜಾ ಮಾಡಿದ್ದಾರೆ ಎಂದ ಡಾ.ಕಾವ್ಯಶ್ರೀ ವಾದ ಆಲಿಸಿದ ಹೈಕೋರ್ಟ್ ನ್ಯಾಯಾಧೀಶರು 25-11-2014ರಂದು ಮಿಮ್ಸ್ ಆಡಳಿತ ಮಂಡಳಿ ಪರಿಷತ್ ಉಪಾಧ್ಯಕ್ಷರಾದ ಇಲಾಖೆಯ ಪ್ರಧಾನಕಾರ್ಯದರ್ಶಿಗಳು ಸದರಿ ವೈದ್ಯರನ್ನು ವಜಾ ಮಾಡಿರುವ ಆದೇಶಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಿದ್ದಾರೆ. ಸುಳ್ಳು ಬೋಧನಾ ಪ್ರಮಾಣ ಪತ್ರ ನೀಡಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಕ್ರಿಮಿನಲ್ ಕೇಸು ಹಾಕಿಸಿಕೊಂಡು ಬಂಧಿತರಾಗಬೇಕಿದ್ದ ಡಾ.ಕಾವ್ಯಶ್ರೀ ಸೇರಿದಂತೆ ಇತರೆ ವೈದ್ಯರು ಮತ್ತೆ ರಾಜಾರೋಷವಾಗಿ ಮಿಮ್ಸ್‌ಗೆ ಮರಳುವಂತಾಗಿದೆ.

ಪದವಿ ನೋಂದಣಿ ರದ್ದು ಮಾಡಿ

ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದಲ್ಲಿದ್ದ ಡಾ.ಕಾವ್ಯಶ್ರೀ, ಡಾ.ಹೆಚ್.ಸಿ.ಸವಿತ, ಅರಿವಳಿಕೆ ವಿಭಾಗದ ಡಾ.ಕೆ. ಕೃಷ್ಣ ಹಾಗೂ ಡಾ.ಆನಂದ್, ಡಾ.ನಾರಾಯಣ್, ಡಾ.ಆರ್.ವಿದ್ಯಾರಾಣಿಯವರು ಮಿಮ್ಸ್‌ಗೆ ನೇಮಕವಾಗುವ ಸಂದರ್ಭದಲ್ಲಿ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿದ್ದಾರೆಂದು ಲೋಕಾಯುಕ್ತರಿಗೆ ಪ್ರಗತಿಪರ ವೇದಿಕೆಯ ಹೆಚ್.ಎಲ್.ಕೇಶವಮೂರ್ತಿ, ಕೆ.ಬೋರಯ್ಯರವರು ದೂರು ನೀಡಿದ್ದರು. ಆದರೆ ಈ ಎಲ್ಲಾ ಅಕ್ರಮ ನೇಮಕಾತಿಗಳಿಗೆ ಭಾರತೀಯ ವೈದ್ಯಕೀಯ ಪರಿಷತ್‌ನ ಅನುಮೋದನೆಯನ್ನು ಪಡೆಯಲಾಗಿತ್ತು. ಹಾಗೆಯೇ ಆಡಳಿತ ಮಂಡಳಿಯ ಅನುಮೋದನೆಯೂ ಸಿಕ್ಕಿತ್ತು. ಹಾಗಾಗಿ ಸರ್ಕಾರದ ಹಂತದಲ್ಲಿಯೇ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಲೋಕಾಯುಕ್ತರು ಸರ್ಕಾರಕ್ಕೆ ಸೂಚಿಸಿದ್ದರು.

ಈ ಹಿನ್ನೆಲೆಯಲ್ಲಿ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿರುವ ವೈದ್ಯರ ಬಗ್ಗೆ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ನೀಡುವಂತೆ ನಿವೃತ್ತ ನ್ಯಾಯಾಧೀಶ ಎನ್.ನಾರಾಯಣ್ ರವರನ್ನು ನೇಮಿಸಲಾಗಿತ್ತು. ಅದರಂತೆ ಎನ್.ನಾರಾಯಣ್ ವಿಚಾರಣೆ ನಡೆಸಿ ಸರ್ಕಾರ ವರದಿ ಸಲ್ಲಿಸಿದ್ದರು. ಸದರಿ ವರದಿ ಪರಿಶೀಲಿಸಿದ ಸರ್ಕಾರ ಎನ್.ನಾರಾಯಣ್ ನೀಡಿದ ವರದಿ ಹಾಗೂ ಲೋಕಾಯುಕ್ತ ನೀಡಿದ ವರದಿಯಲ್ಲಿ ಕೆಲವೊಂದು ವಿಚಾರಗಳು ವ್ಯತಿರಿಕ್ತವಾಗಿರುವ ಹಿನ್ನೆಲೆಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಈ ಎರಡು ವರದಿಗಳನ್ನು ಪುನರ್ ಪರಿಶೀಲನೆಯೊಂದಿಗೆ ತನಿಖೆ ನಡೆಸಿ ಸಮಗ್ರ ವರದಿ ಸಲ್ಲಿಸುವಂತೆ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಆರ್.ಗುರುರಾಜನ್‌ರವರ ನೇತೃತ್ವದಲ್ಲಿ ಏಕಸದಸ್ಯ ಸಮಿತಿ ರಚಿಸಲಾಗಿತ್ತು. ತನಿಖೆ ನಡೆಸಿದ ಗುರುರಾಜನ್ ನೇತೃತ್ವದ ಸಮಿತಿ ಮಿಮ್ಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಸವಿತಾ, ಡಾ.ಕಾವ್ಯಶ್ರೀ, ಡಾ.ಆನಂದ್, ಡಾ.ಕೆ.ಕೃಷ್ಣ ಡಾ.ನಾರಾಯಣ ಹಾಗೂ ಡಾ.ವಿದ್ಯಾರಾಣಿ ನೇಮಕಾತಿ ಸಂದರ್ಭದಲ್ಲಿ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿದ್ದಾರೆಂದು ಸರ್ಕಾರಕ್ಕೆ ವರದಿ ನೀಡಿತ್ತು.

ಈ ಹಿನ್ನೆಲೆಯಲ್ಲಿ 12-06-2014ರಂದು ಮಿಮ್ಸ್ ನಿರ್ದೇಶಕರಿಗೆ ಪತ್ರ ಬರೆದ ಸರ್ಕಾರದ ಅಧೀನ ಕಾರ್ಯದರ್ಶಿಗಳು ಕೂಡಲೇ ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿರುವ ವೈದ್ಯರಾದ ಹೆಚ್.ಸಿ.ಸವಿತಾ, ಕಾವ್ಯಶ್ರೀ, ಕೆ.ಕೃಷ್ಣ ಆನಂದ್, ಕೆ.ನಾರಾಯಣ್, ಆರ್. ವಿದ್ಯಾರಾಣಿರವರ ಪದವಿ, ಸ್ನಾತಕೋತ್ತರ ಪದವಿ ಪ್ರಮಾಣಪತ್ರಗಳ ನೋಂದಣಿ ಹಾಗೂ ಮಾನ್ಯತೆಯನ್ನು ಕರ್ನಾಟಕ ವೈದ್ಯಕೀಯ ಪರಿಷತ್ ಹಾಗೂ ಭಾರತೀಯ ವೈದ್ಯಕೀಯ ಪರಿಷತ್ತಿನಲ್ಲಿ ರದ್ದುಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದ್ದರು. ಕ್ರಮ ಕೈಗೊಳ್ಳುವ ಮೊದಲು ಆರ್. ಗುರುರಾಜನ್ ಸಮಿತಿಯ ವರದಿಯನ್ನು ಮಿಮ್ಸ್ ಆಡಳಿತ ಪರಿಷತ್ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸೂಚಿಸಿದ್ದಲ್ಲದೆ, ಸುಳ್ಳು ಬೋಧನಾ ಪ್ರಮಾಣಪತ್ರ ನೀಡಿದ ವೈದ್ಯರ ಮೇಲೆ ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸರ್ಕಾರದ ಕಾರ್ಯದರ್ಶಿ ತಿಳಿಸಿದ್ದರು. ಆದರೆ ಈ ಪತ್ರ ಬಂದು 5 ತಿಂಗಳು ಕಳೆದರೂ ಮಿಮ್ಸ್ ಆಡಳಿತ ಪರಿಷತ್ ಮಂಡಳಿ ತಪ್ಪಿತಸ್ಥ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗಲಿಲ್ಲ. ಯಾವಾಗ ಪ್ರಗತಿಪರ ವೇದಿಕೆಯ ಮುಖಂಡರ ಒತ್ತಡ ಹೆಚ್ಚಾಯಿತೋ 5 ತಿಂಗಳ ... ತಪ್ಪಿತಸ್ಥ ವೈದ್ಯರಿಗೆ ಷೋಕಾಸ್ ನೋಟಿಸ್ ... ಸುಮ್ಮನಾಗಿದ್ದಾರೆ. ಷೋಕಾಸ್ ನೋಟಿಸ್ ನೀಡಿದ ... ಡಾ.ಕಾವ್ಯಶ್ರೀ, ಹೆಚ್.ಸಿ.ಸವಿತಾ, ಕೃಷ್ಣ ಕೋ... ಹೋಗುತ್ತಾರೆಂಬುದು ಗೊತ್ತಿದ್ದರೂ ಕೇವಿಯಟ್ ... ಅವರಿಗೆ ಸುಲಭವಾಗಿ ತಡೆಯಾಜ್ಞೆ ತರಲು ... ಮಾಡಿದ್ದಾರೆ.



ಮಂಡ್ಯ ಮೆಡಿಕಲ್ ಕಾಲೇಜ್ .

ರಕ್ಷಣೆಗೆ ನಿಂತವರು

ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿದ ... ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾದ ಸರ್ಕಾರವೇ ... ಬಯಲಾದ ದಿನದಿಂದಲೂ ಅವರ ಪರವಾಗಿ ನಿಂತಿರು... ಎದ್ದು ಕಾಣುತ್ತಿದೆ. ಸರ್ಕಾರವೇ ಜೂನ್ 2014ರಲ್ಲಿ ... ಹೇಳಿದ ವೈದ್ಯರ ಪದವಿ ಹಾಗೂ ಮಾನ್ಯತೆ ... ಮಾಡುವಂತೆ ಆದೇಶ ಹೊರಡಿಸಿದ ನಂತರ 5 ತಿಂಗಳ... ಅವರ ಮೇಲೆ ಕ್ರಮ ಕೈಗೊಳ್ಳಲು ಮಿಮ್ಸ್ ಆಡಳಿತಮ... ಮುಂದಾಗಿಲ್ಲ. ಈ ಬಗ್ಗೆ ಪ್ರಗತಿಪರ ವೇದಿ... ಮುಖಂಡರು ವೈದ್ಯಕೀಯ ಸಚಿವ ಡಾ.ಶರಣ ... ಪಾಟೀಲರನ್ನು ಕಂಡು ಸುಳ್ಳು ಬೋಧನಾ ಪ್ರಮಾ... ಸಲ್ಲಿಸಿರುವ ವೈದ್ಯರನ್ನು ಸರ್ಕಾರದ ಆದೇಶದಂತೆ ... ಮಾಡಿ ಅಂದರೆ, ಹಾಗೆಲ್ಲಾ ಮಾಡಿದರೆ ಕಾಲೇ... ನಡೆಸುವುದೂ ಸಾಧ್ಯವಿಲ್ಲ; ತಾನು ಮಂತ್ರಿಯಾಗಿರುವ... ಸಾಧ್ಯವಿಲ್ಲವೆನ್ನುತ್ತಾರೆ. ಡಾ.ಶರಣ ಪ್ರಕಾಶ ಪಾಟೀಲ್ ... ವೈದ್ಯಕೀಯ ಶಿಕ್ಷಣ ಸಚಿವರಾಗಿ ಮಿಮ್ಸ್‌ನಲ್ಲಿನ ಹಗರ... ಬೆನ್ನತ್ತಿ ಸರಿಮಾಡುತ್ತಾರೆಂದುಕೊಂಡರೆ ಈತ ಹಗರ... ಭಾಗಿಯಾದ ವೈದ್ಯರ ಪರ ಮಾತನಾಡುತ್ತಾರೆ.

ಹಾಗೆಯೇ ಹಲವು ಆರೋಪಗಳನ್ನು ಹೊತ್ತುಕೊ... ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿ ... ಶಿವಶೈಲಂ ಕೂಡ ತಪ್ಪಿತಸ್ಥ ವೈದ್ಯರಿಗೆ ಸಹಕರಿಸುತ್ತಿ... ಖಾಸಗಿ ಮೆಡಿಕಲ್ ಕಾಲೇಜಿಗೆ ಅನುಕೂಲ ಮಾಡಿ... ಈತ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ನಡೆ... ಅವ್ಯವಹಾರಗಳಿಗೆ ಕಡಿವಾಣ ಹಾಕಲು ಪ್ರಯತ್ನಿಸಲೇ... ಮಿಮ್ಸ್ ಆಡಳಿತ ಪರಿಷತ್ ಮಂಡಳಿ ಸಭೆ... ತೆಗೆದುಕೊಂಡ ನಿರ್ಣಯ ಜಾರಿಮಾಡಿ ಎಂದು ದೂರ... ಹೆಚ್.ಎಲ್.ಕೇಶವಮೂರ್ತಿಯವರು ಕೇಳಿದರೆ ... ಮಾಡಬೇಕೆಂದು ನಮಗೆ ಗೊತ್ತಿದೆ' ಎನ್ನುವ ಶಿವ... ಡಾ.ಕಾವ್ಯಶ್ರೀಗೆ ವಜಾಗೊಳಿಸುವ ಮಿಮ್ಸ್ ಪರಿ... ಮಂಡಳಿ ಸಭೆಯ ನಿರ್ಣಯದ ಪ್ರತಿ ಸಿಗು... ಮಾಡಿದ್ದಲ್ಲದೆ ಕೇವಿಯಟ್ ಹಾಕದೆ ಡಾ.ಕಾ... ಮಧ್ಯಂತರ ತಡೆಯಾಜ್ಞೆ ಸುಲಭವಾಗಿ ಸಿಗುವಂತೆ ಮಾಡಿ...

ವೈದ್ಯಕೀಯ ನೀತಿ ಉಲ್ಲಂಘಿಸಿದ ವೈದ್ಯರ ... ಕ್ರಮಕೈಗೊಳ್ಳಬೇಕಾದ ಸಚಿವ ಹಾಗೂ ಪ್ರ... ಕಾರ್ಯದರ್ಶಿಗಳೇ ಈ ರೀತಿ ತಪ್ಪು ಮಾಡಿದ ... ಪರ ನಿಂತು ಬಿಟ್ಟರೆ ಜನರ ಗತಿಯೇನು? ಎನ್ನುವ ಸಾ... ಜ್ಞಾನವೂ ಇವರಿಗಿದ್ದಂತಿಲ್ಲ. ಖಾಸಗಿ ಮೆಡಿ... ಕಾಲೇಜುಗಳಲ್ಲಿ ನಡೆಯುವ ಮೆಡಿಕಲ್ ಸೀಟು ದ... ಮೇಲೆ ಮುರಕೊಂಡು ಬಿದ್ದು ಹಿಂದುಳಿದ, ಅಲ್ಪಸಂ... ದಲಿತ ವರ್ಗಗಳಿಗೆ ಸಿಗಬೇಕಾದ ಸೀಟಿನ ಬಗ್ಗೆ ಮಾ... ಸೀಟು ದಂಧೆಯ ಬುಡಕ್ಕೆ ಕೈ ಹಾಕಿದ ಹಾಗೂ ಸ... ಮೆಡಿಕಲ್ ಕಾಲೇಜಿನ ಅವ್ಯವಹಾರಗಳ ಬಗ್ಗೆ ತ... ಮುಂದಾದ ಕಾರಣಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ... ರಶ್ಮಿ. ಮಹೇಶ್‌ರನ್ನು ಎತ್ತಂಗಡಿ ಮಾಡುವ ... ಸಿದ್ದರಾಮಯ್ಯನವರ ಸರ್ಕಾರ ಜನರ ಪರವಾಗಿದೆ... ಭ್ರಷ್ಟರ ಪರವಾಗಿದೆಯೋ ಎಂಬ ಪ್ರಶ್ನೆಗೆ ಉತ್ತರಿಸಬ...

ಪ್ರತಿಷ್ಠಿತ ಕುಟುಂಬದವರು

ಸುಳ್ಳು ಬೋಧನಾ ಪ್ರಮಾಣಪತ್ರ ಸಲ್ಲಿಸಿದ ವೈ... ಹಲವರು ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ... ಡಾ.ಹೆಚ್.ಸಿ.ಸವಿತಾ ತಂದೆ ಹೆಚ್.ಡಿ.ಚೌಡಯ್ಯ ... ಶಾಸಕರು. ಪತಿ ಮೋಹನ್ ಆದಿಚುಂಚನಗಿರಿ ಮೆ... ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದಾರೆ. ಮಂಡ್ಯದ ಕೆರ... ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ... ಶಾಸಕರಾಗಿದ್ದವರು. ಪ್ರಸ್ತುತ ಹೆಚ್.ಡಿ.ಚೌಡಯ್ಯ ... ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಶಿಸ್ತು, ದಕ್ಷ ... ಹೆಸರು ಮಾಡಿದ ಚೌಡಯ್ಯ ಪೀಇಟಿ ಶಿಕ್ಷಣ ಸಂ... ಎತ್ತರಕ್ಕೆ ಬೆಳೆಸಿದ್ದಾರೆ. ಇಂತಹವರ ಮಗಳಾದ ಹೆಚ್.... ಮಿಮ್ಸ್‌ಗೆ ನೇಮಕವಾಗುವ ಸಂದರ್ಭದಲ್ಲಿ ಆದಿಚು... ಮೆಡಿಕಲ್ ಕಾಲೇಜಿನಲ್ಲಿ ಕೆಲಸ ನಿರ್ವಹಿಸುತ್ತಿರು... ಹೇಳಿ ಸುಳ್ಳು ಬೋಧನಾ ಪ್ರಮಾಣಪತ್ರವನ್ನು ಸ... ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿ ಸೇವೆ ಸ... ಎನ್ನುವ ಸವಿತಾ ಆ ಸಮಯದಲ್ಲಿ ಮಂಡ್ಯದ ಸ... ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದ ವೈದ್ಯರಾಗಿದ್ದರು... ಬೋಧನಾ ಪ್ರಮಾಣ ಪತ್ರ ಸಲ್ಲಿಸಿದ ತಪ್ಪಿಗೆ ಸ್ನಾತ... ಪದವಿ ಮಾನ್ಯತೆ ರದ್ದು ಮಾಡಲು ಸರ್ಕಾರ ಮು...

...ಹೆಸರಾದ ಸವಿತಾರ ತಂದೆ ಚೌಡಯ್ಯ ಕೂಡ ... ಮಂತ್ರಿಗಳ ಬಳಿ ಹೋಗಿ 'ನನ್ನ ಮಗಳನ್ನು ರಕ್ಷಿಸಿ' ...ದು ಕೇಳಿಕೊಂಡಿದ್ದಾರೆ ಎಂಬ ಮಾಹಿತಿ ಮಂಡ್ಯದ ...ಲ್ಲಿಗಳಲ್ಲಿ ಹರಿದಾಡುತ್ತಿದೆ. ಅಶಿಸ್ತು ಅಪ್ರಾಮಾಣಿಕತ ...ದ ಮಗಳಿಂದಾಗಿ ತಂದೆ ಮಂತ್ರಿಗಳ ಮನೆ ಮುಂದೆ ...ವಂತೆ ಮಾಡಿರುವುದು ಮಂಡ್ಯದ ನಾಗರಿಕರಿಗೆ ಬೇಸರ ...ದಿಸಿದೆ.

...ನ್ನು ಡಾ.ಕಾವ್ಯಶ್ರೀ ಮಾಜಿ ಮುಖ್ಯಮಂತ್ರಿ ...ಯೂರಪ್ಪನವರ ಕ್ಷೇತ್ರ ಶಿಕಾರಿಪುರಕ್ಕೆ ಸೇರಿದವರು. ...ಯೂರಪ್ಪನವರ ಮಗಳ ಸ್ನೇಹಿತೆ ಎಂಬ ...ದಿಂದಲೇ ಯಡ್ಡಿ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ...ನಲ್ಲಿ ತನ್ನ ಪರ ಯಾವುದೇ ತನಿಖೆ ಮುಂದುವರೆ ...ತೆ ನೋಡಿಕೊಂಡರು. ಸುಳ್ಯ ಮೆಡಿಕಲ್ ಕಾಲೇಜಿನಿಂದ ... ಬೋಧನಾ ಪ್ರಮಾಣಪತ್ರ ತಂದಿರುವ ಈಕೆ ಆ ...ಯದಲ್ಲಿ ಮಂಡ್ಯದ ಸುಶೀಲಮ್ಮ ನರ್ಸಿಂಗ್ ಹೋಂ ...ಗೆ ಪಡೆದು ಮಾಲೀಕರಾಗಿ ಕೆಲಸ ಮಾಡುತ್ತಿದ್ದರು. ...ಲಿ ಕೇರಳದಲ್ಲಿ ಕೆಲಸ ನಿರ್ವಹಿಸಿದ ಇವರು ಅದೇ ...ರ್ಷದಲ್ಲಿ ಸುಳ್ಯದ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ...ದ್ದೆ ಎಂದು ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡಿದ್ದಾರೆ. ...ರಿವಳಿಕೆ ತಜ್ಞ ಡಾ.ಕೆ.ಕೃಷ್ಣ ಸುಳ್ಯ ಹಾಗೂ ...ಕುಂಚನಗಿರಿ ಮೆಡಿಕಲ್ ಕಾಲೇಜಿನ ಸುಳ್ಳು ಬೋಧನಾ ...ಣಪತ್ರ ಸಲ್ಲಿಸಿದ್ದಾರೆ. ಈ ಸಮಯದಲ್ಲಿ ಡಾ.ಕೃಷ್ಣ ...ದ ಯತ್ತಂಬಾಡಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ... ನಿರ್ವಹಿಸುತ್ತಿದ್ದರು.


...ಡಾ.ನಾರಾಯಣ್ ಕೂಡ ವೈದ್ಯ ಪದವಿ ಪಡೆದು 9 ... ಎಲ್ಲೂ ಕೆಲಸ ಮಾಡಲಿಲ್ಲ. ಈತ ಮಿಮ್ಸ್‌ಗೆ ಸುಳ್ಳ ... ಬಾಗಲಕೋಟೆ ಮೆಡಿಕಲ್ ಕಾಲೇಜಿನಲ್ಲಿ ಬೋಧನೆ ...ಡುತ್ತಿದ್ದೆ ಎಂದು ಸುಳ್ಳು ಪ್ರಮಾಣಪತ್ರ ನೀಡಿದ್ದ. ...ವಾಗ ಸುಳ್ಳು ಬೋಧನಾ ಪ್ರಮಾಣ ಪತ್ರ ಹಗರಣ ...ಲಾಯಿತೋ ತಕ್ಷಣ ರಾಜೀನಾಮೆ ನೀಡಿದ್ದ ಈತ ...ತ ಕುಟುಂಬಕ್ಕೆ ಸೇರಿದ್ದು ಕಳೆದ ವಿಧಾನಸಭಾ ...ವಣೆಯಲ್ಲಿ ದೊಡ್ಡಬಳ್ಳಾಪುರ ಕ್ಷೇತ್ರದಿಂದ ಕಾಂಗ್ರೆಸ್ ...ಟ್ ಗಿಟ್ಟಿಸಿ ಎಂಎಲ್ಎ ಆಗಲು ತಯಾರಿ ...ಕೊಂಡಿದ್ದ; ಆದರೆ ಕಾಂಗ್ರೆಸ್ ಟಿಕೆಟ್ ನೀಡಿರಲಿಲ್ಲ. ...ನ್ನು ಡಾ.ವಿದ್ಯಾರಾಣಿ ಕೂಡ ರೇಡಿಯಾಲಜಿ ವಿಭಾಗಕ್ಕೆ ... ಪ್ರಮಾಣ ಪತ್ರ ನೀಡಿ ಕೆಲಸ ಗಿಟ್ಟಿಸಿಕೊಂಡಿದ್ದರು. ...ೂ ಕೂಡ ರಾಜೀನಾಮೆ ಸಲ್ಲಿಸಿ ಹೋಗಿ 6-7 ...ಗಳಾಗಿದೆ.

...ಬಿಪಿಎಲ್ ಕಾರ್ಡ್ ಮರೆತು ಜಿಲ್ಲಾ ಆಸ್ಪತ್ರೆಗೆ ಬಂದ ...ಗಳ ಬಂಧುಗಳನ್ನು ದುಡ್ಡು ಕಟ್ಟಿ ಚಿಕಿತ್ಸೆ ಪಡೆದುಕೊಳ್ಳಿ ...ು ಹೇಳುವ ವೈದ್ಯರೇ ಈ ರೀತಿ ಸುಳ್ಳು ಬೋಧನಾ ...ಣ ಪತ್ರವನ್ನು ಸಲ್ಲಿಸಿ ಸರ್ಕಾರದ ಖಜಾನೆಗೆ ಕನ್ನ ...ದಿರುವುದು ಸರಿಯೇ? ಸಮಾಜದಲ್ಲಿ ಉನ್ನತ ...ದಲ್ಲಿರುವ ವೈದ್ಯರೇ ಈ ರೀತಿ ಮಿಮ್ಸ್ ಸಂಸ್ಥೆಗೆ ...ಹ ಮಾಡಿರುವುದು ಅಕ್ಷಮ್ಯ ಅಪರಾಧ. ಈ ದೇಶದಲ್ಲಿ ...ನು ಎಲ್ಲರಿಗೂ ಒಂದೇ ಆಗಿದ್ದರೆ ಸುಳ್ಳು ಬೋಧನಾ ...ಣ ಪತ್ರ ಸಲ್ಲಿಸಿ ವೈದ್ಯ ವೃತ್ತಿಗೆ ದ್ರೋಹ ಬಗೆದ ...ಗೂ ಶಿಕ್ಷೆಯಾಗಬೇಕು. ಸರ್ಕಾರ ಕೂಡಲೇ ...ಕಾವ್ಯಶ್ರೀ ತಂದಿರುವ ಮಧ್ಯಂತರ ತಡೆಯಾಜ್ಞೆ ...ಗೊಳಿಸಿ ಆಕೆ ಪಡೆದಿರುವ ಪದವಿಯ ಮಾನ್ಯತೆಯನ್ನು ... ಮಾಡಿದಾಗ ಮಾತ್ರ ಈ ನೆಲದ ಕಾನೂನಿಗೆ ಅರ್ಥ ...ದೆ. ತಪ್ಪು ಮಾಡಿದ ವೈದ್ಯರ ಬಂಡವಾಳ ನಿವೃತ್ತ ...ಮೂರ್ತಿ ಆರ್. ಗುರುರಾಜನ್‌ರವರ ಸಮಿತಿ ...ಯಿಂದ ನಿಸ್ಸಂದೇಹವಾಗಿ ಬಯಲಾಗಿದ್ದು ಮುಂದೇನಾ ...ದೋ ಎಂಬುದು ಕುತೂಹಲ ಮೂಡಿಸಿದೆ.

...ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ ಮಿಮ್ಸ್‌ನಲ್ಲಿ ...ು ಸುಳ್ಳು ಬೋಧನಾ ಪ್ರಮಾಣಪತ್ರ ಹಗರಣ ಮಾಡಿದ ...ರಲ್ಲದೆ ಇನ್ನೂ ಹಲವು ವೈದ್ಯರು ವಿವಿಧ ...ಣಗಳಿಂದ ಕುಖ್ಯಾತರಾಗಿದ್ದಾರೆ. ಹಣ ಡಬ್ಲಿಂಗ್ ...ಯಲ್ಲಿ ವೈದ್ಯನೊಬ್ಬ ಬೆಂಗಳೂರಿನಲ್ಲಿ ಸಿಕ್ಕಿಬಿದ್ದು ...ಐಆರ್ ದಾಖಲಾಗಿದೆ. ಸೈಬರ್ ಕ್ರೈಂ ಕೇಸಿನಲ್ಲಿ ...ನ ಮೇಲೆ ಎಫ್‌ಐಆರ್ ದಾಖಲಾಗಿದೆ. ಹಾಗೆಯೇ ...ು ವೈದ್ಯರು ಬಡ್ತಿ ಪಡೆಯಲು ನಕಲಿ ಜರ್ನಲ್ ...ಯಲ್ಲಿ ಪಾಲ್ಗೊಂಡಿರುವುದನ್ನು ಹೇಳಿದರೆ ಅದೇ ... ಕಥೆಯಾಗುತ್ತದೆ. ಇನ್ನು ಜರೀದಿಯಲ್ಲಿ ನಡೆದಿರುವ ...ಮಾಲ್, ಪದೋನ್ನತಿ ಹಾಗೂ ನೇಮಕಾತಿಯಲ್ಲಿ ...ರುವ ಹಗರಣದ ಬಗ್ಗೆ ಸರಿಯಾದ ತನಿಖೆ ನಡೆಸಿದ್ದೇ ... ಸಮಾಜದಲ್ಲಿ ದೊಡ್ಡ ಗಣ್ಯರೆಂದು ಚಲಾವಣೆ ...ರುವ ವೈದ್ಯರ ಮತ್ತೊಂದು ಪಾಷಾಣಮುಖದ ದರ್ಶನ ...ತ್ತದೆ. ಮಂಡ್ಯದ ಜನತೆ ಮಿಮ್ಸ್ ಕಾರ್ಯವೈಖರಿ ... ಈಗಾಗಲೇ ಆಕ್ರೋಶಗೊಂಡಿದ್ದು, ಅವರೆಲ್ಲಾ ಸೇರಿ ... ಬುದ್ಧಿ ಕಲಿಸುವ ದಿನಗಳು ಹತ್ತಿರದಲ್ಲಿವೆ ಎಂಬುದನ್ನು ... ವೈದ್ಯರು ಮರೆಯಬಾರದು.

● ಮಂಡ್ಯ ನಾಗೇಶ್

ಮೋದಿ ಆಳ್ವಿಕೆಯಲ್ಲಿ ಭಾರತ 'ಕತ್ತಲ ಯುಗ'ದತ್ತ



ಪ್ರೊಫೆಸರ್ ಡಿ.ಎನ್. ಝಾರವರು ಕೇವಲ ಧೀಮಂತ ಇತಿಹಾಸಕಾರ ಮಾತ್ರವಲ್ಲ, ಕೋಮುವಾದಿ ವಿರೋಧಿ ಚಳವಳಿಕಾರರೂ ಹೌದು. ವಾಜಪೇಯಿ ಸರ್ಕಾರ ಶಾಲಾ ಪಠ್ಯಗಳ ಕೇಸರೀಕರಣಕ್ಕೆ ಮುಂದಾಗಿದ್ದ ಸಂದರ್ಭದಲ್ಲಿ ಅದನ್ನು ವಿರೋಧಿಸುವ ಹೋರಾಟದ ಮುಂಚೂಣಿಯಲ್ಲಿ ಇದ್ದಂತವರು. ಈಗ ಬಿಜೆಪಿ ಸಂಪೂರ್ಣ ಬಹುಮತ ಗಳಿಸಿರುವುದರಿಂದ ವಾಜಪೇಯಿಯಂತೆಯೇ ಮೋದಿ ಕೂಡಾ ಶಿಕ್ಷಣದ ಮತ್ತು ಇತಿಹಾಸದ ಕೇಸರೀಕರಣಕ್ಕೆ ಪ್ರಬಲವಾಗಿ ಮುನ್ನುಗ್ಗುತ್ತಾರೆ ಎಂಬುದಾಗಿ 'ಪವಿತ್ರ ಗೋವು ಎಂಬ ಮಿಥ್ಯ' (Myth of the Holy Cow) ಕೃತಿಯ ಲೇಖಕರಾದ ಝಾರವರು ತಮ್ಮ ಆತಂಕ ಹೊರಹಾಕಿದ್ದಾರೆ. ನವದೆಹಲಿಯ ಜವಾಹರಲಾಲ್ ನೆಹರೂ ವಿವಿ ಆವರಣದಲ್ಲಿ ನವೆಂಬರ್ 19ರ ಸಂಜೆ ಅಭಯ್ ಕುಮಾರ್ ಜೊತೆ ಮಾತಿಗಿಳಿದಿದ್ದ ಪ್ರೊ. ಝಾರವರು ಮೋದಿ ಆಳ್ವಿಕೆಯನ್ನು 'ಕತ್ತಲಯುಗ' ಎಂದು ಕರೆದಿದ್ದು ನಾವೆಲ್ಲಾ ಅದರ ವಿರುದ್ಧ ಹೋರಾಡಬೇಕೆಂಬ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಪ್ರ: ಶಾಲಾ ಪಠ್ಯಗಳ ಕೇಸರೀಕರಣವನ್ನು ಪ್ರಬಲವಾಗಿ ವಿರೋಧಿಸುವವರಲ್ಲಿ ನೀವೂ ಒಬ್ಬರು. ಇತಿಹಾಸ ಬರವಣಿಗೆಯು ಸಮಾಜದ ಮೇಲೆ ಯಾವ ರೀತಿ ಪರಿಣಾಮ ಬೀರಬಲ್ಲದು?


ಝಾ: ಜಾತ್ಯತೀತ ಇತಿಹಾಸವು ಸಮಾಜದ ಮೇಲೆ ಅಷ್ಟಾಗಿ ಪರಿಣಾಮ ಬೀರುವುದಿಲ್ಲ ಎಂದು ವಾದಿಸುವ ಇತಿಹಾಸಕಾರರಿಗೆ ನನ್ನ ವಿರೋಧವಿದೆ. ಪ್ರತಿಯಾಗಿ, ಅದು ಸಮಾಜದ ಮೇಲೆ ಖಂಡಿತ ಪ್ರಭಾವ ಚೆಲ್ಲಬಲ್ಲದು ಎಂದು ನಾನು ಹೇಳುತ್ತೇನೆ. ಉದಾಹರಣೆಗೆ, 'ದಿ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯಾ' ಎಂಬ ತನ್ನ ಪುಸ್ತಕದಲ್ಲಿ ಜೇಮ್ಸ್ ಮಿಲ್‌ನು ಭಾರತದ ಇತಿಹಾಸವನ್ನು ಹಿಂದೂ, ಮುಸ್ಲಿಂ ಮತ್ತು ಬ್ರಿಟಿಷ್ ಕಾಲಾವಧಿ ಎಂದು ಮೂರು ಅವಧಿಗಳಾಗಿ ವಿಂಗಡಿಸಿದ್ದಾನೆ. ಅವನ ಈ ವರ್ಗೀಕರಣವು ಧರ್ಮ ಆಧಾರಿತವಾದುದು, ಇದು ಭಾರತೀಯ ಇತಿಹಾಸಕಾರರ ಮೇಲೆ ಹಾಗೂ ಜನರ ಮನಸ್ಸಿನ ಮೇಲೆ ಸುದೀರ್ಘ ಛಾಪನ್ನೇ ಮೂಡಿಸಿದೆ. ಮಿಲ್‌ನ ಈ ವರ್ಗೀಕರಣವು ಪುರಾತನ ಭಾರತೀಯ ಇತಿಹಾಸವನ್ನು ಬರೆದ ಕೆ.ಎಂ. ಮುನ್ಷಿ, ಕೆ.ಪಿ.ಜಯಸ್ವಾಲ್, ಆರ್.ಸಿ ಮಜುಮ್ದಾರ್‌ರಂತಹ ಭಾರತೀಯ ಇತಿಹಾಸಕಾರರ ಮನಸಲ್ಲಿ ಆಳವಾಗಿ ಬೇರೂರಿದೆ. ಭಾರತೀಯ ವಿದ್ಯಾಭವನ ಬಹು ಸಂಪುಟದಲ್ಲಿ ಪ್ರಕಟಿಸಿದ ಮಜುಮ್ದಾರ್ ಬರೆದ ಭಾರತೀಯ ಇತಿಹಾಸದಲ್ಲಿ ಆತ 'ಹಿಂದೂ ಕಾಲಾವಧಿ'ಗೇ ಹೆಚ್ಚಿನ ಪ್ರಾಶಸ್ತ್ಯ ನೀಡಿ ಧಾರ್ಮಿಕ ಪುನರುಜ್ಜೀವನ ಹಾಗೂ ಕೋಮುವಾದವನ್ನು ಪ್ರಚೋದಿಸಿದ್ದಾನೆ. ಮುಸ್ಲಿಮರು 'ವಿದೇಶಿ ವಲಸಿಗರು' ಮತ್ತು ಹಿಂದೂಗಳು 'ಸ್ವದೇಶಿ'ಗಳು ಎಂಬಂತಹ ದೃಷ್ಟಿಕೋನಗಳಿಂದ ಪ್ರಭಾವಿತವಾದ ವಸಾಹತುಶಾಹಿ ಇತಿಹಾಸಕಾರರಿಂದ ಬರೆಯಲ್ಪಟ್ಟ ಕೋಮುವಾದಿ ಇತಿಹಾಸ ಇದು. ಮೋದಿ ಇತ್ತೀಚೆಗೆ ತನ್ನ ಭಾಷಣದಲ್ಲಿ ಉಲ್ಲೇಖಿಸಿದ 'ಹನ್ನೆರಡು ನೂರು ವರ್ಷಗಳ ಗುಲಾಮಗಿರಿ'ಯಲ್ಲೂ ಇದೇ ತರಹದ ಮುಸ್ಲಿಂ ವಿರೋಧಿ ಪೂರ್ವಗ್ರಹಪೀಡಿತ ಧೋರಣೆ ಎದ್ದು ಕಾಣಿಸುತ್ತದೆ.

ಪ್ರ: ಹಿಂದೂ ಬಲಪಂಥೀಯರು ಜಾತ್ಯತೀತ ಇತಿಹಾಸಕಾರರನ್ನು 'ಮೆಕಾಲೆ ಸಂತತಿ' ಯವರು ಎಂದು ಟೀಕಿಸುತ್ತಾರೆ, ಆದರೆ ನೀವಿಲ್ಲಿ ಅವರನ್ನು 'ಕೋಮುವಾದಿ ವಸಾಹತುಶಾಹಿ ಇತಿಹಾಸಕಾರರ ಸಂತತಿ' ಎಂಬುದಾಗಿ ಕರೆಯುತ್ತಿರುವಂತಿದೆ...

ಝಾ: ವಸಾಹತುಶಾಹಿ ಬರಹಗಳಿಂದ ಪ್ರೇರಿತರಾದ ಆರ್.ಸಿ. ಮಜುಮ್ದಾರ್ ಮತ್ತು ಇತರರು 'ಮಹಾನ್ ಭಾರತೀಯ ಗತ'ದ ಬಗ್ಗೆ ಮಾತನಾಡುತ್ತಾರೆ. ಆರ್.ಎಸ್.ಎಸ್ ಮತ್ತು ಭಾರತದ ಗಡಿಯನ್ನು ಹಸಿರ್ ಬರೆಯುವ ಸಾಮ್ರಾಜ್ಯಶಾಹಿ ಮಹತ್ವಾಕಾಂಕ್ಷೆ ಹೊತ್ತಿರುವ ಆರ್‌ಎಸ್‌ಎಸ್ ಚಿಂತಕ ದೀನಾನಾಥ ಭಾತ್ರಾರಂತವರು ಪ್ರಚಾರ ಪಡಿಸುತ್ತಿರುವುದು ಇಂತಹುದೇ 'ಮಹಾನ್ ಭಾರತ'ವೆಂಬ ಮಿಥ್ಯವನ್ನು. ಗುಜರಾತ್‌ನ ಶಾಲಾ ಪಠ್ಯಗಳ ಮೂಲಕ ಮಕ್ಕಳ ಮನಸ್ಸಲ್ಲಿ ತುಂಬಲಾಗುತ್ತಿರುವ 'ಅಖಂಡ ಭಾರತ'ದ ಅವರ ಉಲ್ಲೇಖಗಳ ಹಿಂದೆ ಅಡಗಿರುವುದು ಇದೇ ಅಜೆಂಡಾ. ಆರ್‌ಎಸ್‌ಎಸ್‌ನವರ ಮುಸ್ಲಿಂ ವಿರೋಧಿ ಧೋರಣೆ ಪ್ರಭಾವಿತವಾಗಿರೋದು ಎಚ್.ಎಂ. ಈಲಿಯಟ್ ಮತ್ತು ಜಾನ್ ಡಾಸನ್ ರಂತಹ ವಸಾಹತುಶಾಹಿ ಇತಿಹಾಸಕಾರರಿಂದ. ಇವರೆಲ್ಲಾ ಭಾರತೀಯ ಇತಿಹಾಸವನ್ನು ಇಲ್ಲಿಯ ಇತಿಹಾಸಕಾರರಿಂದಲೇ ಕೇಳಿ ಪ್ರಸ್ತುತ ಪಡಿಸಿದಂತವರು. ಮುಸ್ಲಿಮರು ದೇವಾಲಯಗಳನ್ನು ಧ್ವಂಸ ಮಾಡಿ ಹಿಂದೂಗಳ ಹತ್ಯೆ ಮಾಡಿದರು ಎಂದೇಳಿ ಇವರೆಲ್ಲಾ ಮುಸ್ಲಿಮರನ್ನು ಟೀಕಿಸಿದ್ದಾರೆ. ಈಲಿಯಟ್‌ನ ಸೂತ್ರದ ಪರಮೋಚ್ಚ ಗುರಿ ಎಂದರೆ 19ನೇ ಶತಮಾನದಲ್ಲಿದ್ದ ಜನರ ಮನಸ್ಸಿನಲ್ಲಿ ಕೋಮುವಾದವನ್ನು ಬಲವಾಗಿ ಬೇರೂರಿಸುವುದೇ ಆಗಿದೆ. ಹಾಗಾಗಿ ನಾನು ಮತ್ತೆ ಒತ್ತಿ ಹೇಳುತ್ತೇನೆ, ಇತಿಹಾಸದ 'ಭಾರತೀಕರಣ'ದ ಪ್ರತಿಪಾದಕರೆಲ್ಲ ಮಿಲ್ ಮತ್ತು ಈಲಿಯಟ್‌ರಂತವರಿಂದ ಬಹಳವಾಗಿ ಪ್ರಭಾವಿತವಾದಂತವರು.

ಪ್ರ: ಪ್ರಧಾನಮಂತ್ರಿ ನರೇಂದ್ರ ಮೋದಿ ಇತ್ತೀಚೆಗೆ ಗಣೇಶನ ಉದಾಹರಣೆ ಕೊಟ್ಟು ಪ್ಲಾಸ್ಟಿಕ್ ಸರ್ಜರಿ ಚಿಕಿತ್ಸೆ ಪ್ರಾಚೀನ ಭಾರತದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಪ್ರತಿಪಾದಿಸಿದ್ದರು. ಒಬ್ಬ ಇತಿಹಾಸಕಾರನಾಗಿ ಈ ಹೇಳಿಕೆಯನ್ನು ನೀವು ಹೇಗೆ ವಿಶ್ಲೇಷಣೆಗೆ ಒಳಪಡಿಸುತ್ತೀರಿ?

ಝಾ: ಮೋದಿಯ ಈ ಹೇಳಿಕೆ ಗುಜರಾತ್ ಪಠ್ಯಪುಸ್ತಕಗಳಲ್ಲಿ ಸೇರಿಸಲ್ಪಟ್ಟಿರುವ ಭಾತ್ರಾನ ಪುಸ್ತಕದಲ್ಲಿಯೂ ಕಾಣಸಿಗುತ್ತದೆ. ಭಾತ್ರಾ ಹೇಳುವಂತೆ ಪ್ರಾಚೀನ ಭಾರತದಲ್ಲಿ ಕಾರು ಮತ್ತು ವಿಮಾನಗಳು ಇದ್ದವಂತೆ. ಅವುಗಳೇ ರಾಮನನ್ನು ಅಯೋಧ್ಯೆಗೆ ಕರೆತಂದವಂತೆ. ಭಾತ್ರಾ ಮತ್ತು ಆರ್‌ಎಸ್‌ಎಸ್, ಶಾಲಾ ಪಠ್ಯದಲ್ಲಿ ವೇದಿಕ್ ಗಣಿತವನ್ನು ಸೇರಿಸುವ ಕುರಿತು ಮಾತನಾಡುತ್ತಿದ್ದಾರೆ. ಆದರೆ ವೇದೀಯ ಗಣಿತಗಳ ಪುಸ್ತಕಗಳ ಕುರಿತು ವೇದೀಯ ಅನ್ನುವಂತದ್ದೇನೂ ಇಲ್ಲ, ಪುರಿಯ ಶಂಕರಾಚಾರ್ಯ ರಚಿಸಿದ ವೇದೀಯ ಗಣಿತ ಕೃತಿಗಳು ಅಂತೇನು ಅವರು ಕರೆಯುತ್ತಿದ್ದಾರಲ್ಲ, ಅವೆಲ್ಲಾ ಆತನ ಮರಣಾನಂತರ ಪ್ರಕಟಿತವಾದಂತವು. ಅಸಲಿಗೆ ಈ ಎಲ್ಲಾ ಉದಾಹರಣೆಗಳು, ಇತಿಹಾಸದ ಭಾರತೀಕರಣ ಎನ್ನುವುದು 'ಹಿಂದೂ' ಭಾರತ ವೈಭವೀಕರಣವೇ ಹೊರತು ಬೇರೇನೂ ಅಲ್ಲ ಎನ್ನುವುದನ್ನು ಸಾಬೀತುಪಡಿಸುತ್ತವೆ. ಹಿಂದೂ ಕಾಲಾವಧಿಯನ್ನು 'ಸ್ವರ್ಣಯುಗ' ಎಂದು ಬಿಂಬಿಸುವ ಆರ್‌ಎಸ್‌ಎಸ್ ನಂತರದ ಮುಸ್ಲಿಂ ಆಡಳಿತ ಪ್ರಾಬಲ್ಯದ ಕಾಲವನ್ನು 'ಅವನತಿ ಯುಗ' ಎಂದು




ಮೂದಲಿಸುತ್ತದೆ. ಇನ್ನೊಂದು ಅರ್ಥದಲ್ಲಿ ಇದನ್ನು ವಿಶ್ಲೇಷಿಸುವುದಾದರೆ, ಇವರುಗಳ ಇತಿಹಾಸದಲ್ಲಿ ಹಿಂದೂ ವೈಭವೀಕರಣ, ಮುಸ್ಲಿಮರಿಗೆ ಮಸಿಬಳಿಯುವಿಕೆ ಜೊತೆಜೊತೆಯಾಗಿಯೇ ಸಾಗುತ್ತದೆ. ಇತಿಹಾಸಕಾರರಾಗಿ ನಾವು ಯಾವುದೇ ಒಂದು ಕಾಲಘಟ್ಟವನ್ನು 'ಕತ್ತಲ ಯುಗ' ಎಂಬುದಾಗಿ ಕರೆಯುವುದನ್ನು ಬಹಳ ಹಿಂದೆಯೇ ಬಿಟ್ಟುಬಿಟ್ಟಿದ್ದೇವೆ. ಆದರೆ ಈಗ ಮೋದಿ ಆಳ್ವಿಕೆಯಲ್ಲಿ ಭಾರತ ಮತ್ತೊಂದು ಕತ್ತಲ ಯುಗಕ್ಕೆ ತಳ್ಳಲ್ಪಡುತ್ತಿದೆ, ನಾವೆಲ್ಲಾ ಇದರ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕಿದೆ.

ಪ್ರ: ಒಬ್ಬ ಇತಿಹಾಸಕಾರನಾಗಿ ದೀನಾನಾಥ ಭಾತ್ರಾ ಮತ್ತು ಭಾರತ ಇತಿಹಾಸ ಕುರಿತು ಅವರ ದೃಷ್ಟಿಕೋನದ ಬಗ್ಗೆ ಏನು ಹೇಳಲು ಬಯಸುತ್ತೀರಿ? ಭಾರತ ಇತಿಹಾಸದ ಕುರಿತಂತೆ ಅವರೊಂದಿಗೆ ಸಂವಾದ ನಡೆಸಲು ಇಚ್ಛಿಸುತ್ತೀರಾ?

ಝಾ: ಭಾತ್ರಾ ಒಬ್ಬ ನಿವೃತ್ತ ಶಾಲಾ ಶಿಕ್ಷಕ ಮತ್ತು ಆರ್‌ಎಸ್‌ಎಸ್ ಪ್ರಚಾರಕ. ಆತನ ಬಗ್ಗೆ ನನಗೆ ಸಂಪೂರ್ಣ ತಿರಸ್ಕಾರವಿದೆ. ಆತನ ಜೊತೆ ಯಾವುದೇ ಸಂವಾದಕ್ಕೆ ಕೂರಲು ನಾನು ಬಯಸುವುದಿಲ್ಲ.

ಪ್ರ: ವಿರೋಧ ಪಕ್ಷಗಳು ಸ್ಮೃತಿ ಇರಾನಿಯ ಶೈಕ್ಷಣಿಕಾರ್ಹತೆಯನ್ನು ಪ್ರಶ್ನಿಸಿದವು. ಈ ಮೊದಲು ಮೌಲಾನಾ ಆಜಾದ್ ಮತ್ತು ಪ್ರೊ. ನೂರುಲ್ಲಾ ಹಸನ್‌ರಂತಹ ಉನ್ನತ ಶಿಕ್ಷಿತರು ನಿರ್ವಹಿಸಿದ ಎಚ್.ಆರ್.ಡಿ (ಮಾನವ ಸಂಪನ್ಮೂಲ ಅಭಿವೃದ್ಧಿ) ಇಲಾಖೆಯ ಹೊಣೆಯನ್ನು ಆಕೆ ವಹಿಸಿಕೊಂಡಿರುವ ಕುರಿತು ನಿಮ್ಮ ಪ್ರತಿಕ್ರಿಯೆ ಏನು? ಇತಿಹಾಸದ ಮರುಸೃಷ್ಟಿಯನ್ನು ಆಕೆ ಎಷ್ಟು ಪ್ರಬಲವಾಗಿ ಕೊಂಡೊಯ್ಯಬಲ್ಲಳು?



ಝಾ: ಎಚ್.ಆರ್.ಡಿ.ಯಂತಹ ಇಲಾಖೆಗೆ ಸ್ಮೃತಿ ಇರಾನಿಯಂತವರನ್ನು ನೇಮಿಸಿರೋದು ನಿಜಕ್ಕೂ ಆಭಾಸವೇ ಸರಿ. ಆದರೆ ಪ್ರಜಾಪ್ರಭುತ್ವದಲ್ಲಿ ಯಾವುದೇ ವ್ಯಕ್ತಿ ತನ್ನ ಶೈಕ್ಷಣಿಕ ಅರ್ಹತೆ ಏನೇ ಇದ್ದರೂ ಉನ್ನತ ಹುದ್ದೆಯನ್ನು ಏರಲು ಅವಕಾಶ ಕಲ್ಪಿಸಿರುವುದರಿಂದ ನಾವಿದನ್ನು ಪ್ರಶ್ನೆ ಮಾಡಲಾಗುವುದಿಲ್ಲ. ಹಿಂದಿನ ಎಚ್.ಆರ್.ಡಿ ಸಚಿವನಾಗಿದ್ದ ಸೈದ್ಧಾಂತಿಕ ಪ್ರೇರಿತನಾಗಿದ್ದ ಮುರಳಿ ಮನೋಹರ್ ಜೋಶಿಯಂತೆಯೇ ಅದನ್ನು ಮುಂದುವರೆಸುತ್ತಾಳೆ, ಆದರೆ ಬೇರೆಯವರು ಈಕೆಗೆ ಮಾರ್ಗದರ್ಶನ ಮಾಡಿ ಅದನ್ನು ಸಾಧ್ಯವಾಗಿಸುತ್ತಾರೆ ಅಷ್ಟೆ.

ಪ್ರ: ಅಟಲ್ ಬಿಹಾರಿ ವಾಜಪೇಯಿ ಅವಧಿಯಲ್ಲಿ ಶಿಕ್ಷಣದ ಕೇಸರೀಕರಣವನ್ನು ವಿರೋಧಿಸಲಾಗಿತ್ತು. ಹತ್ತು ವರ್ಷಗಳ ನಂತರ ಇದೀಗ ಮೋದಿ ಆ ಕಾರ್ಯವನ್ನು ಮತ್ತೆ ಪುನರಾರಂಭಿಸುತ್ತಿದ್ದಾನೆ. ಈ ವಿಚಾರದಲ್ಲಿ ವಾಜಪೇಯಿ ಮತ್ತು ಮೋದಿಯ ಕಾರ್ಯವಿಧಾನಗಳ ನಡುವೆ ಏನಾದರು ಗುಣಾತ್ಮಕ ವ್ಯತ್ಯಾಸಗಳಿವೆ ಎನಿಸುತ್ತಿದೆಯೇ?

ಝಾ: ಶಿಕ್ಷಣದ ಕೇಸರೀಕರಣ ಮತ್ತು ಇತಿಹಾಸದ ಮರುಸೃಷ್ಟಿಯಲ್ಲಿ ವಾಜಪೇಯಿ ಸಂಪೂರ್ಣ ಯಶ ಕಂಡಿರಲಿಲ್ಲ ಹಾಗೂ ಆತನ ನಂತರ ಅಧಿಕಾರಕ್ಕೇರಿದ ಸರ್ಕಾರ ಆ ಪಠ್ಯಗಳನ್ನೆಲ್ಲಾ ವಾಪಸ್ಸು ಪಡೆಯಿತು. ಸಂಪೂರ್ಣ ಸ್ಪಷ್ಟ ಬಹುಮತ ಇರದೇ ಇದ್ದುದು ವಾಜಪೇಯಿಗೆ ಇದ್ದ ಬಹುದೊಡ್ಡ ಮಿತಿಯಾಗಿತ್ತು. ಆದರೆ ಈಗ ಬಿಜೆಪಿಗೆ ಸಂಪೂರ್ಣ ಬಹುಮತ ಲಭಿಸಿದೆ. ನನಗನ್ನಿಸಿದಂತೆ ಮೋದಿ ದೃಢವಾಗಿಯೇ ಮುನ್ನುಗ್ಗಲಿದ್ದಾನೆ. ಹಾಗಾಗಿ ಇವತ್ತಿನ ಸವಾಲುಗಳು ಹಿಂದೆಂದಿಗಿಂತಲೂ ಕಠಿಣವಾಗಿವೆ.

ಪ್ರ: ಬಲಪಂಥೀಯರಿಂದ ಮಾತ್ರವಲ್ಲದೆ, 2004ರಲ್ಲಿ ಯುಪಿಎ-1 ಸರ್ಕಾರ ಅಧಿಕಾರಕ್ಕೇರಿದ ನಂತರ ಪಠ್ಯಪುಸ್ತಕ ರಚನೆಯಲ್ಲಿ ತೊಡಗಿಕೊಂಡ ನವ ಇತಿಹಾಸಕಾರರಿಂದಲೂ ಮಾರ್ಕ್ಸಿಸ್ಟ್ ಚರಿತ್ರಕಾರರು ಟೀಕೆಗೆ ಗುರಿಯಾಗುತ್ತಿದ್ದಾರೆ. ಈ ಬಗ್ಗೆ ಏನು ಹೇಳಲು ಬಯಸುತ್ತೀರಿ?

ಝಾ: ಹೊಸ ಇತಿಹಾಸಕಾರರ ಸಮೂಹ ಅಸ್ತಿತ್ವಕ್ಕೆ ಬಂದಿರುವುದು ನಮಗೆ ನಿಜಕ್ಕೂ ಸವಾಲೇ ಆಗಿದೆ ಮತ್ತು ಆ ಬೆಳವಣಿಗೆಯನ್ನು ನಾವು ಕೂಲಂಕಷವಾಗಿ ಗಮನಿಸುತ್ತಿದ್ದೇವೆ.

ಪ್ರ: ಮಾರ್ಕ್ಸಿಸ್ಟ್ ಚರಿತ್ರಕಾರರು ಜಾತಿ ಪ್ರಶ್ನೆಯನ್ನು ನಿರ್ಲಕ್ಷಿಸಿದ್ದಾರೆ ಎಂಬುದಾಗಿ ಬಹುದೊಡ್ಡ ಟೀಕೆಗಳು ಕೇಳಿಬರುತ್ತಿವೆ. ಇದಕ್ಕೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

ಝಾ: ಇದು ಅರ್ಧ ಮಾತ್ರ ಸತ್ಯ, ಆದರೆ ಜಾತಿ ಪ್ರಶ್ನೆಯ ವಿಚಾರದಲ್ಲೂ ನಾವು ಭಾಗಿಯಾಗಿದ್ದೇವೆ ಎನ್ನುವುದು ಕೂಡಾ ವಾಸ್ತವ. ಆರ್.ಎಸ್. ಶರ್ಮ ಪ್ರಾಚೀನ ಭಾರತದಲ್ಲಿ ಶೂದ್ರರ ಇತಿಹಾಸದ ಬಗ್ಗೆ ಬರೆದ ಪ್ರಥಮ ಇತಿಹಾಸಕಾರ. ಸುವಿರಾ ಜೈಸ್ವಾಲ್ ಮತ್ತು ವಿವೇಕಾನಂದ ಝಾರಂತಹ ಇತರ ಚರಿತ್ರಕಾರರು ಕೂಡಾ ಜಾತಿವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿದ್ದರು. ಶರ್ಮ ಮತ್ತು ವಿವೇಕಾನಂದ ಝಾ ಇಬ್ಬರೂ ಜಾತಿ ವಿಚಾರವಾಗಿ ಅಂಬೇಡ್ಕರರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಜಾತಿವ್ಯವಸ್ಥೆಯನ್ನು ನಿರ್ಲಕ್ಷಿಸುವಂತಹ ಉದ್ದೇಶಪೂರ್ವಕ ಯತ್ನಗಳು ನಡೆದಿವೆ ಅಂತ ನನಗನ್ನಿಸುವುದಿಲ್ಲ.

ಪ್ರ: ನೀವು ಸಂಶೋಧನೆ ಮತ್ತು ಬೋಧನೆಯನ್ನು ಆರಂಭಿಸುವ ವೇಳೆಯಲ್ಲಿ ಮಾರ್ಕ್ಸಿಸ್ಟ್ ಚರಿತ್ರ ಪ್ರಭಾವ ಜೋರಾಗಿತ್ತು. ಆದರೆ ಇಂದು ಅದು ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿಲ್ಲ ಎನ್ನುವುದನ್ನು ನೀವು ಒಪ್ಪಿಕೊಳ್ಳುತ್ತೀರಾ?


ಝಾ: ಇವತ್ತಿಗೂ ನನ್ನ ಆಲೋಚನೆ ಹಾಗೂ ಬರಹಗಳು ಮಾರ್ಕ್ಸಿಸಮ್‌ನಿಂದ ಪ್ರಭಾವಿತವಾಗಿಯೇ ಉಳಿದಿವೆ. ಮಾರ್ಕ್ಸಿಸ್ಟ್ ಆಲೋಚನೆಗಳು ಮೊದಲಿನಷ್ಟು ಇವತ್ತು ಪ್ರಭಾವಿಯಾಗಿ ಉಳಿದಿಲ್ಲದೇ ಇರಬಹುದು, ಆದರೆ ಮಾರ್ಕ್ಸಿಸಂನಿಂದ ಪ್ರೇರಿತವಾದ ಸಾಮಾನ್ಯ ಉದ್ದೇಶವಾದ ಸಮಾನತಾವಾದವು ಇವತ್ತಿನ ಯುವ ಪೀಳಿಗೆಯ ಮೇಲೆ ಪ್ರಭಾವ ಮುಂದುವರೆಸಿಕೊಂಡು ಬರುತ್ತಿದೆ.

ಸಂದರ್ಶನ: ಅಭಯ್ ಕುಮಾರ್, ಪಿಎಚ್.ಡಿ ಅಭ್ಯರ್ಥಿ, ಸೆಂಟರ್ ಫಾರ್ ಹಿಸ್ಟಾರಿಕಲ್ ಸ್ಟಡೀಸ್, ನೆಹರೂ ವಿವಿ

ಕನ್ನಡಕ್ಕೆ: ಗಿರೀಶ್ ತಾಳಿಕಟ್ಟೆ

ಇವನನ್ನು ಜೈಲಿಗೆ ಹಾಕುವವರ್ಯಾರು?

ರೇಪ್ ಜ್ಯೋತಿಷಿ



ಕಟಕ ರಾಶಿಯಲ್ಲಿ ಜನಿಸಿದ ಹೆಣ್ಣು ತನ್ನ 43ನೇ ವಯಸ್ಸಿನಲ್ಲಿ ಅತ್ಯಾಚಾರಕ್ಕೀಡಾಗುತ್ತಾಳಂತೆ. ಕುಂಭ ರಾಶಿಯಲ್ಲಿ ಹುಟ್ಟಿದ ಕನ್ಯೆಗೆ ಆಕೆ ತಂದೆಯ ಅಣ್ಣ ಅಥವಾ ತಮ್ಮ ಅಂದರೆ ದೊಡ್ಡಪ್ಪ ಇಲ್ಲವೇ ಚಿಕ್ಕಪ್ಪ ಯಾರಾದರೂ ರೇಪ್ ಮಾಡುತ್ತಾರಂತೆ. ಮೇಷ ರಾಶಿಯ ಹೆಂಗಸರು ಮನೆಯ ಮೆಟ್ಟಿಲ ಕೆಳಗೆ ರೇಪಾಗುತ್ತಾರೆ. ಸಿಂಹ ರಾಶಿಯಲ್ಲಿ ಹುಟ್ಟಿದ ಹೆಣ್ಣಿಗೆ ಯಾರೋ ಪತಿ ಮತ್ತು ಪತ್ನಿ ಸೇರಿ ರೇಪ್ ಮಾಡಿಸುತ್ತಾರೆ. ವೃಷಭ ರಾಶಿಯಲ್ಲೇನಾದರೂ ಹೆಣ್ಣು ಜನಿಸಿದಳೆಂದರೆ ಆಕೆ ಬಚ್ಚಲ ಮನೆಯಲ್ಲಿ ರೇಪಾಗುವುದು ಶತಸಿದ್ಧ...!

ಇದು ಕನ್ನಡದ ಖ್ಯಾತ ಸುದ್ದಿವಾಹಿನಿಯೊಂದರಲ್ಲಿ ಕುಖ್ಯಾತ ಜ್ಯೋತಿಷಿ ಸಚ್ಚಿದಾನಂದ ಬಾಬು ಯಾನೇ ಸಚ್ಚಿದಾನಂದ ಗುರೂಜಿ ಅರ್ಥಾತ್ ಜ್ಯೋತಿರ್ವಿಜ್ಞಾನ ಚಿಂತಾಮಣಿ, ಜ್ಯೋತಿರ್ ವಿಜ್ಞಾನಿ, ಜ್ಯೋತಿಷ್ಯ ರತ್ನಾಕರ ಸಚ್ಚಿದಾನಂದ ಬಾಬು ಬಾಯಿಂದ ಹೊರಬಿದ್ದ ಅಣಿಮುತ್ತುಗಳು. ಈ ಬಗ್ಗೆ ನಾಡಿನಾದ್ಯಂತ ಫೇಸ್‌ಬುಕ್ ಪ್ರಜ್ಞಾವಂತರ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆ, ಟೀಕೆ, ಖಂಡನೆ, ಪ್ರತಿಭಟನೆಗಳ ಬಿರುಗಾಳಿಯೇ ಎದ್ದಿದೆ. ಪ್ರಮುಖ ಮೌಢ್ಯ ವಿರೋಧಿ ಸಂಘಟನೆಯಾದ ಮಾನವ ಬಂಧುತ್ವ ವೇದಿಕೆಯ ಅಡಿಯಲ್ಲಿ ನಾಡಿನ ಪ್ರಗತಿಪರ ಹೋರಾಟಗಾರರಾದ ಮಾವಳ್ಳಿ ಶಂಕರ್, ಸಿದ್ದಲಿಂಗಯ್ಯ, ಆಮ್‌ಆದ್ಮಿ ಪಕ್ಷದ ರವಿಕೃಷ್ಣಾ ರೆಡ್ಡಿ, ಬಿ.ಟಿ. ಲಲಿತಾನಾಯಕ್, ಪ್ರಭಾ ಸೇರಿದಂತೆ ನೂರಾರು ಮಂದಿ ನಿಡುಮಾಮಿಡಿ ಸ್ವಾಮಿಗಳ ನೇತೃತ್ವದಲ್ಲಿ ಬೆಂಗಳೂರಿನ ಪುರಭವನದೆದುರು ರೇಪ್ ಜ್ಯೋತಿಷ್ಯದ ವಿರುದ್ಧ ಪ್ರತಿಭಟಿಸಿದ್ದಾರೆ.

ಸಾಂಸ್ಕೃತಿಕ ವಿಪರ್ಯಾಸವೋ ಮೀಡಿಯಾ ವೈಪರೀತ್ಯವೋ ಗೊತ್ತಿಲ್ಲ. ದಿನನಿತ್ಯದ ಮಕ್ಕಳ ಮೇಲಿನ ಅತ್ಯಾಚಾರ ಸರಣಿ, ಶಾಲಾ ಹಸುಳೆಗಳ ಮೇಲಿನ ಕಾಮಕೊಟಲೆ ಮತ್ತು ಮಹಿಳೆಯರ ವಿರುದ್ಧದ ಕಾಮುಕ ಅಟ್ಟಹಾಸಕ್ಕೀಗ ಜ್ಯೋತಿಷ್ಯ ವಲಯವೂ ತನ್ನದೇ ಕಾಣಿಕೆ ಸಲ್ಲಿಸುತ್ತಿದೆ. ಯಾವ ಜ್ಯೋತಿಷಿಯೂ ಕೈಹಾಕದ ಅಧಿಕ ಪ್ರಸಂಗಿತನವೊಂದಕ್ಕೆ ಹೈಟೆಕ್ ಜ್ಯೋತಿಷಿಯೆಂದೇ ಸ್ವಯಂಘೋಷಿತ ಸಚ್ಚಿದಾನಂದ ಬಾಬು ಕೈಹಾಕಿದ್ದಾನೆ. ರೇಪು, ಕಾಮ, ಕೀಚಕ ಚೇಷ್ಟೆಗಳ ಬೊಬ್ಬೆಗೆ ತನ್ನ ಜ್ಯೋತಿರ್ವಿಜ್ಞಾನದ ವಿಶೇಷ ಕೊಡುಗೆಯನ್ನೇ ನೀಡಿದ ಪ್ರಥಮ ಜ್ಯೋತಿಷಿಯೆಂಬ ಹಣೆಪಟ್ಟಿಗೀಡಾದ ಸಚ್ಚಿದಾನಂದ ಬಾಬು ವಿರುದ್ಧ ಕಾನೂನು ಕ್ರಮ ಜರುಗಿಸಲು ನಾಡಿನ ಪ್ರಜ್ಞಾವಂತ ಯುವಕರ ದಂಡೇ ಅಣಿಯಾಗುತ್ತಿದ್ದರೆ ಇಟ್ಟ ಬೆಂಕಿಯಲ್ಲೇ ಚಳಿ ಕಾಯಿಸಿಕೊಳ್ಳುತ್ತಿರುವ ನ್ಯೂಸ್ ಚಾನಲ್ಲುಗಳ ಕೇಡಿತನಕ್ಕೆ ಮಾತ್ರ ಯಾವ ಮದ್ದೂ ಇದ್ದಂತಿಲ್ಲ.

ವಂಚಕರ ಕೂಟ

ಕನ್ನಡದ ವ್ಯಾಪ್ತಿ ಮತ್ತು ಸುದ್ದಿ ಸಾಧ್ಯತೆಯನ್ನೇ ಅಣಕಿಸುವಂತೆ ಬೇಕಾಬಿಟ್ಟಿ ಹುಟ್ಟಿಕೊಂಡ ನ್ಯೂಸ್‌ಚಾನೆಲ್ಲುಗಳ ವಿಕೃತಿಗೆ ತಕ್ಕಂತೆಯೇ ರೇಪು ವಿಜೃಂಭಿಸುತ್ತಿದೆ. ಮತ್ತೊಂದೆಡೆ ಯಥೇಚ್ಛ ಜ್ಯೋತಿಷ್ಯದ ಮೌಢ್ಯ ಜಾತಕ ಫಲ, ದಿನ ಭವಿಷ್ಯ, ರಾಶಿ ಫಲ, ಕಾಲಜ್ಞಾನ, ಹೊಂಬೆಳಕು, ಓಂಕಾರ, ದರ್ಪಣ, ದಿವ್ಯಜ್ಯೋತಿ, ಬ್ರಹ್ಮಾಂಡ, ಸಂಸ್ಕಾರ, ಕಾಲ ನಿರ್ಣಯ, ಬ್ರಹ್ಮಾಂಡ ಭಂಡಾರ, ಸಂಖ್ಯಾಶಾಸ್ತ್ರ ಜ್ಯೋತಿರ್ವಿಜ್ಞಾನ- ಹೀಗೆ ಪ್ರತಿನಿತ್ಯ ಬೆಳಗಾಯಿತೆಂದರೆ ಸಾಕು ಜ್ಯೋತಿಷಿ ವೇಷದ ಹಗಲು ದರೋಡೆಕೋರರ ಹಾವಳಿ ಶುರುವಾಗುವುದು ಟೀವಿಗಳ ಮೂಲಕವೆ.

ಬ್ರಹ್ಮಾಂಡ ಪಿಂಡ ನರೇಂದ್ರಬಾಬು ಶರ್ಮ, ಹುಟ್ಟಾ ವಂಚಕ ಆನಂದ್ ಗುರೂಜಿ, ರೇಪಿಸ್ಟ್ ದೇವಿಶ್ರೀ ಗುರೂಜಿ, ದಗಲುಬಾಜಿ ಆರ್ಯವರ್ಧನ್, ನಯವಂಚಕ ಎಸ್.ಕೆ. ಜೈನ್, ಸಂಖ್ಯಾವಂಚಕ ಶ್ರೀನಿವಾಸನ್, ಕಪಟ ತಾಂತ್ರಿಕ ಸೋಮಯಾಜಿ, ರವಿಶಂಕರ್ ಗುರೂಜಿ, ರಾಘವೇಂದ್ರ ಮೋಕ್ಷಗುಂಡಂ, ಗೋಪಾಲಕೃಷ್ಣ ಶಂಭುಪಂಡಿತ- ಹೀಗೆ ಶುರುವಾಗುವ ವಂಚಕ ಜ್ಯೋತಿಷಿಗಳದ್ದೇ ದೊಡ್ಡ ಪಟ್ಟಿಯಿದೆ. ಹಕ್ಕಿ ಶಕುನ, ಹಲ್ಲಿ ಶಕುನ, ಕರ್ಣಪಿಶಾಚಿನಿ, ಮಚ್ಚೆಫಲ, ನಕ್ಷತ್ರ ಫಲ, ನಾಯಿ ಶಕುನ, ಕುಡಿದು ಖಾಲಿ ಬಿಟ್ಟ ಕಾಫಿ ಕಪ್ಪಿಗೂ ಶಕುನ, ಉಟ್ಟ ಬಟ್ಟೆ, ಕೆಟ್ಟ ಗಾಳಿ, ಸುಟ್ಟ ಬೆಂಕಿ- ಹೀಗೆ ಏನೆಲ್ಲ ತಂತ್ರಮಂತ್ರ ಬಳಸಿ ಮುಗ್ಧರನ್ನು ದೋಚಬಹುದೋ ಅಂಥ ಎಲ್ಲಾ ವರಸೆಗಳನ್ನೂ ಈ ಜ್ಯೋತಿಷಿ ಗ್ಯಾಂಗ್ ಶುರುವಿಟ್ಟಿದೆ.

ಈ ಪೈಕಿ ಕೊಂಚ ವಿಭಿನ್ನ ಮತ್ತು ವಿಕೃತ ಚಾಳಿಯಲ್ಲಿ ಸುಲಿಗೆಗಿಳಿದವನು ಸಚ್ಚಿದಾನಂದ ಬಾಬು. ಬೇರೆಲ್ಲಾ ಜ್ಯೋತಿಷಿಗಳು ಹಸ್ತರೇಖೆ, ಮುಖಲಕ್ಷಣ, ರಾಶಿ, ಸಂಖ್ಯೆ ಶಕುನಗಳನ್ನು ಆಧರಿಸಿ ಬುರುಡೆ ಬಿಟ್ಟರೆ ಈತನದ್ದು ಹೈಟೆಕ್ ಶೈಲಿ. ಇಂಥ ರಾಶಿಯವನಿಗೆ ಇಂಥ ರಾಶಿಯದ್ದೇ ಹೆಂಗುಸು ಮದುವೆಯಾದರೆ ಇಷ್ಟೇ ದಿನಕ್ಕೆ ಸಂಸಾರ ಮುರಿದುಬೀಳುತ್ತದೆ. ಶನಿ ಇಷ್ಟನೇ ಮನೆಯಲ್ಲಿದ್ದಾಗ ಇಂಥ ರಾಶಿಯವರು ಗೃಹಪ್ರವೇಶ ಮಾಡಿದರೆ ಆ ಮನೆಗೆ ದಾರಿದ್ರ್ಯ ಪ್ರವೇಶ ಮಾಡುತ್ತದೆ. ಇಂಥ ರಾಶಿಯ ಗಂಡು ಮತ್ತು ಅಂಥಾ ರಾಶಿಯ ಹೆಣ್ಣು ಎಂಥಾ ಲಗ್ನದಲ್ಲಿ ಕೂಡಿದರೆಂದರೆ ಹುಟ್ಟುವ ಮಗುವಿಗೆ ಅಂಗವೈಕಲ್ಯ ಪ್ರಾಪ್ತಿ. ಎಂಥಾ ರಾಶಿಯವರು ಯಾವ ಸಂದರ್ಭದಲ್ಲಿ ಮದುವೆಯಾದರೆ ಎಷ್ಟು ದಿನಗಳೊಳಗೆ ಗಂಡಸು ಅಕಾಲ ಮರಣಕ್ಕೀಡಾಗುತ್ತಾನೆ. ಯಾವ ರಾಶಿಯವರು ಯಾವ ರಾಶಿಯ ಹೆಣ್ಣಿನ ಕೈಹಿಡಿದರೆಂದರೆ ಹೆಂಗುಸು ಪರಪುರುಷನ ಸಂಗಕ್ಕೆ ಬೀಳುತ್ತಾಳೆ. ಎಂಥವರಿಗೆ ಎಂಥಾ ಮಗು ಹುಟ್ಟುತ್ತದೆ, ಯಾವ ನಕ್ಷತ್ರದಲ್ಲಿ ಹುಟ್ಟಿದ ಮಗಳು ಜಾತಿ ಬಿಟ್ಟು ಪ್ರೇಮಿಸುತ್ತಾಳೆ, ಎಂಥಾ ರಾಶಿಯ ತಂದೆತಾಯಿಗಳಿಗೆ ಮಗಳ ಪ್ರೇಮವಿವಾಹದಿಂದ ಕಂಟಕ- ಹೀಗೆ ಸಮಾಜದ ಪರಿಸ್ಥಿತಿ, ಟ್ರೆಂಡ್ ವಿದ್ಯಮಾನಗಳಿಗೆ ತಕ್ಕಂತೆ, ಸಚ್ಚಿದಾನಂದ ಬಾಬುವಿನ ಜ್ಯೋತಿಷ್ಯ ಫಲವೂ ಚಿತ್ರವಿಚಿತ್ರ ರೂಪ ತಾಳುತ್ತದೆ!



ಗುರೂಜಿಗೆ 6 ತಿಂಗಳ ಕಾಲ ಟೈಮೇ ಇಲ್ಲ, 6 ತಿಂಗ[ಳ] ನಂತರ ಟ್ರೈ ಮಾಡಿ ಎನ್ನುತ್ತಾರೆ. ಅದು ಆತನ ವಂಚ[ನೆ] ಶೈಲಿ. 6 ತಿಂಗಳು ಕಾಯುವ ತಾಳ್ಮೆ ತಾನೇ ಯಾರಿಗಿರುತ್ತ[ದೆ]. ಕಂಗಾಲಾದ ಗಿರಾಕಿಗಳು ಪ್ರತಿನಿತ್ಯ ಈತನ ಅಡ್ಡೆಗೆ ಗಂಟ[ು] ಬೀಳುತ್ತಾರೆ.

ಲಕ್ಷ ಲಕ್ಷ...!

ಹೀಗೆ ಮೇಲೆ ಬಿದ್ದು ಈತನ ಬುಟ್ಟಿ[ಗೆ] ಬೀಳುವವರಿಗೆಂದೇ ವಿಶಿಷ್ಟ ತಂತ್ರವೊಂದನ್ನು ಪ್ರಯೋಗಿಸಲಾಗುತ್ತದೆ. ಅದು ಕೇವಲ ಮೂರು ಪ್ರಶ್ನೆಗಳ[ನ್ನು] ಕೇಳುವ ಅವಕಾಶ. ಮೂರು ಪ್ರಶ್ನೆಗೆಂದು ಮೂರು ಸಾವಿ[ರ] ರೂಪಾಯಿ ಮತ್ತು ಕೇವಲ 15 ನಿಮಿಷಗಳ ಕಾಲಾವಕಾ[ಶ]. ಈ 15 ನಿಮಿಷದಲ್ಲಿ ಕೇಳುವ ಮೂರು ಪ್ರಶ್ನೆಗಳ ಪೈ[ಕಿ] ಒಂದು ಪ್ರಶ್ನೆಗೆ 'ಇನ್ನು ಒಂದು ವರ್ಷದಲ್ಲಿ ನಿನ್ನ ಗಂಡ[ನ] ಪ್ರಾಣಕ್ಕೆ ಗಂಡಾಂತರವಿದೆ' ಎಂದೋ 'ನಿನ್ನ ಮಗಳು ಲ[ವ್] ಮ್ಯಾರೇಜಾಗುತ್ತಾಳೆ, ನಿನ್ನ ಮಗನಿಗೆ ಆಕ್ಸಿಡೆಂಟಾಗಲಿ[ದೆ], ವ್ಯಾಪಾರದಲ್ಲಿ ನಷ್ಟ ಕಾದಿದೆ.' ಇತ್ಯಾದಿ ಅನಿಷ್ಟದ ಭೀತಿಯ[ನ್ನು] ಬಿತ್ತಿರುತ್ತಾನೆ.

ಮೊದಲೇ ಸಂಕಷ್ಟಕ್ಕೆ ಸಿಲುಕಿ ಹೈರಾಣಾದವರಿಗೆ ಈತ[ನ] ಭವಿಷ್ಯ ಕೇಳಿದ್ದೇ ಇನ್ನಷ್ಟು ಭೀತಿಯಾಗಿ ಮನೆಮ[ಠ] ಮಾರಿಯಾದರೂ ಸೈ ಪರಿಹಾರ ಮಾಡಿಕೊಳ್ಳುವ ಆತಂ[ಕಕ್ಕೆ] ಬೀಳುತ್ತಾರೆ. ಪರಿಹಾರವೇನೂ ಕಮ್ಮಿಯ ಮಾತಲ್ಲ, ಪ್ರ[...] ಪ್ರಾರಬ್ಧ ದೋಷ ನಿವಾರಕ ತಂತ್ರಕ್ಕೆ 1 ಲಕ್ಷ, ವ್ಯಾಪಾ[ರ] ಫಲ ಪೂಜೆಗೆ ಒಂದೂವರೆ ಲಕ್ಷ, ದಾಂಪತ್ಯ ಕಲ[ಹ] ನಾಶಕ್ಕೆ ಒಂದೂಕಾಲು ಲಕ್ಷ, ಪತಿ ಪ್ರಾಣಮುಕ್ತಿಗೆ ಎರಡೂ[ವರೆ] ಲಕ್ಷ, ಪುತ್ರಿ ಪ್ರಾರಬ್ಧ ಮುಕ್ತಿಗೆ ಒಂದೂವರೆ ಲಕ್ಷ- ಹಿ[ೀಗೆ] ಬುಟ್ಟಿಗೆ ಬಿದ್ದವರನ್ನು ಬೋಳಿಸಲೆಂದೇ ಬಾಬು ಚಿತ್ರವಿಚ[ಿತ್ರ] ತಂತ್ರಗಳನ್ನು ಹೆಣೆದಿರುತ್ತಾನೆ.

ಪ್ರತಿವಾರ ಟಿವಿಯಲ್ಲಿ ಇಂಥ ಒಂದಿಲ್ಲೊಂದು ಭೂ[...] ಬಿಟ್ಟೇ ಮಿಕಗಳನ್ನು ಬುಟ್ಟಿಗೆ ಬೀಳಿಸಿಕೊಳ್ಳುವ ಸಚ್ಚಿದಾನಂ[ದ] ಬಾಬು ಒಂದು ವಾರ ಅತ್ತೆ-ಸೊಸೆ ಕಲಹದ ಕುರಿತ[ು] ವಿಚಿತ್ರ ಜ್ಯೋತಿಷ್ಯದ ಹೊಗೆ ಬಿಟ್ಟರೆ ಮತ್ತೊಂದು ವಾ[ರ] ಪತ್ನಿ ಚಾಂಚಲ್ಯದ ಭೊಂಗು ಬಿಡುತ್ತಾನೆ.

ಯಾವ ರಾಶಿಗೆ ಸೇರಿದ ಹುಡುಗಿಗೆ ಎಂಥಾ ಕ[...] ಅತ್ತೆ ಸಿಗುತ್ತಾಳೆ. ಎಂಥಾ ರಾಶಿಯ ಅತ್ತೆಗೆ ಎಂ[ಥಾ] ಜಗಳಗಂಟಿ ಸೊಸೆ ಬರುತ್ತಾಳೆ. ಎಂಥಾ ಜಾತಕವಿ[...] ಅತ್ತೆ-ಸೊಸೆ ಮಧ್ಯೆ ಹಗೆ ಬೀಳುತ್ತದೆ. ಪತ್ನಿಯ ಜಾ[ತಕ] ಹೇಗಿದ್ದರೆ ಆಕೆ ಪರಪುರುಷನ ಸಂಗಕ್ಕೆ ಬೀಳುತ್ತಾಳೆ. ಗಂ[ಡನ] ಜಾತಕ ಏನಾದರೆ ಪತ್ನಿಯ ತಲೆ ಕೆಡುತ್ತದೆ; ಇತ್ಯಾ[ದಿ] ಜ್ಯೋತಿಷ್ಯ ಶಾಸ್ತ್ರದಲ್ಲೆಂದೂ ಕಂಡರಿಯದ ಫಲಾಫಲಗಳ[ನ್ನು] ಖದೀಮ ಬಾಬು ಹುಟ್ಟು ಹಾಕುತ್ತಾನೆ. ಸಣ್ಣದೊಂ[ದು] ವಿವೇಚನೆ ಕನಿಷ್ಠ ಪ್ರಜ್ಞೆ ಕೂಡ ಇಲ್ಲದೆ ಚಾನಲ್ಲುಗ[ಳು] ಅದನ್ನು ಬಿತ್ತರಿಸುತ್ತವೆ.

ಲವ್ ಜಿಹಾದ್‌ಗೂ...!

ಉದಾಹರಣೆಗೆ-ಟೀವಿ ಚಾನಲ್ಲುಗಳಲ್ಲಿ ಲವ್ ಜಿಹಾದ್ ಕುರಿತಂತೆ ಚಿತ್ರವಿಚಿತ್ರ ಸುದ್ದಿ ಚರ್ಚೆಗಳು ಶುರುವಾದಾಗಲೇ ಈತನ ಲವ್ ಮ್ಯಾರೇಜ್ ಜ್ಯೋತಿಷ್ಯ ಶುರುವಾಗುತ್ತದೆ.

ಕಟಕರಾಶಿಯ ತಂದೆಗೆ ಗುರು ಇಷ್ಟನೇ ಮನೆಯಲ್ಲಿದ್ದರೆ ಆತನ ಮಗಳು ಅನ್ಯಧರ್ಮೀಯನ ಪ್ರೀತಿಗೆ ಬೀಳುತ್ತಾಳೆ. ಸಿಂಹರಾಶಿಯ ತಾಯಿಗೆ ಶನಿ ಇಷ್ಟನೇ ಮನೆಗೆ ವಕ್ರಿಸಿದರೆ ಆಕೆಯ ಮಗಳು ಕೀಳುಜಾತಿಯವನ ಪ್ರೇಮಪಾಶಕ್ಕೆ ಸಿಲುಕುತ್ತಾಳೆ. ಮಗ ಸಿಂಹರಾಶಿಯವನಾಗಿದ್ದರೆ ಆತ ಕೈಹಿಡಿಯಬೇಕಾದ ಹುಡುಗಿ ಕೆಟ್ಟಚಾಳಿಗೆ ಬೀಳುತ್ತಾಳೆ. ಮೇಷ ರಾಶಿಯ ತಂದೆ ಮತ್ತು ಕುಂಭರಾಶಿಯ ತಾಯಿಗೆ ಹುಟ್ಟುವ ಮಗಳು ತನ್ನ ಇಷ್ಟನೇ ವಯಸ್ಸಿನಲ್ಲಿ ಲವ್ ಮ್ಯಾರೇಜ್ ಮಾಡಿಕೊಳ್ಳುತ್ತಾಳೆ!

ಇಂಥ ವಿಚಿತ್ರ ಭವಿಷ್ಯವೊಂದನ್ನು ಇಲ್ಲಿಗೆ ತಿಂಗಳ ಹಿಂದೆ ಇದೇ ಸಚ್ಚಿದಾನಂದಬಾಬು ತನ್ನ ರಾಶಿ ಫಲದಲ್ಲಿ ಹೇಳಿಕೊಂಡಿದ್ದ. ಅದೂ ಎಂಥಾ ಸಂದರ್ಭವೆಂದರೆ ರಾಷ್ಟ್ರವ್ಯಾಪಿ ಸಂಘ ಪರಿವಾರ ಲವ್ ಜಿಹಾದ್‌ನ ಹೊಗೆ ಬಿಟ್ಟಿದ್ದ ಸಂದರ್ಭದಲ್ಲಿ!

ಹಾಗಂತ ಕೇವಲ ಜ್ಯೋತಿಷ್ಯಕ್ಕಷ್ಟೇ ಈ ಬಾಬು ಸೀಮಿತನಲ್ಲ, ಮಗಳು ಲವ್ ಮ್ಯಾರೇಜ್ ಆಗಕೂಡದು ಎಂದರೆ ಅದಕ್ಕೂ ಈತನಲ್ಲಿ ಪರಿಹಾರವಿದೆ. ಈ ರೀತಿ ಟಿವಿಯಲ್ಲಿ ಜ್ಯೋತಿಷ್ಯ ಹೇಳುವಾಗಲೇ ಪರದೆಯ ಮೇಲೆ ಆತನ ದೂರವಾಣಿ ಸಂಖ್ಯೆಯನ್ನೂ ಪದೇಪದೇ ಬಿತ್ತರಿಸುತ್ತಾರೆ. ಆನಂತರ ಅವನನ್ನು ಹಿಡಿದು ಕಣಿ ಕೇಳಬೇಕೆಂದರೆ ವಾರಗಟ್ಟಲೇ ಫೋನ್ ಮಾಡಬೇಕು. ಹಾಗೊಮ್ಮೆ ವಾರಕಳೆದು ಅತ್ತಲಿಂದ ಯಾರಾದರೂ ಫೋನೆತ್ತಿಕೊಂಡರೆ

ಭುಗಿಲೆದ್ದ ಆಕ್ರೋಶ

ಇಂಥ ದಗಲುಬಾಜಿ ಜ್ಯೋತಿಷ್ಯದ ಪರಮಾ[ವಧಿ] ಯೆಂಬಂತೆ ಇಲ್ಲಿಗೆ ವಾರದ ಹಿಂದೆ ಸಚ್ಚಿದಾನಂದ ಬಾ[ಬು] ಕೈಯಿಟ್ಟ ದುಸ್ಸಾಹಸವೇ ರೇಪು ಜ್ಯೋತಿಷ್ಯ. ಅದ[ಕ್ಕೂ] ಮುನ್ನ ಪ್ರೆಸ್‌ಕ್ಲಬ್ಬಿನಲ್ಲಿ ಯಾವುದೋ ಶಾಸ್ತ್ರ ಸಂಬ[ಂಧಿ] ಪತ್ರಿಕಾಗೋಷ್ಠಿಯೊಂದಕ್ಕೆ ಬಂದಿದ್ದ ಬಾಬುಗೆ [...] ವರದಿಗಾರ್ತಿಯೊಬ್ಬಳು 'ಅಲ್ಲಾ ಗುರೂಜಿ ಹೇಳಿಕೇಳಿ [...] ರೇಪು ಸೀಝನ್ನು, ಈ ಬಗ್ಗೆ ನಿಮ್ಮ ಜ್ಯೋತಿಷ್ಯ[ದಲ್ಲಿ] ಏನಾದರೂ ಪರಿಹಾರವುಂಟಾ?' ಎಂದು ಬಟ್ಟೆಳ[...] ಆಕೆಯೆದುರು ಪ್ರಕಾಂಡ ಪಂಡಿತನಂತೆ 'ನಾನು ಹೇಳಿದ[ಂತೆ] ಜನ ಕೇಳಿದ್ರೆ ಇಂಥದ್ದೆಲ್ಲಾ ಆಗುತ್ತಿತ್ತಾ? ಈ ಜ[ನಕ್ಕೆ] ಬುದ್ಧಿಯಿಲ್ಲ, ಅದಕ್ಕೇ ಹೀಗಾಗ್ತಿರೋದು' ಎಂದು ಭ[...] ಕುಣಿಸಿದ ಸಚ್ಚಿದಾನಂದ ಬಾಬು ಒಂದೇ ವಾರಕ್ಕೆ [...] ರೇಪು ಜ್ಯೋತಿಷ್ಯ ಸಿದ್ಧಾಂತವನ್ನು ಪ್ರಯೋಗಿಸಿಬಿಟ್ಟಿದ[್ದ].

ರೇಪು ನಡೆಯೋದೇ ಜಾತಕ ದೋಷದಿಂದ. ಇಂ[ಥ] ರಾಶಿಯ ಹೆಣ್ಣಿಗೆ ಇಂಥಾ ಜಾತಕದಿಂದಲೇ ಮಾನಭ[ಂಗ] ಇಂಥ ಜಾತಕದ ತಂದೆತಾಯಿಗಳಿಗೆ ಹೆಣ್ಣು ಜನಿಸ[ಿದರೆ] ಆಕೆ ತನ್ನ ಇಷ್ಟನೇ ವರ್ಷಕ್ಕೆ ಅತ್ಯಾಚಾರಕ್ಕೀಡಾಗುತ[್ತಾಳೆ]

ಜ್ಯೋತಿಷ್ಯ, ಭಿಕ್ಷೆ, ತಾಯತ, ವಾಕ್‌ಪೌರುಷದ ವಿರುದ್ಧ ಕಾನೂನು ಮತ್ತು ಜೈಲುಶಿಕ್ಷೆ!

ಟಿವಿ ಜ್ಯೋತಿಷಿಗಳ ಹಾವಳಿ ವಿರುದ್ಧ ಪ್ರಜ್ಞಾವಂತ ಯುವಕರದೊಂದು ಪಡೆಯೇ ಸಜ್ಜಾಗಿ ನಿಂತಿದೆ. ಇದಕ್ಕೆಂದೇ **Kickout Astrologers** ಎಂಬ ಬ್ಲಾಗ್ ಕೂಡ ಅಣಿಯಾಗಿದೆ. ನಾಡಿನ ಉದ್ದಗಲಕ್ಕೂ ಅಮಾಯಕರನ್ನು ದೋಚುತ್ತಿರುವ ಕಪಟ ಜ್ಯೋತಿಷಿಗಳ ಪೂರ್ತಿ ಜಾತಕ, ವಂಚನಾವೈಖರಿ ಎಲ್ಲವನ್ನೂ ಈ ತಂಡ ಇಷ್ಟರಲ್ಲೇ ಜಾಲಾಡಲಿದೆ. ಇದರ ಹೊರತಾಗಿಯೂ ಈಗಿರುವ ಕಾನೂನಿನಲ್ಲೇ ಈ ಜ್ಯೋತಿಷಿಗಳನ್ನು ಜೈಲಿಗಟ್ಟಲು ಸಾಕಷ್ಟು ಅವಕಾಶಗಳಿದ್ದರೂ ಈ ಬಗ್ಗೆ ಪೊಲೀಸ್ ಇಲಾಖೆಗೇ ಗೊತ್ತಿರುವಂತಿಲ್ಲ.

ಐಪಿಸಿ ಸೆಕ್ಷನ್ 363 (ಎ) ಪ್ರಕಾರ ಭಿಕ್ಷೆ ಬೇಡುವುದಕ್ಕೂ, ಭವಿಷ್ಯ ಹೇಳಿ ವಂಚಿಸಿ ದುಡ್ಡು ಕೀಳುವುದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ. ಐಪಿಸಿ ಸೆಕ್ಷನ್ 419 **(Punishment for cheating)** ಪ್ರಕಾರ ಜ್ಯೋತಿಷ್ಯ, ಶಕುನ ಶಾಸ್ತ್ರಗಳ ಹೆಸರಲ್ಲಿ ಹಣ ಪಡೆದು ರಶೀದಿ ನೀಡದೆ ಹೋದರೆ ಅದಕ್ಕೆ ಮೂರು ವರ್ಷಗಳ ಜೈಲುಶಿಕ್ಷೆ ಅಥವಾ ದಂಡ ಅಥವಾ ಇವೆರಡನ್ನೂ ಒಟ್ಟಿಗೆ ವಿಧಿಸುವ ಅಧಿಕಾರ ನ್ಯಾಯಾಲಯಕ್ಕಿದೆ. ಇದಲ್ಲದೆ ಮಂತ್ರ, ತಂತ್ರ, ಜ್ಯೋತಿಷ್ಯವೆಂದು ಜನರನ್ನು ನೇರ ಭೇಟಿಗೆ ಕರೆದು ನಂಬಿಸಿ ದುಡ್ಡು ಕೀಳುವುದು, ಮತ್ತು ಅದಕ್ಕೆ ರಶೀದಿ ಕೊಡದೆ ಇದ್ದರೆ ಅದಕ್ಕೂ 3 ವರ್ಷಗಳು ಜೈಲು ಮತ್ತು ದಂಡ ವಿಧಿಸಬಹುದು.

ಚುನಾವಣೆ ವೇಳೆ ಇಂಥಾ ರಾಶಿಯವರೇ ಗೆಲ್ಲುತ್ತಾರೆ. ಸೋಲುತ್ತಾರೆ ಎಂದೇನಾದರೂ ಜ್ಯೋತಿಷ್ಯ ನುಡಿಯುವುದು ಅಪರಾಧ. ಇದಕ್ಕೂ 3 ವರ್ಷ ಜೈಲು ಮತ್ತು ದಂಡವಿಧಿಸಬಹುದು. **The drugs and magic remedies (abjectionable advertisement) Act 1954**ರ ಪ್ರಕಾರ ತಾಯತ, ಹರಳು, ಪಚ್ಚೆ ಉಂಗುರ, ಹನುಮಾನ್ ಚಾಳೀಸ, ಬೂದಿ, ಭಸ್ಮ ಮಾರುವುದು ವಂಚನೆ ಮತ್ತು ಶಿಕ್ಷಾರ್ಹ ಅಪರಾಧವಾಗುತ್ತದೆ. ಇದೇ ಕಾಯ್ದೆಯ ಕಲಂ 5ರ ಪ್ರಕಾರ ನಿಷೇಧಿತ, ಅವೈಜ್ಞಾನಿಕ, ಆರೋಗ್ಯ ಪರಿಹಾರಗಳನ್ನು ಹೇಳುವುದು, ಲೈಸೆನ್ಸ್ ಇಲ್ಲದೆ ಜ್ಯೋತಿಷ್ಯ ಹೇಳುವುದು, ರಶೀದಿಯಿಲ್ಲದೆ ಶುಲ್ಕ ವಸೂಲಿ ಮಾಡುವುದು, ಮಹಿಳೆಯ ಬಗ್ಗೆ ಅವಹೇಳನಕಾರಿಯಾಗಿ ಮಾತಾಡುವುದು, ಕೆಳಜಾತಿಗಳನ್ನು ಹೀಗಳೆಯುವುದು **Broadcast and Communication Regulation Act** ಮತ್ತು ಆದಾಯ ತೆರಿಗೆಯ **ULB Act** ಪ್ರಕಾರ ಪೊಲೀಸರು ಯಾರೇ ಜ್ಯೋತಿಷಿಯನ್ನು ಬಂಧಿಸಬಹುದು. ಕೋರ್ಟು ಅಂಥವರನ್ನು ಜೈಲಿಗೂ ಹಾಕಬಹುದು.

ಕಾನೂನಿನಲ್ಲೇ ಇಷ್ಟೆಲ್ಲ ಅವಕಾಶಗಳಿರುವಾಗ ಜನ ಇಂಥವರ ವಿರುದ್ಧ ಧೈರ್ಯವಾಗಿ ದೂರು ನೀಡಬಹುದು ಮತ್ತು ಪೊಲೀಸರು ನಿರ್ದಾಕ್ಷಿಣ್ಯವಾಗಿ ಇಂಥವರನ್ನು ಜೈಲಿಗೂ ಹಾಕಬಹುದು.

...ತಕದ ಕನ್ಯೆಯರು ಅತ್ಯಾಚಾರದಿಂದ ಬಚಾವಾಗ ...ಕೆ ಇಂತಂಥದ್ದೇ ವ್ರತ ಮಾಡಬೇಕು. ಇಂಥಾ ... ಹುಡುಗರು ಇಂಥಾ ರಾಶಿಯವರನ್ನೇ ಹುಡುಕಿ ...ಮಾಡುತ್ತಾನೆ. ಹುಡುಗಿಯರು ಅತ್ಯಾಚಾರಿಗಳಿಂದ ...ಗಲು ಇಂಥದ್ದೇ ಮಂತ್ರ ಪಠಿಸಬೇಕು...!

...ಯಲ್ಲಿ ಬರೋಬ್ಬರಿ ಅರ್ಧಗಂಟೆ ಪ್ರಸಾರಗೊಂಡ ...ವನ ರೇಪು ಭವಿಷ್ಯ ಕೇಳಿಯೇ ಹೆಣ್ಣುಮಕ್ಕಳ ...ದ ಎದೆ ಧಸಕ್ಕೆಂದಿತ್ತು. ಯಾವುದೇ ಲಜ್ಜೆಯಿಲ್ಲದೆ ...ಪ್ ಸಿದ್ಧಾಂತದ ಹೊಗೆ ಬಿಟ್ಟ ಬಾಬು ತಾನು ...ಕವಾಗಿ ಎಸಗುತ್ತಿರುವ ಅಪಚಾರದ ಬಗ್ಗೆ ಕನಿಷ್ಠ ...ಜ್ಜೆ ಭೋಂಗು ಬಿಡುತ್ತಿದ್ದರೆ ಹೆಂಗಳೆಯರೆಲ್ಲ ...ಜ್ಯೋತಿಷ್ಯದ ಅಡ್ಡೆಯೆದುರು ಸಾಲುಗಟ್ಟಿ ನಿಲ್ಲುವ ...ತುಲ್ಲಿದ್ದರು. ಮತ್ತೊಂದೆಡೆ ಪ್ರಜ್ಞಾವಂತ ...ಮೂಹ ಯಾವ ಪರಿ ಬಾಬು ವಿರುದ್ಧ ಸಿಟ್ಟಿಗೆ ... ರಾತ್ರೋರಾತ್ರಿ ಫೇಸ್‌ಬುಕ್ ಮತ್ತಿತರ ಸಾಮಾಜಿಕ ...ಗಳಲ್ಲಿ ಆಕ್ರೋಶ ಭುಗಿಲೇಳುತ್ತಿತ್ತು. ಈ ಬಗ್ಗೆ ... ಪ್ರತಿಭಟನೆ ವ್ಯಕ್ತವಾಗಿದ್ದೇ 'ಬ' ಟೀವಿಯಲ್ಲಿ. ...ತ ಯುವಕರನ್ನೇ ಆಯ್ದು ವಿಶೇಷ ಚರ್ಚಾಗೋಷ್ಠಿ ... 'ಬ' ಟೀವಿಯ ಕಾರ್ಯಕ್ರಮದ ಮಧ್ಯೆಯೇ ...ಯ ಕಿಡಿಯೂ ಹೊತ್ತಿಕೊಂಡಾಗಿತ್ತು. ಮರುದಿನ ಟಿ.ಕೆ. ದಯಾನಂದ್.

ಇವರಿಬ್ಬರ ವಿರುದ್ಧವೂ ಬಾಬು ರಾಜರಾಜೇಶ್ವರಿನಗರ ಪೊಲೀಸ್ ಠಾಣೆಗೆ ಇಲ್ಲದ ಕಾನೂನಿನ ಮೇಲೆ ದೂರು ಕೊಟ್ಟ. ಬೆಂಗಳೂರು ಮಿರರ್‌ನಲ್ಲಿ ಈತನ ರೇಪ್ ಚೇಷ್ಟೆಯನ್ನು ಪ್ರತಿಭಾ ನಂದಕುಮಾರ್ ಖಂಡಿಸಿ ಬರೆದರೆ 5 ಕೋಟಿಯ ಮಾನನಷ್ಟದ ನೋಟಿಸು ಕೊಟ್ಟ. 'ಬ' ಟೀವಿಯಲ್ಲಿ ತನ್ನ ವಿರುದ್ಧವೇ ಕಾರ್ಯಕ್ರಮ ಆಯೋಜಿಸಿದ ವಕೀಲ ರವಿಕುಮಾರ್‌ಗೂ ಧಮಕಿ ಕೊಟ್ಟ! ಪ್ರಶ್ನೆಯೆಂದರೆ ತನ್ನ ವಿರುದ್ಧ ಪ್ರತಿಭಟಿಸಿದವರ ವಿರುದ್ಧ ಪೊಲೀಸ್ ಕಂಪ್ಲೇಂಟು, ಕೇಸ್, ಮಾನನಷ್ಟ ಮೊಕದ್ದಮೆ ಎಂದೆಲ್ಲ ಕಾನೂನಿನ ಅಸ್ತ್ರ ಪ್ರಯೋಗಿಸುವ ಬಾಬು ರೇಪ್‌ಗೆ ಈಡಾದ ಹೆಣ್ಣು ಮಕ್ಕಳನ್ನು ಮಾತ್ರ ಜ್ಯೋತಿಷ್ಯದ ಮೂಲಕ ರಕ್ಷಿಸುತ್ತಾನಂತೆ!

ಜಾತಕದಲ್ಲಿ ಜ್ಯೋತಿಷ್ಯದಲ್ಲಿ ಅತ್ಯಾಚಾರ ತಡೆಯುವವನಿಗೆ, ತನ್ನ ಮಂತ್ರಶಕ್ತಿಯಿಂದ ಅತ್ಯಾಚಾರಿಯ ಮನ ಪರಿವರ್ತಿಸುವವನಿಗೆ, ಗಂಡನ ಅಕಾಲ ಮರಣವನ್ನು ತನ್ನ ಜ್ಯೋತಿಷ್ಯದಿಂದ ತಡೆಯಬಲ್ಲವನಿಗೆ, ರಾಶಿಫಲ ಹೇಳಿ ಕಾಯಿಲೆಗೆ ಔಷಧಿ ಕಲ್ಪಿಸುವವನಿಗೆ ತನ್ನ ವಿರುದ್ಧ ಪ್ರತಿಭಟಿಸಿದವರನ್ನು ತನ್ನದೇ ಜ್ಯೋತಿಷ್ಯದ ಮೂಲಕ ಸಂಭಾಳಿಸುವ ಶಕ್ತಿಯಿಲ್ಲ, ಅಂದರೆ ತನ್ನ ಜ್ಯೋತಿಷ್ಯದ



...ಂಧುತ್ವ ವೇದಿಕೆ ಸಂಘಟನೆಯ ನೂರಾರು ...ಪುರಭವನದೆದುರು ಸೇರಿ ಪ್ರತಿಭಟಿಸಿದರು. ಬಾಬು ...ನಕ್ಕೂ ಮುನ್ನ ಅದರ ಕೊರಳಿಗೆ ಎಕ್ಕಡದ ...ಕಲಾಗಿತ್ತು.

ಜೈಲಿಗೆ ಹಾಕೋರ್‍ಯಾರು?

...ಗೆ ಸಚ್ಚಿದಾನಂದನ ಪಾಪದ ಕೊಡವೂ ತುಂಬಿ ...ತು. ಪ್ರತಿಭಟನೆ ಇನ್ನೆಲ್ಲಿ ತನ್ನ ಬುಡಕ್ಕೇ ಬರುತ್ತೋ ...ಳ್ಳಿ ನಡುಕಕ್ಕೆ ಬಿದ್ದ ಬಾಬು ಯೂ ಟ್ಯೂಬಿನಿಂದ ...ಪ್ ಪ್ರವರದ ಎಪಿಸೋಡನ್ನೇ ಕಿತ್ತು ಹಾಕಿಸಿಬಿಟ್ಟ. ... 'ಬ' ಟೀವಿ ನಡೆಸಿದ್ದ ಪ್ರತಿಭಟನಾರ್ಥ ಚರ್ಚೆಯ ...ನ್ನು ಯೂ ಟ್ಯೂಬಿನಿಂದ ಕಿತ್ತು ಹಾಕಿಸಿದ್ದ. ಆದರೆ ...ತ್ತಿಗಾಗಲೇ ಫೇಸ್‌ಬುಕ್ ಪ್ರಜ್ಞಾವಂತರು ಆತನ ...ರಸೆಯ ಎಪಿಸೋಡು ಪೂರ್ತಿ ಡೌನ್‌ಲೋಡ್ ...ಕೊಂಡಾಗಿತ್ತು. ಅದು ರಾಜ್ಯಾದ್ಯಂತ ಎಲ್ಲೆಲ್ಲಿ ...ೇಕೋ ಅಲ್ಲೆಲ್ಲ ಮುಟ್ಟಾಗಿತ್ತು. ಈ ಪೈಕಿ ದೊಡ್ಡ ... ಪ್ರತಿಭಟನೆಗಿಳಿದವರು ನೆಲಮಂಗಲದ ಜನಪರ ...ಟಗಾರ ಭಾಸ್ಕರ್ ಪ್ರಸಾದ್, ಮತ್ತು ಚಿತ್ರ ನಿರ್ದೇಶಕ ಬಗ್ಗೆ ತನ್ನದೇ ನಂಬಿಕೆಯಿಲ್ಲದವನು ಲೋಕದ ಜನಕ್ಕೆ ಜ್ಯೋತಿಷ್ಯ ಹೇಳುತ್ತಾನೆ.

ಇರಲಿ, ಯಾವುದೋ ರಾಶಿಯ ಹೆಣ್ಣಿಗೆ ಇನ್ನಾವುದೋ ಜಾತಕದವನು ರೇಪ್ ಮಾಡುವುದೇ ಹೌದಾದರೆ ಸಚ್ಚಿದಾನಂದ ಬಾಬುಗೂ ತಾಯಿ ಅಂತ ಹೆಣ್ಣು ಇರಲೇಬೇಕಲ್ಲವೆ? ಕನಿಷ್ಠ ಆತನ ಪತ್ನಿ ಕೂಡ ಒಂದಲ್ಲ ಒಂದು ರಾಶಿಗೆ ಸೇರಿರಲೇ ಬೇಕಲ್ಲವೆ? ಹೆಣ್ಣು ಮಕ್ಕಳಿಲ್ಲದಿದ್ದರೇನಂತೆ ಆತನ ಇಬ್ಬರು ಗಂಡು ಮಕ್ಕಳಾದರೂ ಒಂದಲ್ಲ ಒಂದು ರಾಶಿ ಜಾತಕಕ್ಕೆ ಸೇರಿರಲೇಬೇಕಲ್ಲವೆ? ಹಾಗಾದರೆ ಈತನ ಮಕ್ಕಳಿಬ್ಬರೂ ಯಾವ ಜಾತಕದ ಹೆಣ್ಣು ಮಕ್ಕಳ ಪಾಲಿಗೆ ಕೀಚಕರು? ಈತನ ಪತ್ನಿ ಮತ್ತು ತಾಯಿ ಹೆಣ್ಣಾಗಿ ಹುಟ್ಟಿದ ತಪ್ಪಿಗೆ ಮಾಡಿದ ತಪ್ಪಾದರೂ ಏನು? ಎಂಥಾ ಪ್ರಾಯಶ್ಚಿತ್ತ ಮಾಡಿಕೊಂಡರು?

ವಂಚಕ ಸಚ್ಚಿದಾನಂದ ಬಾಬುವನ್ನು ಜೈಲಿಗೆ ಹಾಕುವವರ್‍ಯಾರು? ಇನ್ನೆಷ್ಟು ಮುಗ್ಧರನ್ನು ಈತ ದೋಚಬೇಕು?

● ರಾ. ಸೋಮನಾಥ್

...ಂಥಾ ತಂದೆಗೆ ಇವನೆಂಥಾ ಮಗ?

...ರ್ನಾಟಕದ ಕಂಡ ಅತ್ಯಂತ ಸಾತ್ವಿಕ ಮತ್ತು ಸಂಭಾವಿತ ಜ್ಯೋತಿಷಿಯೆಂದೇ ಖ್ಯಾತಿವೇತ್ತವರು ಬಿ.ವಿ. ರಾಮನ್. ...ಕ್ಕೆ ಪ್ರಧಾನಿ ಇಂದಿರಾ ಗಾಂಧಿಗೆ ರಾಮನ್ ಜ್ಯೋತಿಷ ಸಲಹೆಗಾರರಾಗಿದ್ದವರು. ಪ್ರಚಾರಕ್ಕಾಗಿ ದುಡ್ಡಿಗಾಗಿ ... ಯಾವತ್ತೂ ವಾಮಮಾರ್ಗ ಹಿಡಿದವರಲ್ಲ, ಮೇಲೆಬಿದ್ದು ಯಾರನ್ನೂ ಸೆಳೆಯಲೂ ಯತ್ನಿಸಲಿಲ್ಲ.




ಅಂಥಾ ಸಂಭಾವಿತನಿಗೆ ಎಂಥಾ ಶನಿ ಸಂತತಿ ಎಂಬಂತೆ ಸಚ್ಚಿದಾನಂದ ಬಾಬು ರಾಮನ್‌ಗೆ ಮಗನಾದ. ರಾಮನ್ ನಿಧನ ನಂತರ ದಂಧೆ ಶುರುವಿಟ್ಟವನು ತಾನು ಪ್ರಶ್ನ, ಜೆಮಿನಿ, ಅಷ್ಟಕವರ್ಗ, ವರ್ಷಪಾಲ ಇತ್ಯಾದಿಯನ್ನೆಲ್ಲ ಅರಿದು ಕುಡಿದಿದ್ದೇನೆಂದ. ಬರುಬರುತ್ತ ವಾಸ್ತು ದಂಧೆಗೂ ಕೈಯಿಟ್ಟ. ಟೀವಿಯಲ್ಲಿ ಈತನ ಕಾರ್ಯಕ್ರಮವೇ ಪಕ್ಕಾ ವಂಚನೆ. ಪ್ರತಿ ಎಪಿಸೋಡಿಗೆಂದು ಐವತ್ತು ಸಾವಿರ ರೂಪಾಯಿ ಕೊಟ್ಟು ತಾನು ಹೇಳಿದ ಪ್ರಶ್ನೆಗಳನ್ನೇ ಕೇಳುವಂತೆ ನಿರೂಪಕಿಗೆ ಧಮಕಿ ಹಾಕುತ್ತಾನೆ. ಕಾರ್ಯಕ್ರಮದ ನಡುವೆ ಶೀರ್ಷಿಕೆ ಹೇಗಿರಬೇಕು, ಏನೇನಿರಬೇಕು, ಮೇಲೆ ಯಾವ ವಾಕ್ಯ ಕೆಳಗೆ ಏನು ಬರೆದಿರಬೇಕು ಎಲ್ಲವನ್ನೂ ಈತನೇ ನಿರ್ಧರಿಸುತ್ತಾನೆ.

ಅಂದರೆ ಇದೊಂದು ವಂಚಕ. ಗಿರಾಕಿಗಳನ್ನು ಬುಟ್ಟಿಗೆ ಬೀಳಿಸುವ ತಂತ್ರವೇ ... ಜ್ಯೋತಿಷ್ಯವೂ ಅಲ್ಲ ಶಾಸ್ತ್ರವೂ ಅಲ್ಲ, ಏಕೆಂದರೆ ಈತನಿಗೇ ಜ್ಯೋತಿಷ್ಯದ ತಲೆಬುಡುಗೊತ್ತಿಲ್ಲ. ಜ್ಯೋತಿಷ್ಯ ... ಖಗೋಳಶಾಸ್ತ್ರದ ಪ್ರಕಾರ ಗ್ರಹಗತಿ ಮತ್ತು ನಕ್ಷತ್ರಗಳ ಚಲನೆಗೂ ಮನುಷ್ಯ ಬದುಕಿನ ಏರುಪೇರುಗಳಿಗೂ ... ಸಂಬಂಧವಿಲ್ಲ. ಏಕೆಂದರೆ ನಭೋಮಂಡಲದಲ್ಲಿ ಯಾವುದೋ ಗ್ರಹದ ಇರುವಿಕೆಯ ಆಧಾರದ ಮೇಲೆ ...ಯಲ್ಲಿ ಹುಟ್ಟು ಸಾವುಗಳು ಸಂಭವಿಸುವುದಿಲ್ಲ. ಹಾಗೆಯೇ ಇನ್ನಾರದೋ ನಕ್ಷತ್ರ ಪುಂಜ ಭೂಮಿಯ ...ದಕ್ಕೆ ಕಂಡಾಕ್ಷಣ ಇಲ್ಲಿನ ಪರಿಸ್ಥಿತಿಗಳು ಬದಲಾಗುವುದಿಲ್ಲ.

...ಗೊಳ್ಳಿ, ಅದು ನಿಜವೇ ಆಗಿದ್ದರೆ ಇದೇ ಸಚ್ಚಿದಾನಂದ ಬಾಬು ಅಕಾಲಮರಣಕ್ಕೀಡಾದ ತನ್ನ ತಮ್ಮನ ...ದರೂ ಉಳಿಸಿಕೊಳ್ಳುತ್ತಿದ್ದ, ತನ್ನ ತಂದೆಯಂತೆ ತಾನೂ ಜ್ಯೋತಿಷ್ಯ ಹೇಳಿಕೊಂಡು ಹೋ... ...ರಾದರೂ ಬಚಾವಾಗುತ್ತಿದ್ದ, ತಾನೇ ಅವರಿವರಿಗೆ ಮುಂದಾಯಿಸಿ ಹೊಟ್ಟೆ ಹೊರೆಯುವುದರ ...ಗೆ ... ... ರೂಪಿಸುವ ಶಕ್ತಿಯಿರಲು ಸಾಧ್ಯವೆ?

ಟಿವಿಯಲ್ಲಿ ವಂಚಕ ಧಾರವಾಹಿ



ಜನಗಣತಿಯೆಂದರೆ ಜಾತಿವಾದವೇ?

ನವೆಂಬರ್ 7ರಂದು ಸುಪ್ರೀಂಕೋರ್ಟ್ ಒಂದು ಆದೇಶವನ್ನು ಹೊರಡಿಸಿದೆ. ಅದು ನಾಲ್ಕಾರು ವರ್ಷಗಳ ಹಿಂದೆ ಜಾತಿ ಜನಗಣತಿಯ ಬಗ್ಗೆ ಮದ್ರಾಸ್ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಅನೂರ್ಜಿತಗೊಳಿಸಿದ ಆದೇಶ. ಭಾರತದ ಸುದ್ದಿ ಮಾಧ್ಯಮಗಳು ಬಹಳ ಉತ್ಸಾಹದಿಂದ ಸುಪ್ರೀಂಕೋರ್ಟ್‌ನ ಈ ಆದೇಶವನ್ನು ಪ್ರಕಟಪಡಿಸಿವೆ. ಈ ದೇಶದ ಹೃದಯಭಾಗದ ಸಮಸ್ಯೆಯಾದ ಜಾತಿ ಪ್ರಶ್ನೆಗೆ ಸಂಬಂಧಿಸಿದ ವಿಷಯವಾದ್ದರಿಂದ ಈ ವಿಷಯದ ಪೂರ್ವಾಪರವನ್ನು ಕೆದಕುವುದು ಒಳ್ಳೆಯದು.

2009ರಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದಲ್ಲಿರುವ ಸಂಘಟನೆಯೊಂದು ಮದ್ರಾಸ್ ಹೈಕೋರ್ಟ್‌ನಲ್ಲಿ ಪಿಐಎಲ್ ದಾಖಲಿಸಿತ್ತು. ಆಯಾ ಜಾತಿಗಳ ವಾಸ್ತವಿಕ ಸ್ಥಿತಿಗತಿ ಮತ್ತು ಜನಸಂಖ್ಯೆ ಆಧಾರದಲ್ಲಿ ಜಾತಿವಾರು ಮೀಸಲಾತಿ ಒದಗಿಸಲು ಸರಿಯಾದ ನೀತಿ ರೂಪಿಸಬೇಕೆಂದೂ, ಅಂಥಾ ನೀತಿ ನಿರೂಪಣೆ ಮಾಡಲು ಸರ್ಕಾರದ ಬಳಿ ಯಾವುದೇ ಅಂಕಿ-ಅಂಶಗಳು ಲಭ್ಯವಿಲ್ಲದ ಕಾರಣ ಸರ್ಕಾರ ಜಾತಿವಾರು ಜನಗಣತಿಯನ್ನು ಕೈಗೊಳ್ಳುವಂತೆ ಕೋರ್ಟ್ ನಿರ್ದೇಶನ ಕೊಡಬೇಕೆಂಬುದು ಆ ಪಿಐಎಲ್‌ನ ಸಾರಾಂಶ.

ಈ ಅರ್ಜಿಯನ್ನು ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್ 2009ರ ಅಕ್ಟೋಬರ್‌ನಲ್ಲಿ ತನ್ನ ತೀರ್ಪು ಪ್ರಕಟಿಸಿ 'ಕೇಂದ್ರ ಸರ್ಕಾರ ಈ ಕೂಡಲೆ ಹೊಸದಾಗಿ ಜಾತಿ ಆಧಾರಿತ ಜನಗಣತಿ ನಡೆಸಬೇಕು; ರಾಷ್ಟ್ರೀಯ ಜನಗಣತಿ ಆಯೋಗ ಆದಷ್ಟು ಬೇಗ ಈ ಕೆಲಸ ಪ್ರಾರಂಭಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು; ಈ ಜನಗಣತಿಯ ಮೂಲಕ ನಿಜವಾದ ಅರ್ಥದಲ್ಲಿ ಸಾಮಾಜಿಕ ನ್ಯಾಯವನ್ನು ಸಾಧಿಸಲು ಅನುವು ಮಾಡಿದಂತಾಗುತ್ತದೆ' ಎಂಬ ನಿರ್ದೇಶನ ನೀಡಿತ್ತು.

ಮತ್ತೊಂದು ಸಂದರ್ಭದಲ್ಲಿ, ಅಂದರೆ 2010ರ ಮೇ ತಿಂಗಳಿನಲ್ಲಿ ಈ ಹಿಂದಿನ ಆದೇಶವನ್ನು ಪುನರುಚ್ಚರಿಸಿದ ಮದ್ರಾಸ್ ಹೈಕೋರ್ಟ್ ನಿಗದಿತ ಕಾಲಮಿತಿಯೊಳಗೆ ಈ ಕಾರ್ಯವನ್ನು ಮುಗಿಸಬೇಕೆಂದು ಸೂಚಿಸಿತ್ತು. ಮದ್ರಾಸ್ ಹೈಕೋರ್ಟ್‌ನ ಈ ಆದೇಶಗಳ ವಿರುದ್ಧ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನ ಮೆಟ್ಟಿಲೇರಿತ್ತು, ಇದರ ಪರಿಣಾಮವಾಗಿ ಮೇಲ್ಕಂಡ ತೀರ್ಪು ಹೊರಬಿದ್ದಿದೆ.


ಸುಪ್ರೀಂಕೋರ್ಟ್ ಜಾತಿವಾರು ಜನಗಣತಿಯ ವಿರುದ್ಧ ತೀರ್ಪು ನೀಡಿದೆ ಎಂಬಂತೆ ಮಾಧ್ಯಮಗಳಲ್ಲಿ ಬಿಂಬಿತವಾಗಿರುವುದು ನಿಜ. ಆದರೆ ಸುಪ್ರೀಂಕೋರ್ಟ್‌ನ ಈ ತೀರ್ಪು ಮಾಧ್ಯಮಗಳು ಬಿಂಬಿಸುತ್ತಿರುವುದಕ್ಕಿಂತ ಬಹಳ ಭಿನ್ನ. ವಾಸ್ತವದಲ್ಲಿ ಸುಪ್ರೀಂಕೋರ್ಟ್ ಜಾತಿವಾರು ಜನಗಣತಿಯ ವಿರುದ್ಧವಾಗಿಯಾಗಲಿ ಅಥವಾ ಪರವಾಗಿಯಾಗಲಿ ತೀರ್ಪು ನೀಡಿಲ್ಲ. ಜನಗಣತಿ ನಡೆಸುವುದು/ಮೀಸಲಾತಿ ಸೌಲಭ್ಯಗಳಂತಹ ನೀತಿ ನಿರೂಪಣೆಗೆ ಸಂಬಂಧಿಸಿದ ವಿಷಯಗಳು ಕಾರ್ಯಾಂಗದ ವ್ಯಾಪ್ತಿಗೆ ಬರುವುದರಿಂದ ನ್ಯಾಯಾಂಗ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಲು ಅವಕಾಶವಿಲ್ಲ ಎಂಬುದು ಸುಪ್ರೀಂ ತೀರ್ಪಿನ ಸಾರಾಂಶ.

ಈ ಹಿಂದೆಯೂ ಕೆಲವು ಸಂದರ್ಭಗಳಲ್ಲಿ ಸುಪ್ರೀಂಕೋರ್ಟ್ ಇಂಥದೇ ತೀರ್ಪು ನೀಡಿರುವುದನ್ನೂ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಮದ್ರಾಸ್ ಹೈಕೋರ್ಟ್ ಭಾವನಾತ್ಮಕ ನೆಲೆಯಲ್ಲಿ ಕಾನೂನಿನಡಿ ಅವಕಾಶವಿಲ್ಲದ ಹೊಸ ಹಾದಿಯನ್ನು ತುಳಿದಿದೆ ಎಂದು ಸುಪ್ರೀಂಕೋರ್ಟ್‌ನ ಜಸ್ಟೀಸ್ ದೀಪಕ್ ಮಿಶ್ರಾ, ಆರ್.ಎಫ್.ನಾರಿಮನ್, ಯು.ಯು. ಲಲಿತ್‌ರನ್ನು ಒಳಗೊಂಡ ತ್ರಿಸದಸ್ಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ವಿಷಯ ಇಷ್ಟು ಸರಳ ಮತ್ತು ನೇರವಾಗಿದ್ದು ಕಾನೂನಿನ ಕನಿಷ್ಠ ಜ್ಞಾನವಿರುವ ಯಾರಿಗಾದರೂ ಇದು ಸುಲಭವಾಗಿ ಅರ್ಥವಾಗುವಂತಿದೆ. ಆದರೆ ಭಾರತದ ಬಹುತೇಕ ಮಾಧ್ಯಮ ಪಂಡಿತರು ಈ ತೀರ್ಪನ್ನು ವಿಭಿನ್ನವಾಗಿ ಬಿಂಬಿಸಿದರು. "ಒಬಿಸಿ ಜಾತಿಗಳಿಗೆ ಮೀಸಲಾತಿ ಒದಗಿಸಬೇಕಾಗಿದ್ದ ವಿವಾದಾತ್ಮಕ ಕಸರತ್ತಿನಿಂದ ಕೇಂದ್ರ ಸರ್ಕಾರವನ್ನು ಸುಪ್ರೀಂಕೋರ್ಟ್ ರಕ್ಷಿಸಿದೆ" ಎಂದು ಜನಪ್ರಿಯ ಇಂಗ್ಲಿಷ್ ಪತ್ರಿಕೆಯೊಂದು ವ್ಯಾಖ್ಯಾನಿಸಿದೆ.

ಮತ್ತೊಂದು ಇಂಗ್ಲಿಷ್ ದಿನಪತ್ರಿಕೆ ಕರ್ನಾಟಕದ ಜಾತಿಗಣತಿಯ ವಿಚಾರಕ್ಕೆ ಸುಪ್ರೀಂತೀರ್ಪನ್ನು ಲಿಂಕ್ ಮಾಡಿ ಒಕ್ಕಲಿಗ ಮತ್ತು ಲಿಂಗಾಯತ ಮುಖಂಡರನ್ನು ಸಂಪರ್ಕಿಸಿ ತಮಗಿಷ್ಟವಾದ ಹೇಳಿಕೆಗಳನ್ನು ಪಡೆದುಕೊಂಡು ಪ್ರಕಟಿಸಿ ಪುಣ್ಯ ಕಟ್ಟಿಕೊಂಡಿದೆ. ಮತ್ತೊಂದು ಪತ್ರಿಕೆ ಜಾತಿ ಜನಗಣತಿಯಿಂದ ಕೋಮುವಾದವೂ ಹೆಚ್ಚಾಗುತ್ತದೆ ಎಂಬ ವಿತಂಡವಾದವನ್ನು ಮಂಡಿಸಿದೆ.

ಇಷ್ಟಕ್ಕೆಲ್ಲಾ ಕಾರಣ ಏನಿರಬಹುದು? ಕಾರ್ಪೋರೇಟ್ ಕಂಪನಿಗಳ ಹಿಡಿತದಲ್ಲಿರುವ ಮಾಧ್ಯಮ ಸಂಸ್ಥೆಗಳು ಮೇಲ್ಜಾತಿ ಮನಸ್ಥಿತಿಯಲ್ಲಿ ಹೂತುಹೋಗಿರುವುದನ್ನು ಹೊರತುಪಡಿಸಿದರೆ ಸದ್ಯಕ್ಕೆ ಅಂಥಾ ಬೇರೆ ಯಾವ ಕಾರಣಗಳೂ ಕಾಣುತ್ತಿಲ್ಲ.



ಈ ತೀರ್ಪಿನ ಬಗ್ಗೆ ಮಾಧ್ಯಮಗಳು ನೀಡಿರುವ ತಿರುಚಿದ ಚಿತ್ರಣದಿಂದಾಗಿ ಸಹಜವಾಗಿಯೇ ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಗೊಂದಲಕ್ಕೆ ಕಾರಣವಾಗಿದೆ. ಯಾಕೆಂದರೆ ಸಿದ್ದರಾಮಯ್ಯ ಸರ್ಕಾರ ಜಾತಿವಾರು ಜನಗಣತಿ ನಡೆಸಲು ತೀರ್ಮಾನಿಸಿ, ಬರುವ ಒಂದೆರಡು ತಿಂಗಳುಗಳಲ್ಲಿ ಅದನ್ನು ಪೂರ್ಣಗೊಳಿಸುವುದಾಗಿ ಈಗಾಗಲೇ ಘೋಷಿಸಿದೆ. ಈ ಯೋಜನೆಗೆ ಹಲವು ಶಕ್ತಿಗಳು ಈಗಾಗಲೇ ವಿರೋಧ ವ್ಯಕ್ತಪಡಿಸಿರುವುದರಿಂದ ಒಂದಿಷ್ಟು ಗೊಂದಲಕ್ಕೆ ಕಾರಣವಾಗಿದೆ.

ಏನಿದು ಜಾತಿಗಣತಿ?


ನಾನಾ ಸಂಕೀರ್ಣತೆಗಳಿಂದ, ವಿರೋಧಾಭಾಸಗಳಿಂದ ಕೂಡಿರುವ ನಮ್ಮ ಸಮಾಜದ ಜಾತಿವ್ಯವಸ್ಥೆಯನ್ನು ತೊಡೆದುಹಾಕಬೇಕೆಂದರೆ ಮೊದಲಿಗೆ ಅದರ ವಾಸ್ತವಾಂಶಗಳನ್ನು ಅರಿಯಲು ಸೂಕ್ತ ಅಧ್ಯಯನಗಳನ್ನು ನಡೆಸಬೇಕಾದ್ದು ತೀರಾ ಅವಶ್ಯ. ಆದರಲ್ಲಿ ವಿವಿಧ ಜಾತಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ಮಹತ್ವ ಪಡೆದುಕೊಳ್ಳುತ್ತದೆ.

ಆದರೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಎಂದಿಗೂ ಒಮ್ಮೆಯಾದರೂ ಇಂಥ ಅಧ್ಯಯನ ನಡೆಯದೇ ಇರುವುದು ಒಂದು ದೊಡ್ಡ ವಿಪರ್ಯಾಸ. ದುರಂತವೆಂದರೆ ಇಂದಿಗೂ ನಮ್ಮ ಮೀಸಲಾತಿ ನೀತಿ ನಿಂತಿರುವುದು ಎಂಬತ್ತು ವರ್ಷಗಳಷ್ಟು ಹಳೆಯದಾದ 1931ರ ಬ್ರಿಟಿಷರ ಜಾತಿಗಣತಿಯ ಅಂಕಿಅಂಶಗಳ ಆಧಾರದಲ್ಲೇ!

ಯಾವುದೇ ಸಮಾಜದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬೇಕಾದರೆ ವಿವಿಧ ಅಂಕಿಅಂಶಗಳನ್ನು ಆಧರಿಸಬೇಕಾದ್ದು ಅತ್ಯವಶ್ಯ. ಹೀಗಾಗಿ ಪಾಶ್ಚಿಮಾತ್ಯ ರಾಷ್ಟ್ರಗಳು ಜನಗಣತಿಯನ್ನೂ ಒಳಗೊಂಡು ವಿವಿಧ ಅಂಕಿಸಂಖ್ಯೆಗಳನ್ನು ಸಂಗ್ರಹಿಸಲು ಹೆಚ್ಚಿನ ಮುತುವರ್ಜಿ ತೋರುತ್ತವೆ, ಸಾಕಷ್ಟು ಹಣವನ್ನೂ ಖರ್ಚು ಮಾಡುತ್ತವೆ. ಪರಿಣಾಮವಾಗಿ ವಿವಿಧ ಸಮುದಾಯಗಳ ಏಳ್ಗೆಗಾಗಿ ಸಮಗ್ರ ಯೋಜನೆ ರೂಪಿಸಲು ಅನುಕೂಲವಾಗುತ್ತದೆ.


ಭಾರತದ ಪರಿಸ್ಥಿತಿ ಇತರೆ ದೇಶಗಳಿಗಿಂತ ತೀರಾ ಭಿನ್ನ ಹಾಗೂ ಸಂಕೀರ್ಣ. ನಮ್ಮದು ಅನಾದಿಯಿಂದಲೂ ಜಾತಿ ಆಧಾರದಲ್ಲಿ ವಿಭಜನೆಗೊಂಡಿರುವ ಸಮಾಜ. ನಮ್ಮಲ್ಲಿ ಪರಸ್ಪರ ತದ್ವಿರುದ್ಧ ಹಿತಾಸಕ್ತಿಗಳನ್ನು ಒಳಗೊಂಡಿರುವ ಜನಸಮುದಾಯಗಳಿವೆ. ಚಾರಿತ್ರಿಕವಾಗಿ ಎಂದಿಗೂ ಕೆಸರನ್ನು ಮುಟ್ಟದೆ ಬಾಯಿ ತುಂಬಾ ಮೊಸರು ಮೆಲ್ಲುತ್ತಿದ್ದ ಸಮುದಾಯಗಳೂ ಇಲ್ಲಿವೆ. ಕೈ ಮೈಯೆಲ್ಲಾ ಕೆಸರಾದ ನಂತರ ಬಾಯಿಗೂ ಕೆಸರೇ ಗತಿ ಎಂಬ ಸ್ಥಿತಿಯಲ್ಲಿರುವ ಸಮುದಾಯಗಳೂ ಇವೆ. ಚರಿತ್ರೆಯುದ್ದಕ್ಕೂ ಯಾವುದೇ

ಜಾತ್ಯತೀತತೆಯ ಮುಸುಕಿನಲ್ಲಿ...



ಜಾತಿವಾರು ಜನಗಣತಿಯನ್ನು ವಿರೋಧಿಸಿರುವವರಲ್ಲಿ ವೀರಶೈವ ಮಹಾಸಭಾದ ನಾಯಕ ಭೀಮಣ್ಣ ಖಂಡ್ರೆ ಹಾಗೂ ಒಕ್ಕಲಿಗರ ಸಂಘದ ನಾಯಕ ಅಪ್ಪಾಜಿಗೌಡರು ಪ್ರಮುಖರು.

ಆಡಳಿತ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಮಂತ್ರಿ ಭೀಮಣ್ಣ ಖಂಡ್ರೆಯವರು ಜಾತಿ ಜನಗಣತಿ ನಡೆಸುವ ತೀರ್ಮಾನ ಕಾಂಗ್ರೆಸ್ ಪಕ್ಷದ್ದಲ್ಲ; ಸಿಎಂರ ವೈಕ್ತಿಗತ ತೀರ್ಮಾನ ಎಂದು ತಮ್ಮ ರಾಜಕೀಯ ಅತೃಪ್ತಿಯನ್ನು ಕಾರಿಕೊಂಡಿದ್ದಾರೆ. ಇನ್ನೂ ಮುಂದುವರೆದು "ನಮ್ಮದು ಜಾತ್ಯತೀತ ದೇಶ.. ಜಾತಿ ಜನಗಣತಿ ಎಂಬುದು ಸಮಾಜವನ್ನು ಒಡೆದು ಹಾಕುತ್ತದೆ" ಎಂಬ ಉದಾತ್ತ ಆಶಯಗಳನ್ನು ತೋರ್ಪಡಿಸಿದ್ದಾರೆ.



ಮಾನ್ಯ ಖಂಡ್ರೆಯವರಲ್ಲಿ ಒಂದು ಸಣ್ಣ ಪ್ರಶ್ನೆ. ವೀರಶೈವ ಮಹಾಸಭಾ ಎಂಬ ಲಿಂಗಾಯತ ಜಾತಿ ಸಂಘವನ್ನು ಕಟ್ಟಿಕೊಂಡು, ದಶಕಗಳಿಂದಲೂ ಅದರ ಪ್ರಶ್ನಾತೀತ ನಾಯಕನಾಗಿ ಗೂಟ ಹೊಡೆದುಕೊಂಡು ಕೂತಿರುವ ಖಂಡ್ರೆಯವರು ಮಾಡುತ್ತಿರುವುದು ಜಾತಿವಾದವೋ? ಜಾತ್ಯತೀತವಾದವೋ? ಬಸವಣ್ಣನ ಯಾವ ತತ್ವದ ಅನುಸಾರ ಈ ಜಾತಿ ಸಂಘದ ರಾಜಕೀಯ ಮಾಡುತ್ತಿದ್ದಾರೆ?

ಒಕ್ಕಲಿಗರ ಸಂಘದ ಅಪ್ಪಾಜಿಗೌಡರು ತಮ್ಮ ವಾದದಲ್ಲಿ ಇನ್ನೂ ಆಧುನಿಕ ಲಾಜಿಕ್‌ಗಳನ್ನು ಬಳಸಿದ್ದಾರೆ. ಅವರ ಪ್ರಕಾರ "ಜಾತಿ ಜನಗಣತಿಯಿಂದ ಸಾಮರಸ್ಯ ಹಾಳಾಗುತ್ತದೆ. ಸಾರ್ವಜನಿಕ ಹಣ ಪೋಲಾಗುತ್ತದೆ. ಈ ಹಣ ಮತ್ತು ಮಾನವ ಸಂಪನ್ಮೂಲಗಳನ್ನು ಶಿಕ್ಷಣಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕು. ಜಾತಿ ನಿರ್ಮೂಲನೆಯ ಕಾರ್ಯಗಳಿಗೆ ಬಳಸಬೇಕು. ಅಲ್ಲದೆ ಈಗಾಗಲೇ ಸಮಾಜದಲ್ಲಿ ಸಾಕಷ್ಟು ಅಂತರ್ಜಾತೀಯ ವಿವಾಹಗಳು ನಡೆಯುತ್ತಿವೆ. ಹೀಗಾಗಿ ಯುವ ಪೀಳಿಗೆ ಇಂಥಾ ಜಾತಿಗಣತಿಯನ್ನು ಒಪ್ಪುವುದಿಲ್ಲ."

ಮತ್ತೆ ನಮಗೆ ಅಂಥದೇ ಪ್ರಶ್ನೆಗಳು [illegible] ಬೆಂಗಳೂರಿನ ಹೃದಯ ಭಾಗದಲ್ಲಿ ಒಕ್ಕಲಿಗರ ಸಂಘ ಎಂದು ಬೋರ್ಡ್ ನೇತು ಹಾಕಿ ಜಾತಿ ಸಂಸ್ಥೆ ಕಟ್ಟಿಕೊಂಡಿರುವುದು ಜಾತಿವಾದವೋ? ಅಥವಾ ಜಾತಿ ಸಾಮರಸ್ಯ ಮೂಡಿಸಲಿಕ್ಕೋ? ಹಾಗೆಯೇ ಇತ್ತೀಚೆಗೆ ನಡೆದ ಒಕ್ಕಲಿಗರ ಸಂಘದ ಚುನಾವಣೆಗೆ ಗೌಡರು ಹರಿಸಿದ ಕೋಟಿ ಕೋಟಿ ಹಣ ಯಾವ ಪುರುಷಾರ್ಥಕ್ಕಾಗಿ? ಯಾರ ಶಿಕ್ಷಣ ಅಥವಾ ಅಭಿವೃದ್ಧಿಗಾಗಿ? ವಿಶ್ವ ಮಾನವ ಸಂದೇಶ ಸಾರಿದ ಕುವೆಂಪು ಅವರ ತತ್ವಗಳ ಬಗ್ಗೆ ಅಪ್ಪಾಜಿಗೌಡರ ನಿಲುವೇನು?

"ಜಾತಿ ವ್ಯವಸ್ಥೆ ಎಂಬುದು ಭಾರತದ ಸಾಮ[...] ರಚನೆಯ ತಳಹದಿಯಾಗಿದೆ ಹಾಗೂ ಜಾತಿ[...] ಸರಿಯಾಗಿ ದಾಖಲಿಸುವುದು ಭಾರತೀಯ ಸಮ[...] ವಿವಿಧ ಸಾಮಾಜಿಕ ಸ್ತರಗಳಲ್ಲಿ ಬದಲಾವಣೆ [...] ಉತ್ತಮ ಮಾರ್ಗದರ್ಶಿಯಾಗಿ ಕೆಲಸ ಮಾಡಬಲ್ಲ[...]

– ಡಾ.ಬಿ.ಆರ್.ಅಂಬೇಡ್ಕರ್ (ಡಾ.ಬಾಬಾಸಾ[...] ಬಿ.ಆರ್.ಅಂಬೇಡ್ಕರ್ ಬರಹಗಳು ಮತ್ತು ಭಾಷಣ[...] ಸಂಪುಟ 5, ಪುಟ 6-7)

ಒಂದು ಸಮುದಾಯದ ಸಾಮಾಜಿಕ - ಆರ್ಥಿಕ ಸ್ಥಾನ[...] ಜಾತಿ ಆಧಾರದಲ್ಲೇ ನಿರ್ಣಯವಾಗುತ್ತಿತ್ತು, ವರ್ತಮ[...] ಪರಿಸ್ಥಿತಿಯಲ್ಲಿ ಅಲ್ಪ ಸ್ವಲ್ಪ ಸುಧಾರಣೆ ಕಾಣುತ್ತಿದ್ದೇವಾ[...] ಸಮಗ್ರ ಬದಲಾವಣೆ ಇನ್ನೂ ದೂರದ ಕನಸೇ ಸ[...]

ಸ್ವತಂತ್ರ ಭಾರತದ ಸಂವಿಧಾನವು ಜಾತಿ ಮ[...] ಕಾರಣದಿಂದ ಉಂಟಾಗುತ್ತಿರುವ ಅಸಾಮರ್ಥ್ಯವನ್ನು ಅ[...] ತಾರತಮ್ಯವನ್ನು ನಿರ್ಮೂಲನೆ ಮಾಡಬೇಕೆಂದು [...] ಮಾತುಗಳಲ್ಲಿ ಹೇಳಿದೆ. ಹೀಗಿದ್ದರೂ ಜಾತಿ ಸಮೂ[...] ಸ್ಥಿತಿಗತಿಗಳ ಬಗ್ಗೆ ನಮ್ಮ ಸಂವಿಧಾನದ ತಿಳಿವಳಿಕೆ [...] ಮಸುಕಾಗಿದೆ. ಇದಕ್ಕೆ ಸ್ಪಷ್ಟ ಕಾರಣವೂ ಇದೆ.

ಯಾಕೆಂದರೆ ದೀನ ದಲಿತರ ಪರವಾಗಿ ಒಂದೆ[...] ಸಣ್ಣ ಪುಟ್ಟ ಅಂಶಗಳೂ ಸಂವಿಧಾನದಲ್ಲಿ ಸೇರ್ಪಡೆ[...] ಬೇಕೆಂದು ಡಾ. ಅಂಬೇಡ್ಕರ್‌ರವರು ತೀವ್ರ ಹೋ[...] ಮಾಡಬೇಕಾಗುತ್ತಿತ್ತು, ಕಾರಣ ಸಂವಿಧಾನ ರ[...] ಸಮಿತಿಯಲ್ಲಿ ಮೇಲ್ಜಾತಿ, ಮೇಲ್ವರ್ಗಗಳ ಪರ [...] ಮಾಡುವ ಮಂದಿಯೇ ತುಂಬಿ ತುಳುಕುತ್ತಿದ್ದರು. ನಾವು ಈ ಮಿತಿಯನ್ನು ಸಂವಿಧಾನ ರೂಪುಗೊ[...] ಕಾಲಘಟ್ಟದ ಮಿತಿ ಎಂದುಕೊಳ್ಳೋಣ.

ಡಾ.ಅಂಬೇಡ್ಕರ್‌ರ ಅವಿರತ ಹೋರಾಟದ ಫ[...] ಶೋಷಿತ ಜಾತಿಗಳಿಗೆ ಸರ್ಕಾರಿ ಉದ್ಯೋಗ [...] ಶಿಕ್ಷಣದಲ್ಲಿ ಮೀಸಲಾತಿ ನೀಡಿತು. ವೃತ್ತಿಪರ ಕೋರ್ಸ್[...] ಮೀಸಲಾತಿಯ ಬಗ್ಗೆ ಸಂವಿಧಾನದ ಕಲಮು [...] ಹಾಗೂ ಸರ್ಕಾರಿ ಸೇವೆಯಲ್ಲಿ ಉದ್ಯೋಗದ ಮೀಸಲ[...] ಬಗ್ಗೆ ಕಲಮು 16(4)ರಲ್ಲಿ ವಿವರಿಸಲಾಗಿದೆ. ಆದರೆ [...] ಒಂದು ಪ್ರಮುಖ ವಿಷಯವನ್ನು ಗಮನದಲ್ಲಿಟ್ಟುಕೊಳ್ಳ[...] ಈ ಮೀಸಲಾತಿ ಸೌಲಭ್ಯ ಕೇವಲ ಎಸ್‌ಸಿ ಮತ್ತು ಎ[...] ಕೆಟಗರಿಗಳಲ್ಲಿ ಪಟ್ಟಿ ಮಾಡಲಾದ ಜಾತಿಗಳಿಗೆ [...] ಸೀಮಿತವಾಯಿತೇ ಹೊರತು ಇತರೆ ನೂರಾರು ಹಿಂ[...] ಜಾತಿಗಳು ಈ ಸೌಲಭ್ಯದಿಂದ ವಂಚಿತವಾದವು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ[...] ಯಲ್ಲಿರುವ ಜಾತಿಗಳಿಗೆ ಮೀಸಲಾತಿ ಒದಗಿಸುವ [...] ಚಾಲ್ತಿಯಲ್ಲಿದೆ ಎಂಬುದೇನೋ ನಿಜ. ಆದರೆ ಇಂ[...] ಈ ಮೀಸಲಾತಿಗೆ ಆಧಾರವಾಗಿರುವ ಪ್ರಮುಖ [...] ಬ್ರಿಟಿಷ್ ಸರ್ಕಾರ ನಡೆಸಿದ್ದ ಜನಗಣತಿಯೆಂಬುದು [...] ಸತ್ಯ. ಬ್ರಿಟಿಷರು ತಮ್ಮ ಆಡಳಿತಾತ್ಮಕ ಅನುಕೂಲ[...] ಜಾತಿವಾರು ಅಂಶಗಳನ್ನು ಒಳಗೊಂಡಿದ್ದ ಜನಗಣತಿ[...] 1901ರಲ್ಲೇ ಪ್ರಾರಂಭಿಸಿದರು. 1931ರ ಜನಗಣತಿ[...] ಜಾತಿ ಆಧಾರಿತ ಉದ್ಯೋಗ, ಭೂಮಿಯ ಒಡೆತನ, [...] ಇತ್ಯಾದಿ ಅಂಶಗಳನ್ನು ಒಳಗೊಂಡ ವಿಸ್ತೃತ ಜನ[...] ನಡೆಯಿತು. ದುರಂತದ ಸಂಗತಿಯೆಂದರೆ ಎಂಬತ್ತು ವ[...] ಹಿಂದಿನ ಈ ಗಣತಿಯನ್ನೇ ನಾವು ಇಂ[...] ನೆಚ್ಚಿಕೊಂಡಿದ್ದೇವೆ.

ಹೀಗೆ ಯಾವುದೇ ಅಧಿಕೃತ ಅಂಕಿಅಂ[...] ಆಧಾರವಿಲ್ಲದೆ ಕೇವಲ ಸ್ಯಾಂಪಲ್ ಸರ್ವೆ ಮತ್ತು [...] ಅಂದಾಜುಗಳನ್ನೇ ನೆಚ್ಚಿಕೊಂಡು ಇಷ್ಟು ವರ್ಷಗಳ[...] ರಾಜಕೀಯ ಮೀಸಲಾತಿಯನ್ನೂ ಒಳಗೊಂಡು ಸಕಾ[...] ಎಲ್ಲ ಮೀಸಲಾತಿ ನೀತಿಗಳೂ ನಿಂತಿವೆ. [...] ಗೋಜಲುಮಯ ಸನ್ನಿವೇಶದಲ್ಲಿ ಎಲ್ಲ ಪ್ರಮುಖ ಜಾ[...] ತಮ್ಮ ಸಂಖ್ಯೆಯನ್ನು ದುಪ್ಪಟ್ಟಾಗಿ ಚಿತ್ರಿಸಿ ರಾಜ[...] ಲಾಭ ಪಡೆದುಕೊಳ್ಳಲು ಹವಣಿಸುತ್ತಿವೆ. [...] ಬೆಳವಣಿಗೆಗಳಲ್ಲಿ ದಲಿತ ಸಮುದಾಯಗಳಲ್ಲಿರುವ [...] ಪಟ್ಟಭದ್ರರೂ ಕೂಡ ಉತ್ಪ್ರೇಕ್ಷಿತ ಅಂಕಿಸಂಖ್ಯೆಗಳ ಆ[...] ತೊಡಗಿರುವುದು ದುರದೃಷ್ಟಕರ. ಈ ಪಟ್ಟಭದ್ರ [...] ಘೋಷಿಸಿಕೊಳ್ಳುತ್ತಿರುವ ಸಂಖ್ಯೆಗಳೇ ನಿಜವಾದಲ್ಲಿ ಭಾ[...] ಜನಸಂಖ್ಯೆ ಕನಿಷ್ಠ 250 ಕೋಟಿಯಾದರೂ ಆಗ[...]

ಜಾತಿವಾದಕ್ಕೆ ಮುಖವಾಡ

ಈ ಗೊಂದಲಗಳಿಗೆ ತೆರೆ ಎಳೆಯಬೇ[...] ಸಮಾಜೋ-ಆರ್ಥಿಕ ಮತ್ತು ಜಾತಿ ಗಣತಿ ನಡೆಸಬ[...] ಬೇಡಿಕೆ ಹಲವಾರು ಬಾರಿ ಮುಂದೆ ಬಂದಿದೆ. [...] ಪ್ರತಿ ಬಾರಿಯೂ ಜಾತ್ಯತೀತತೆಗೆ ಧಕ್ಕೆಯಾಗುತ್ತದ[...] ನೆಪದಲ್ಲಿ ಈ ಬೇಡಿಕೆಯನ್ನು ಮೇಲ್ಜಾತಿಯ ಪಟ್ಟಭದ್ರ[...] ತಳ್ಳಿ ಹಾಕುತ್ತಾ ಬರುತ್ತಿವೆ. ಜಾಗತೀಕರಣದ ನ[...]


ನಮ್ಮ ಸಮಾಜ ನಿಂತಿರುವುದೇ ಜಾತಿ ವ್ಯವಸ್ಥೆಯ ತಳಹದಿಯ ಮೇಲೆ. ನಮ್ಮ ಪ್ರಜಾಪ್ರಭುತ್ವ ರಾಜಕೀಯವೂ ...ಯ ಮೇಲೇ ನಿಂತಿದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಿಂದ ಮೊದಲ್ಗೊಂಡು ಅಭಿವೃದ್ಧಿ ...ಜನೆಗಳನ್ನು ಜಾರಿ ಮಾಡುವವರೆಗೆ ಜಾತಿ ಎಲ್ಲೆಡೆ ಕೆಲಸ ಮಾಡುತ್ತದೆ. ಅಷ್ಟೇ ಏಕೆ? ನೀರಾವರಿ ಯೋಜನೆಗಳಲ್ಲೂ ...ನಾದವೇ ಮನೆಮಾಡಿದೆ.

...ಬಲ ಜಾತಿಗಳು ತಮ್ಮ ಸಂಖ್ಯೆಯನ್ನು ಉತ್ಪ್ರೇಕ್ಷೆಗೊಳಿಸುವ ಮೂಲಕ ಹೆಚ್ಚಿನ ರಾಜಕೀಯ ಲಾಭ ಪಡೆದುಕೊಳ್ಳಲು ...ಸುತ್ತಿವೆ. ಆದರೆ ಇದೇ ಸಂದರ್ಭದಲ್ಲಿ ದುರ್ಬಲವಾಗಿರುವ ತೀರಾ ಹಿಂದುಳಿದ ಜಾತಿಗಳಲ್ಲಿ ತಮ್ಮ ನೈಜ ...ಯ ಬಗ್ಗೆ ಇನ್ನೂ ಜಾಗೃತಿ ಮೂಡಿಲ್ಲ. ಇಂಥಾ ಸನ್ನಿವೇಶದಲ್ಲಿ ಜಾತಿ ಜನಗಣತಿಯನ್ನು ಶೋಷಿತ ಸಮುದಾಯಗಳ ...ತ್ವಾಕಾಂಕ್ಷೆಯ ಯೋಜನೆ ಎನ್ನಬಹುದು. ಜಾತಿಮೂಲದ ಅಸಮಾನತೆಯನ್ನು ತೆರೆದಿಡುವ ಮೂಲಕ ಈ ...ದಾಯಗಳಲ್ಲಿ ಜಾಗೃತಿ ಮೂಡಿಸಲಿಕ್ಕೂ ಈ ಗಣತಿ ಸಹಕಾರಿ.

ಇಂಥಾ ಚಾರಿತ್ರಿಕ ಗಣತಿ ನಡೆಸುವಾಗ ಸರ್ಕಾರ ಸೂಕ್ತ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ಸಿಬ್ಬಂದಿಗಳಿಗೆ ಸೂಕ್ತ ...ತಿ ನೀಡಬೇಕಾಗುತ್ತದೆ. ಸಾಮಾಜಿಕ ಬದ್ಧತೆಯುಳ್ಳ, ಪ್ರಾಮಾಣಿಕ ಅಧಿಕಾರಿಗಳ ತಂಡ ಅಗತ್ಯ. ಅಧಿಕಾರಿಗಳ ...ಕಾರದ ಧೋರಣೆ ಯೋಜನೆಯ ಮೂಲ ಉದ್ದೇಶಕ್ಕೇ ಮಾರಕ ಎಂಬುದನ್ನು ಸರ್ಕಾರ ಅರ್ಥಮಾಡಿಕೊಂಡು ...ಯೋಜನೆಯ ಅನುಷ್ಠಾನದಲ್ಲಿ ಸಾಮಾಜಿಕ ಬದ್ಧತೆಯುಳ್ಳ ಅಧಿಕಾರಿಗಳನ್ನು ನಿಯೋಜಿಸಿದರೆ ಉತ್ತಮ ಫಲಿತಾಂಶವನ್ನು ...ಸಬಹುದು."

ಡಾ. ರಘುಪತಿ, ಸಾಮಾಜಿಕ ಹೋರಾಟಗಾರರು


...ಸಮಾಜೋ-ಆರ್ಥಿಕ ಜಾತಿ ಜನಗಣತಿಯಿಂದ ತುಳಿತಕ್ಕೊಳಗಾದ ನೂರಾರು ಸಣ್ಣಪುಟ್ಟ ಸಮುದಾಯಗಳ



ವಾಸ್ತವಿಕ ಸ್ಥಿತಿ-ಗತಿಗಳು ಬೆಳಕಿಗೆ ಬರುತ್ತವೆ. ಅದರ ಆಧಾರದಲ್ಲಿ ಮುಂದಿನ ಶೈಕ್ಷಣಿಕ, ಆರ್ಥಿಕ, ರಾಜಕೀಯ ನೀತಿಗಳಲ್ಲಿ ಸೂಕ್ತ ಮಾರ್ಪಾಡುಗಳು ಬರಲೇಬೇಕಾಗುತ್ತದೆ. ಹಾಗೆ ನೋಡಿದರೆ ಎಸ್‌ಸಿ, ಎಸ್‌ಟಿ ಮತ್ತು ಬಿಸಿ ಜಾತಿಗಳ ಮುಂದಿನ ಪೀಳಿಗೆಗಳ ಹಣೆಬರಹವನ್ನು ನಿರ್ಧರಿಸುವ ಮಹತ್ವದ ಗಣತಿ ಇದಾಗಿದೆ. ಅದೃಷ್ಟವಶಾತ್ ಕರ್ನಾಟಕದಲ್ಲಿ ಇಂಥಾ ಚಾರಿತ್ರಿಕ ಅವಕಾಶ ನಮಗೆ ಲಭಿಸಿದೆ. ಆದರೆ ಈ ಸಮುದಾಯಗಳಲ್ಲಿ ಈ ಮಹತ್ವದ ಸಂಗತಿಯ ಬಗ್ಗೆ ಸೂಕ್ತ ಸ್ಪಂದನೆಯೇ ಇಲ್ಲದಿರುವುದು ದುರದೃಷ್ಟಕರ."

ಸಿ.ಎಸ್.ದ್ವಾರಕಾನಾಥ್, ಹಿರಿಯ ವಕೀಲರು ಹಾಗೂ ಹಿಂದುಳಿದ ವರ್ಗಗಳ ...ಯೋಗದ ಮಾಜಿ ಅಧ್ಯಕ್ಷರು


...ಮೀಸಲಾತಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯ ಹಲವಾರು ಸಂದರ್ಭಗಳಲ್ಲಿ, ಜಾತಿವಾರು ಅಂಕಿಸಂಖ್ಯೆಗಳ ...ಚಿತ ಮಾಹಿತಿಯೇ ಇಲ್ಲದೆ ಮೀಸಲಾತಿಯ ಶೇಕಡವಾರು ಪ್ರಮಾಣ ನಿಗದಿಗೊಳಿಸುತ್ತಿರುವ ...ರಗಳ ಕ್ರಮದ ಬಗ್ಗೆ ವಿವಿಧ ಹೈಕೋರ್ಟ್‌ಗಳು ಹಾಗೂ ಸುಪ್ರೀಂಕೋರ್ಟ್ ಪ್ರಶ್ನೆ ... ಮಂಡಲ್ ವರದಿಯ ವಿಚಾರಣೆಯ ವೇಳೆಯಲ್ಲೂ 1931ರ ಜನಗಣತಿಯ ...-ಅಂಶಗಳನ್ನು ತೀರಾ ಹಳೆಯ, ಕಾಲಬಾಹಿರ ಅಂಕಿ-ಅಂಶಗಳು ಎಂಬ ಅಭಿಪ್ರಾಯ ...ಡಿಸಿವೆ. ಅಂದರೆ ನ್ಯಾಯಾಲಯಗಳು ಎತ್ತಿರುವ ಈ ಮಹತ್ವದ ಪ್ರಶ್ನೆಗಳಿಂದ ಒಂದು ...ು ನಮಗೆ ಸ್ಪಷ್ಟವಾಗುತ್ತದೆ. ಅದೇನೆಂದರೆ ಮೀಸಲಾತಿ ನೀತಿಯನ್ನು ವೈಜ್ಞಾನಿಕ ಆಧಾರದಲ್ಲಿ ...ಸಬೇಕೆಂದರೆ ಜಾತಿವಾರು ಸಮಾಜೋ-ಆರ್ಥಿಕ ಜನಗಣತಿ ಅತ್ಯವಶ್ಯ."



ಜಾಫೆಟ್, ನ್ಯಾಷನಲ್ ಲಾ ಸ್ಕೂಲ್‌ನ ಪ್ರಾಧ್ಯಾಪಕರು

...ಜಾತಿ ಜನಗಣತಿ ಆಗಲೇಬೇಕು. ಇದಕ್ಕೆ ಮತ್ತೊಂದು ಪ್ರಮುಖ ಆಯಾಮವೂ ಇದೆ. ಎಸ್‌ಸಿ ಕೆಟಗರಿಯಲ್ಲಿ 101 ಜಾತಿಗಳಿವೆ. ಅವುಗಳ ಪೈಕಿ 4-5 ಜಾತಿಗಳು ಮಾತ್ರ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ...ಲಾತಿ ಸೌಲಭ್ಯ ಪಡೆದುಕೊಂಡಿವೆ. ಎಸ್‌ಸಿಯ ಪ್ರಮುಖ ಜಾತಿಗಳಾದ ಮಾದಿಗ (ಎಡಗೈ), ಹೊಲೆಯ (ಬಲಗೈ) ...ಗಳ ನಡುವಿನ ತಾರತಮ್ಯ ನಿವಾರಿಸಲು ಒಳಮೀಸಲಾತಿ ಬೇಕೆಂಬ ಕೂಗು ಬಹಳ ಕಾಲದಿಂದಲೂ ಇದೆ.

...ಳಿದ 95 ಜಾತಿಗಳಿಗೆ ಮೀಸಲಾತಿ ಇಂದಿಗೂ ಕೈಗೆಟುಕೆಯೇ ಇಲ್ಲ. ಅವುಗಳಲ್ಲಿ ಹಲವು ಸಂಖ್ಯಾತ್ಮಕವಾಗಿ ಸಣ್ಣ ಪ್ರಮಾಣದವು. ಉದಾ: 500 ರಿಂದ 5000 ಜನಸಂಖ್ಯೆ ಹೊಂದಿರುವ ಅನೇಕ ಜಾತಿಗಳಿವೆ. ಇವರನ್ನು ಹಿತದೃಷ್ಟಿಯಿಂದ ಈ ಗಣತಿ ಅನಿವಾರ್ಯ."



ಹಾಗೇ ಎಸ್‌ಟಿ ಕೆಟಗರಿಯಲ್ಲಿ 49 ಜಾತಿಗಳಿವೆ. ಎಸ್‌ಟಿಗೆ ನಾಯಕ ಜಾತಿಯನ್ನು ಸೇರ್ಪಡೆ ಮಾಡಿದ ನಂತರ ಇದರ ಬಹುಪಾಲು ಮೀಸಲಾತಿ ಸೌಲಭ್ಯವನ್ನು ಸಂಖ್ಯಾಬಲದಲ್ಲಿ, ರಾಜಕೀಯದಲ್ಲಿ ಪ್ರಬಲವಾಗಿರುವ ಈ ಒಂದೇ ಜಾತಿ ಕಬಳಿಸುತ್ತಿದೆ.

ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲವೇ ನಿರ್ಣಾಯಕ ಎಂಬುದು ನಿಜ. ಆದರೆ ಜಾತಿ ವ್ಯವಸ್ಥೆಯಂಥಾ ಸಂಕೀರ್ಣ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸಲು ಈ ಸರಳ ಸೂತ್ರ ಪ್ರತಿಕೂಲ ಪರಿಣಾಮ ಬೀರುತ್ತದೆ. ಆದ್ದರಿಂದ ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸುವ ದೃಷ್ಟಿಯಿಂದ ನಾವು ವೈಜ್ಞಾನಿಕ ತಳಹದಿಯ ಮೇಲೆ ನೀತಿಗಳನ್ನು ರೂಪಿಸಬೇಕು. ಈ ಹಿನ್ನೆಲೆಯಲ್ಲಿ ಜಾತಿಗಳ ಸಾಮಾಜಿಕ-ಶೈಕ್ಷಣಿಕ ಗಣತಿ ತೀರಾ ಅನಿವಾರ್ಯ."

ಇಂದೂಧರ ಹೊನ್ನಾಪುರ, ಹಿರಿಯ ಪತ್ರಕರ್ತರು ಹಾಗೂ ಸಾಮಾಜಿಕ ಹೋರಾಟಗಾರರು

ಮಹಾತ್ಮರು/ ಅಲ್ಪಾತ್ಮರು

ದಮನಿತ ಜಾತಿಗಳಿಗೆ ಮೀಸಲಾತಿ ಒದಗಿಸುವ ನೀತಿಯನ್ನು ಮೇಲ್ಜಾತಿಗಳ ಪಟ್ಟಭದ್ರ ಶಕ್ತಿಗಳು ವಿರೋಧಿಸುತ್ತಾ ಬಂದಿದ್ದಾರೆಂಬುದು ತಿಳಿದ ಸಂಗತಿ. ಈ ಮೀಸಲಾತಿ ವಿರೋಧ ರಾಜಕೀಯದ ಬಹಿರಂಗ ವಕ್ತಾರರಾಗಿ ಬಿಜೆಪಿ ಹಾಗೂ ಆರೆಸ್ಸೆಸ್ ಕೂಟಗಳು ಮಾಡಿದ/ಮಾಡುತ್ತಿರುವ ಮಸಲತ್ತುಗಳು ನಮ್ಮ ಕಣ್ಣಮುಂದೆಯೇ ಇವೆ. ಆದರೆ ಸಾಮಾಜಿಕ ನ್ಯಾಯದ ವಕ್ತಾರರೆಂಬಂತೆ ಬಿಂಬಿಸಿಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷದ ಇತಿಹಾಸವೇನು?



ಇತಿಹಾಸ ಕೆದಕಿದರೆ ಸತ್ಯಾಂಶ ಬೇರೆಯದೇ ಇದೆ. ಸಂವಿಧಾನ ರಚನಾ ಸಭೆಯಲ್ಲಿ ಕಿಕ್ಕಿರಿದು ತುಂಬಿಕೊಂಡಿದ್ದ ಕಾಂಗ್ರೆಸ್‌ನ ಬಹುತೇಕ ನಾಯಕರು ಮೇಲ್ಜಾತಿ, ಜಮೀನ್ದಾರೀ ವರ್ಗಕ್ಕೆ ಸೇರಿದವರಾಗಿದ್ದರು. ದಲಿತ ಸಮುದಾಯಗಳಿಗೆ ಮೀಸಲಾತಿ ಕೊಡುವ ಪ್ರಸ್ತಾಪವನ್ನು ಈ ನಾಯಕರು ಸಹಜವಾಗಿಯೇ ವಿರೋಧಿಸಿದ್ದರು. ಇತರೆ ನಾಯಕರ ಮಾತು ಹಾಗಿರಲಿ, ಮಾನ್ಯ ಗಾಂಧೀಜಿಯವರೇ ಮೀಸಲಾತಿಯನ್ನು ಖಂಡತುಂಡವಾಗಿ ವಿರೋಧಿಸಿದ್ದರು ಎಂಬ ಇತಿಹಾಸ ಬಹುಜನರ ಜನಮಾನಸದಲ್ಲಿ ಇನ್ನೂ ಸರಿಯಾಗಿ ದಾಖಲಾಗಿಲ್ಲ.

ಗಾಂಧೀಜಿಯವರ ಇಂಥಾ ದಲಿತ ವಿರೋಧಿ ನಿಲುವಿನ ವಿರುದ್ಧ ಡಾ.ಅಂಬೇಡ್ಕರ್ ಅವಿರತವಾಗಿ ಹೋರಾಡಿದರು. ಮೇಲ್ಜಾತಿಪರ ಮನಸ್ಥಿತಿಯ ಅಂದಿನ ನಾಯಕ ಗಣ ಒಪ್ಪದಿದ್ದಾಗ ದಲಿತರಿಗೆ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಡಬೇಕಾಯ್ತು. ಮೀಸಲಾತಿಯನ್ನು ವಿರೋಧಿಸಿದರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಎಂಬುದನ್ನು ಮನಗಂಡ ಗಾಂಧೀಜಿ ನಂತರದಲ್ಲಿ ಮೀಸಲಾತಿಯ ಅಂಶಗಳನ್ನು ಸಂವಿಧಾನದಲ್ಲಿ ಸೇರಿಸಲು ಒಪ್ಪಿಗೆ ಸೂಚಿಸಿದರು!

ನಮ್ಮದೇ ಕರ್ನಾಟಕದ ಮತ್ತೊಂದು ಉದಾಹರಣೆಯನ್ನು ನೋಡೋಣ. ಕನ್ನಂಬಾಡಿ ಖ್ಯಾತಿಯ ಸರ್ ಎಂ.ವಿಶ್ವೇಶ್ವರಯ್ಯನವರ ಬಗ್ಗೆ ಹೆಮ್ಮೆಪಡದ ಕನ್ನಡಿಗರೇ ಇಲ್ಲ. ಅದರಲ್ಲೂ ಹಳೇ ಮೈಸೂರು ಪ್ರಾಂತ್ಯದ ಜನರಂತೂ ಹಳ್ಳಿಹಳ್ಳಿಗಳಲ್ಲೂ ಅವರ ಪ್ರತಿಮೆ ನಿಲ್ಲಿಸಿ ಗೌರವ ಸೂಚಿಸಿದ್ದಾರೆ.

ಮೀಸಲಾತಿಯ ಬಗ್ಗೆ ಅಂದಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರ ನಿಲುವು ಎಂಥದಾಗಿತ್ತು? ಹಿಂದುಳಿದ ಜಾತಿಗಳ ಒಂದಷ್ಟು ಮುಖಂಡರು ಅಂದಿನ ಮೈಸೂರು ಮಹಾರಾಜರನ್ನು ಕಂಡು ಸರ್ಕಾರಿ ಉದ್ಯೋಗಗಳಲ್ಲಿ ತಮಗೆ ಒಂದಿಷ್ಟು ಮೀಸಲಾತಿ ಕೊಟ್ಟು ನ್ಯಾಯ ಒದಗಿಸಬೇಕೆಂದು ಮನವಿ ಮಾಡಿಕೊಂಡರು. ಮಹಾರಾಜರು ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಜಸ್ಟೀಸ್ ಮಿಲ್ಲರ್‌ರ ನೇತೃತ್ವದಲ್ಲಿ ಆಯೋಗ ರಚಿಸಿ ಮೀಸಲಾತಿ ನೀತಿ ರೂಪಿಸುವಂತೆ ಸೂಚಿಸಿದರು. ಇಂಥಾ ಮಿಲ್ಲರ್ ಆಯೋಗ ರಚನೆಯನ್ನು ವಿಶ್ವೇಶ್ವರಯ್ಯನವರು ಪ್ರಬಲವಾಗಿ ವಿರೋಧಿಸಿದರು. ಮಹಾರಾಜರು ಸೊಪ್ಪುಹಾಕದೇ ಇದ್ದಾಗ ತಮ್ಮ ದಿವಾನಗಿರಿಗೆ ರಾಜೀನಾಮೆ ಕೊಟ್ಟಿದ್ದರು.



ಇವು ವಿರಳಾತಿವಿರಳ ಘಟನೆಗಳು ಎಂದು ಭಾವಿಸಿಕೊಂಡೀರಿ! ಜಾತಿ ರಾಜಕಾರಣದ ಇತಿಹಾಸವನ್ನು ಕೆದಕುತ್ತಾ ಹೋದಂತೆಲ್ಲ ಇಂಥಾ ಮಹಾತ್ಮರ, ಮೇಧಾವಿಗಳ ಉದಾಹರಣೆಗಳು ಹೇರಳವಾಗಿ ಸಿಗುತ್ತವೆ!!

...ಷೆ ವಿದ್ಯಮಾನವೆಂದರೆ ಮೇಲ್ಜಾತಿ ಶಕ್ತಿಗಳಿಗೆ ...ತೆಯಾಗಿ ಕಾರ್ಪೊರೇಟ್ ಕಂಪನಿಗಳು ...ರಂಗವಾಗಿಯೇ ಕಣಕ್ಕಿಳಿದಿವೆ.

...ಹಿಂದೆ ಹಿಂದುಳಿದ ಆಯೋಗದ ಅಧ್ಯಕ್ಷರಾಗಿದ್ದ ...ಕಾನಾಥ್‌ರವರ ಕಾಲದಲ್ಲಿ ಜಾತಿ ಜನಗಣತಿಯನ್ನು ...ವ ಒಂದು ಪ್ರಯತ್ನ ನಡೆದಿತ್ತು. ಈ ಗಣತಿಯ ...ಯಲ್ಲಿ ಸಾಫ್ಟ್‌ವೇರ್ ದಿಗ್ಗಜರಾದ ಇನ್‌ಫೋಸಿಸ್, ...ೋ, ಡೆಲ್, ಟಿಸಿಎಸ್, ಐಬಿಎಂ, ಯಾಹೂ, ...ಡ್‌ಟ್ರೀ, ಎಚ್‌ಪಿ ಮುಂತಾದ ಕಂಪನಿಗಳೂ ಇದ್ದವು. ...ಗದಿಂದ ಸುಮಾರು 176 ಕಂಪನಿಗಳಿಗೆ ತಮ್ಮ ...ದ್ಯೋಗಿಗಳ ಜಾತಿವಾರು ವಿವರವನ್ನು ಒದಗಿಸುವಂತೆ ...ವಿ ಮನವಿ ಕಳಿಸಿಕೊಡಲಾಯ್ತು. ಮಾಹಿತಿ ಒದಗಿಸುವ ...ು ಹಾಗಿರಲಿ, ಕೇವಲ ಬೆರಳೆಣಿಕೆಯಷ್ಟು ಕಂಪನಿಗಳು ...ಪ್ರತ್ಯುತ್ತರ ನೀಡಿದ್ದು. ಉತ್ತರವಾದರೂ ಏನು? ...ಲ್ಲಿ ಅಂಥಾ ಯಾವ ಮಾಹಿತಿಯೂ ಇಲ್ಲ ಎಂದು ... ಕೆಲವು ಕಂಪನಿಗಳು ಇಂಥಾ ಪ್ರಶ್ನೆಗಳನ್ನು ಕೇಳುವುದು ...ಯ ವಿಷಯವಾದ್ದರಿಂದ ತಾವು ಅಂಥಾ ಗಣತಿಯನ್ನು ...ವುದು ಸಾಧ್ಯವಿಲ್ಲ ಎಂದು ನೇರವಾಗಿಯೇ ಹೇಳಿದವು. ...ಗದಿಂದ ಕಳಿಸಿದ ರಿಮೈಂಡರ್‌ಗಳಿಗೆ ಯಾವ ...ಕ್ರಿಯೆ ಸಿಗಲಿಲ್ಲ.

...ಕಾರಣ ಸರಳ ಮತ್ತು ಸ್ಪಷ್ಟ. ಸಾಫ್ಟ್‌ವೇರ್‌ನಂತಹ ...ದ್ಯೋಗಗಳಲ್ಲಿ ಶೇಕಡ 90ರಷ್ಟು ಮೇಲ್ಜಾತಿ ಅಭ್ಯರ್ಥಿಗಳೇ ...ಬಿಕೊಂಡಿದ್ದು, ಇಂಥಾ ಗಣತಿಯಿಂದ ...ದಿಚ್ಚಿಟ್ಟಂತಿರುವ ಸತ್ಯ ಬೆಳಕಿಗೆ ಬರುತ್ತದೆ. ಅದು ...ವ ಕಾರ್ಪೊರೇಟ್ ದಿಗ್ಗಜರಿಗೂ ಬೇಡದ ವಿಷಯ.

ಜಾತಿವಾರು ಗಣತಿಯ ಅಗತ್ಯ

...ರವಾದ ಜಾತಿವಾರು ಅಂಕಿಅಂಶಗಳಿಲ್ಲದೇ ನಾನಾ ...ತ್ಮಕ ಸಮಸ್ಯೆಗಳು ವೈರುಧ್ಯಗಳು ಎದುರಾಗುತ್ತಿವೆ. ...ರಣೆಗೆ 1980ರ ಮಂಡಲ್ ಆಯೋಗದ ಪ್ರಕಾರ ... ಹಿಂದುಳಿದ ಜಾತಿಗಳ ಜನಸಂಖ್ಯೆ ಶೇ. 52. ... 2006ರ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಸ್ಥೆಯ ... ಜಾತಿಗಳ ಸಂಖ್ಯೆ ಕೇವಲ ಶೇ. 41. ಮೀಸಲಾತಿಗೆ ...ಧಿಸಿದ ಪ್ರಕರಣಗಳ ವಿಚಾರಣೆಯ ವೇಳೆಯಲ್ಲಿ ...ಗಳು ಇಂಥಾ ಅಂದಾಜಿನ ಅಂಕಿಅಂಶಗಳನ್ನು ...ಡಿವೆ. ಹೀಗಾಗಿ ನಿರ್ಲಕ್ಷಿತ ಸಮುದಾಯಗಳ

ನಮ್ಮ ಸಮಾಜದಲ್ಲಿ ಎದ್ದು ಕಾಣುವ ಕೆಲವು ಅಂಶಗಳನ್ನು ಪರಿಶೀಲಿಸೋಣ.

ಭಾರತದ ಪ್ರಧಾನಿ ಮೋದಿ ಪೊರಕೆ ಹಿಡಿದು ಸ್ವಚ್ಛ ಭಾರತದ ಘೋಷಣೆ ಕೂಗುತ್ತಿದ್ದಾರೆ. ಇಂಥಾ ಡೋಂಗಿ ಘೋಷಣೆಗಳ ಹೊರತಾಗಿಯೂ ದೇಶದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರ ಕಾರ್ಮಿಕರಲ್ಲಿ 99.9% ದಲಿತರು, ಅದರಲ್ಲೂ ಹೆಚ್ಚಿನವರು ಮಾದಿಗ ಜಾತಿಗೆ ಸೇರಿದವರು. ಈ ಜಾತಿಯ ಜನರು ಪರಂಪರಾನುಗತವಾಗಿ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿದ್ದಾರೆ.

ಕ್ಷೌರಿಕ, ಮಡಿವಾಳ ಮುಂತಾದ ಸೇವಾವೃತ್ತಿಯಲ್ಲಿ ತೊಡಗಿರುವವರು ಬಹುತೇಕ ಆಯಾ ಸಮುದಾಯಗಳಿಗೆ ಸೇರಿದವರೇ ಆಗಿದ್ದಾರೆ. ಹಾಗೆಯೇ ಪೌರೋಹಿತ್ಯ ಪೂಜೆ-ಪುನಸ್ಕಾರಗಳಲ್ಲೂ ಜಾತಿ ಪರಂಪರೆ ಅವ್ಯಾಹತವಾಗಿ ಮುಂದುವರೆದಿರುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ.

ಸಂಘಪರಿವಾರಿಗಳು ಮತ್ತು ಸನಾತನವಾದಿಗಳು ಭಾರತದಲ್ಲಿನ ಇಂಥಾ ಜಾತಿಪದ್ಧತಿಯನ್ನು ಒಂದು ಯಶಸ್ವಿ ಸಮಾಜೋ ಆರ್ಥಿಕ ಕಾರ್ಯವಿಭಜನೆ ಎಂದು ಬಣ್ಣಿಸುವುದೂ ಉಂಟು. ಅವರ ತಲೆಗಳಲ್ಲಿ ತುಂಬಿಕೊಂಡಿರುವ ಮಲವನ್ನು ಸ್ವಚ್ಛ ಮಾಡಲು ಎಂತಹ ಆಂದೋಲನ ನಡೆಸಬೇಕೆಂಬುದು ಅಷ್ಟು ಸುಲಭವಾಗಿ ಬಗೆಹರಿಯದ ಪ್ರಶ್ನೆ.

ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೇನೆಂದರೆ ಜಾತಿಗಳ ಅಸ್ತಿತ್ವ ಇಡೀ ದೇಶದಾದ್ಯಂತ ಒಂದೇ ತೆರನಾಗಿಲ್ಲ ಎಂಬುದು. ಉದಾಹರಣೆಗೆ ಪ್ರಬಲ ಜಾತಿಗಳ ವಿಷಯವನ್ನೇ ನೋಡೋಣ. ಕರ್ನಾಟಕದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಪ್ರಾಬಲ್ಯ ಹೊಂದಿರುವ ಲಿಂಗಾಯತ, ಒಕ್ಕಲಿಗ ಜಾತಿಗಳು ಕನ್ನಡ ರಾಷ್ಟ್ರೀಯತೆಗೆ ಸೀಮಿತವಾಗಿದ್ದು ಇತರ ರಾಜ್ಯಗಳಲ್ಲಿ ಈ ಜಾತಿಗಳು ಕಂಡುಬರುವುದಿಲ್ಲ.

ಹಾಗೆಯೇ ಕೇರಳದಲ್ಲಿ ನಂಬೂದರಿಗಳು ಮತ್ತು ನಾಯರ್‌ಗಳು, ಆಂಧ್ರಪ್ರದೇಶದಲ್ಲಿ ಖಮ್ಮ, ಕಾಪು ಮತ್ತು ರೆಡ್ಡಿ ಜಾತಿಗಳು, ತಮಿಳುನಾಡಿನಲ್ಲಿ ಮೊದಲಿಯಾರ್, ವಣ್ಣಿಯಾರ್ ಮೊದಲಾದ ಜಾತಿಗಳು ಆಯಾ ರಾಜ್ಯಗಳಲ್ಲಿ ಪ್ರಾಬಲ್ಯ ಸಾಧಿಸಿವೆ.

ಇಡೀ ದೇಶದಲ್ಲೇ ವಿಶಿಷ್ಟವಾಗಿರುವ ಬ್ರಾಹ್ಮಣ ಜಾತಿಯೊಂದು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದೆ. ಹವ್ಯಕ ಎಂದು ಕರೆಯಲಾಗುವ ಈ ಬ್ರಾಹ್ಮಣ ಜಾತಿಯವರು ಮೂಲತಃ ಕೃಷಿಕರಾಗಿದ್ದವರು. ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿರುವ ಈ ಸಮುದಾಯದ ಬಹುಪಾಲು ಮಂದಿ ಕೃಷಿ ಕಾರ್ಯದಲ್ಲಿ ತೊಡಗಿರುವುದನ್ನು ಕಾಣಬಹುದು. ಇದು ಬ್ರಾಹ್ಮಣ ಪರಂಪರೆಗೇ ಅಪವಾದ ಎನ್ನಬಹುದು.


ಹೀಗೆ ತರಹೇವಾರಿ ಜಾತಿಯ ಚಿತ್ರಣ ಸಿಗುತ್ತದೆ. ಆದ್ದರಿಂದ ಜಾತಿಯ ವಿಷಯವನ್ನು ಆಯಾ ಪ್ರದೇಶಗಳ ನಿರ್ದಿಷ್ಟತೆಗಳಿಗೆ ಮಹತ್ವ ಕೊಟ್ಟು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲ ರೀತಿಯ ಸಂಕೀರ್ಣತೆಗಳನ್ನು ಅರ್ಥ ಮಾಡಿಕೊಳ್ಳಲು ಜಾತಿ ಗಣತಿಯೇ ಸರಿಯಾದ ಮಾರ್ಗ.

ಕರ್ನಾಟಕದಲ್ಲಿ ನೇಮಕಗೊಂಡ ಹಲವಾರು ಸಮಿತಿಗಳು ಜಾತಿ ಗಣತಿಯ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳಿವೆ. 1961ರಲ್ಲಿ ನಾಗನಗೌಡ ಸಮಿತಿ, 1975ರ ಹಾವನೂರು ಆಯೋಗ, 1985ರ ವೆಂಕಟಸ್ವಾಮಿ ಆಯೋಗ, 1990 ಚಿನ್ನಪ್ಪರೆಡ್ಡಿ ಆಯೋಗ, ತೀರಾ ಇತ್ತೀಚೆಗೆ ದ್ವಾರಕಾನಾಥ್ ಆಯೋಗ ಎಲ್ಲರೂ ಶಿಫಾರಸ್ಸು ಮಾಡಿದ್ದಾಗ್ಯೂ ಈ ವಿಷಯ ಮೂಲೆಗುಂಪಾಗಿಯೇ ಉಳಿದಿತ್ತು.

ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದಾಗಿನಿಂದ ಈ ವಿಷಯಕ್ಕೆ ಮತ್ತೆ ಜೀವ ಬಂದಿದೆ. ಸಿದ್ದರಾಮಯ್ಯನವರಿಗೆ ಅಹಿಂದ ಹೋರಾಟದ ಛಾಪು ಇರುವುದರಿಂದ ಜಾತಿವಾರು ಜನಗಣತಿಯನ್ನು ಮಾಡುತ್ತೇವೆಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಡಿಸೆಂಬರ್‌ನಲ್ಲಿ ಜಾತಿವಾರು ಜನಗಣತಿ ನಡೆಯಲಿದೆ. ಅಂಕಿಅಂಶಗಳ ಸಂಸ್ಕರಣೆಯ ನಂತರ ಏಪ್ರಿಲ್ ವೇಳೆಗೆ ಅಂತಿಮ ವರದಿ ದೊರೆಯಲಿದೆ ಎಂದು ಸರ್ಕಾರ ಘೋಷಿಸಿದೆ.


ಹೀಗಾದರೆ ಇದು ಸ್ವತಂತ್ರ ಭಾರತದ ಇತಿಹಾಸದಲ್ಲೇ ವಿನೂತನ ಪ್ರಯೋಗ. ಕರ್ನಾಟಕದ ಪ್ರಯೋಗ ಸಮರ್ಪಕವಾಗಿ ಹಾಗೂ ಯಶಸ್ವಿಯಾಗಿ ನಡೆದರೆ ಇತರೆ ರಾಜ್ಯಗಳಿಗೂ ಮಾದರಿಯಾಗುತ್ತದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ



1945ರಲ್ಲಿ ಒರಿಸ್ಸಾದ ಕಟಕ್‌ನಲ್ಲಿ ಜನಿಸಿದ ಡಾ|| ದೀಪ್ತಿ ಪಟ್ನಾಯಕ್ ಪ್ರತಿಷ್ಠಿತ ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಭೌತಿಕ ರಸಾಯನಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪಡೆದು, ತರುವಾಯ 1979ರಲ್ಲಿ ಉತ್ಕಲ್ ವಿವಿಯಲ್ಲಿ ಅಣುರಸಾಯ ಶಾಸ್ತ್ರ ವಿಷಯದಲ್ಲಿ ಪ್ರಬಂಧ ಮಂಡಿಸಿ ಪಿಎಚ್.ಡಿ.ಯನ್ನೂ ಪಡೆದಿದ್ದರು. 2005ರಲ್ಲಿ ನಿವೃತ್ತಿ ಹೊಂದುವ ಸಮಯದಲ್ಲಿ ಅವರು ರಸಾಯನಶಾಸ್ತ್ರ ಸಹ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದರು. ತಮ್ಮ ವೃತ್ತಿ ಬದುಕಿನ ನಡುವೆಯೇ ಡಾ|| ಪಟ್ನಾಯಕ್‌ರು ಒರಿಯಾ ಭಾಷೆಯ ಉತ್ಕಟ ಸಾಹಿತಿಯೂ ಹೌದು. ಅವರು ಹಲವಾರು ಕಾದಂಬರಿಗಳಿಗೆ, ಸಣ್ಣ ಕತೆಗಳಿಗೆ, ವಿಜ್ಞಾನ ಬರಹಗಳಿಗೆ ಮತ್ತು ಪ್ರವಾಸ ಕಥನಗಳಿಗೆ ತಮ್ಮ ಲೇಖನಿಯ ಸ್ಪರ್ಶ ನೀಡಿದ್ದಾರೆ. ತಮ್ಮ 'ಸ್ವಪ್ನ ಪರಾಹತ' (ಸೋತ ಕನಸುಗಳು) ಕೃತಿಗಾಗಿ ಎ.ಐ.ಆರ್ ನಿಂದ ಅತ್ಯುತ್ತಮ ನಾಟಕ ಬರಹ, ವಿಜ್ಞಾನ ಪ್ರಚಾರ ಸಮಿತಿಯಿಂದ ಹಾಗೂ ಕಾಳಿಂಗ ಶಿ ಮೇಳ ವತಿಯಿಂದ ಪ್ರತ್ಯೇಕವಾಗಿ ಅತ್ಯುತ್ತಮ ವಿಜ್ಞಾನ ಬರಹಗಾರ್ತಿ ಹಾಗೂ 2012ರಲ್ಲಿ ಒರಿಸ್ಸಾ ಮಹಿಳಾ ಬರಹಗಾರ್ತಿ ವೇದಿಕೆಯಿಂದ ಭಾಷಾಂತರ ಕೃತಿಗಾಗಿ ಪ್ರಶಸ್ತಿ, ಹೀಗೆ ಹತ್ತು ಹಲವು ಪ್ರಶಸ್ತಿಗಳು ಅವರಿಗೆ ಒಲಿದು ಬಂದಿವೆ.

ಏಕಾಂಗಿ



ಕತೆ

"ಈವನು ನಿನ್ನ ಗಂಡ ಏನು?" ಕಂಪಾರ್ಟ್‌ಮೆಂಟ್‌ನಲ್ಲಿ ಮುಸ್ಸಂಜೆ ಹೊತ್ತು ಸೀಟಿನ ಕೆಳಗೆ ತನ್ನ ಸಾಮಾನುಗಳು ಹೊಂದಿಸಿಕೊಳ್ಳುತ್ತಿರುವಾಗ ಈ ಪ್ರಶ್ನೆ ಕೇಳಿ ಸುಜಾತಾಗೆ ಆಶ್ಚರ್ಯವಾಯಿತು.

ಚೆನ್ನೈನಿಂದ ಟ್ರೇನು ಹೊರಡುವ ಸಮಯ ರಾತ್ರಿ ಹನ್ನೊಂದು ಗಂಟೆಗೆ. ಆದರೆ ಹೆಚ್ಚುಕಮ್ಮಿ ಯಾವಾಗಲೂ ಲೇಟ್ ಆಗಿಯೇ ಆಗುತ್ತದೆ. ರೈಲು ಬಂದ ಕೂಡಲೇ ಆಕೆಯ ಅಕ್ಕನ ಮಗ ಆದಿತ್ಯ ಬೇಗ ಬೇಗ ಎಲ್ಲಾ ಸಾಮಾನುಗಳನ್ನು ಒಂದೊಂದಾಗಿ ಒಳಗೆ ಎಸೆದ. ಅವನು ಟ್ರೇನು ಹತ್ತಿ ಚಿಕ್ಕಮ್ಮನ ಕಾಲಿಗೆ ನಮಸ್ಕರಿಸಲು ಬಾಗಿದ ಕೂಡಲೇ, ರೈಲು ಹೊರಡತೊಡಗಿತು. ಅವನು ಅವಸರದಿಂದ ಕೆಳಗೆ ಇಳಿದ. ಸುಜಾತಾ ನಿಶ್ಚಿಂತೆಯಿಂದ ಉಸಿರಾಡಿದಳು. ಸ್ವಲ್ಪ ಹೊತ್ತು ಹೊರಗೆ ನೋಡುತ್ತಾ ನಿಂತಳು. ನಂತರ ಸಾಮಾನುಗಳನ್ನು ಎಳೆಯುತ್ತಾ ತನ್ನ ಬರ್ತ್ ಹತ್ತಿರ ತೆಗೆದುಕೊಂಡು ಹೋದಳು. ಸೀಟಿನ ಕೆಳಗೆ ಒಂದೊಂದಾಗಿ ಜೋಡಿಸುತ್ತಿದ್ದಾಗ ಈ ಪ್ರಶ್ನೆ ಪಕ್ಕದ ಬರ್ತ್‌ನಿಂದ ಕೇಳಿಸಿದಾಗ ಆಕೆ ಬೇಸರಿಸಿಕೊಂಡಳು. ಇತ್ತೀಚೆಗೆ ಬಲಗೈ ಮೂಳೆ ಮುರಿದಿತ್ತಾದ್ದರಿಂದ ಆಕೆಯ ಅಂಗೈ ಶಕ್ತಿಹೀನವಾಗಿತ್ತು. ಡಾಕ್ಟರ್ ಭಾರವಾದ ಸಾಮಾನು ಎತ್ತಬಾರದು ಎಂದು ಹೇಳಿದ್ದರು. ಆದರೂ ಮನಸ್ಸು ಕೇಳಿಲ್ಲವಾಗಿ ಸುಜಾತಾ ಬಹಳಷ್ಟು ಸಾಮಾನುಗಳನ್ನು ಖರೀದಿಸಿದ್ದಳು. ದುರ್ಗಾ ಪೂಜೆಯ ರಜೆಗೆ ಮೈದುನ-ಓರಗಿತ್ತಿ, ಮಗ-ಸೊಸೆ, ಮಗಳು-ಅಳಿಯ, ಅಣ್ಣನ ಮಗ-ಮಗಳು. . .. ಹೀಗೆ ಪರಿವಾರದ ಹಲವರು ಮನೆಗೆ ಬರುತ್ತಾರೆ. ಏನಿಲ್ಲವೆಂದರೂ ಎಲ್ಲರಿಗೂ ಒಂದಾದರೂ ಸಾಮಾನು ಖರೀದಿಸಲೇಬೇಕು. ಚಿಕ್ಕ ಮೊಮ್ಮಗನಿಗಾಗಿ ಆಟಿಕೆಗಳು ಖರೀದಿಸದೆ ಇರಲು ಮನಸ್ಸು ಒಪ್ಪಲೇ ಇಲ್ಲ, ಹಬ್ಬದ ನಿಮಿತ್ತ ಅಡಿಗೆಯವ ಹಾಗೂ ಕೆಲಸದಾಕೆ ಕೂಡ ಆಸೆ ಇಟ್ಟುಕೊಂಡಿರುತ್ತಾರೆ. ಅವರಿಗೂ ಬಟ್ಟೆ ಖರೀದಿಸಬೇಕಾಯಿತು. ಎರಡು ದಿನಗಳ ಸೆಮಿನಾರ್ ಮುಗಿಸಿ ಅಕ್ಕನ ಮಗ ಆದಿತ್ಯ ಹಾಗೂ ಅವನ ಹೆಂಡತಿ ಶುಭಶ್ರೀ ಅವರೊಡನೆ ಚೆನ್ನೈ ಬಜಾರಿನಲ್ಲಿ ಹೆಚ್ಚು ಹೊತ್ತು ಕಳೆದಿದ್ದಳು. ಈ ಸಾಮಾನುಗಳೆಲ್ಲ ಕಟಕ್‌ನಲ್ಲಿ ದೊರೆಯುತ್ತವೆ. ಆದರೆ ಹೊರಗಿನಿಂದ ತಂದರೆ ಅವುಗಳ ಬೆಲೆ ಹೆಚ್ಚಾಗಿ ತೋರುತ್ತದೆ. ಇಷ್ಟೊಂದು ಸಾಮಾನು ಖರೀದಿಸಲು ಎಷ್ಟೋ ಪರದಾಡಿದ್ದಳು. ಆದರೀಗ ಈ ರೀತಿಯ ಅನಾಗರಿಕ ಪ್ರಶ್ನೆ ಬೇರೆ!

ಒಬ್ಬಂಟಿ ಮಹಿಳೆ ಹೀಗೆ ಇಷ್ಟೊಂದು ಸಾಮಾನು ಹೊತ್ತುಕೊಂಡು ರೈಲು ಹತ್ತುತ್ತಿರಬೇಕಾದರೆ ಅವಳಿಗೆ ಸಹಾಯ ಮಾಡುವ ಬದಲು ಸೀಟಿನ ಮೇಲೆ ಕಾಲುಚಾಚಿ ಕೂತು ಈ ರೀತಿ ಅನಾಗರಿಕ ಪ್ರಶ್ನೆ ಕೇಳುವ ಈತ ಎಂತಹ ಮನುಷ್ಯನಿರಬೇಕು ಎಂದು ಸುಜಾತಾ ಯೋಚಿಸಿದಳು. ಅದೇ ಹೊತ್ತಿಗೆ ಆ ವ್ಯಕ್ತಿ ಲೈಟಿನ ಹೊತ್ತಿಸಿ ಎದ್ದು ಕೂತ. ಸುಜಾತಾ ಹಿಂತಿರುಗಿ ನೋಡಿದಳು. ಸುಮಾರು ಆರು ಅಡಿ ಎತ್ತರದ, ತಾಮ್ರ ವರ್ಣದ ವಿದೇಶಿ ವ್ಯಕ್ತಿ ತನ್ನ ಸೀಟಿನ ಮುಂದೆ ನಿಂತಿದ್ದ. ಅವನ ಮುಖದಲ್ಲಿದ್ದ ಜೇಡರ ಬಲೆಯಂತಹ ಸುಕ್ಕುಗಳನ್ನು ನೋಡಿ ಅವನು ಎಂಬತ್ತು-ಎಂಬತ್ತೈದರ ವಯಸ್ಸಿನವನು ಎಂದು ಅಂದಾಜಿಸಿದಳು.

ಸುಜಾತಾಳಿಗೆ ಆಶ್ಚರ್ಯವಾದದ್ದು ಒಬ್ಬ ವಿದೇಶಿಗ ಈ ತರಹ ದೇಶಿ ಹಿಂದಿ ಭಾಷೆಯಲ್ಲಿ ಮಾತನಾಡಿದ್ದು. ಉತ್ತರ ಪ್ರದೇಶದ ಗುಡ್ಡಗಾಡು ಅಂಚಿನಲ್ಲಿ ವಾಸಿಸುವ ಜನ ಈ ರೀತಿಯ ಹಿಂದಿ ಮಾತಾಡುವುದನ್ನು ಈ ಹಿಂದೆ ಸುಜಾತಾ ಕೇಳಿಸಿಕೊಂಡಿದ್ದಳು. ಅವನು ಒಂದು ಸಲ ಸುಜಾತಾಳತ್ತ ನೋಡಿ ಮಲಗುವ ಸಲುವಾಗಿ ಹಾಸಿಗೆ ಇತ್ಯಾದಿ ಸಿದ್ಧ ಮಾಡಿಕೊಳ್ಳತೊಡಗಿದ.

ಕಾಲಿಗೆ ಚಪ್ಪಲಿ ಹಾಕಿಕೊಂಡು ಆತ ಬಾತ್‌ರೂಮ್ ಕಡೆಗೆ ಹೋದ. ಸುಮಾರು ಹದಿನೈದು ನಿಮಿಷಗಳ ನಂತರ ಹಿಂತಿರುಗಿದವನು ಮತ್ತೆ ಅದೇ ರೀತಿಯ ಪ್ರಶ್ನೆ ಕೇಳಿದ. "ನಿನ್ನ ಕೈಯಲ್ಲಿ ಬಳೆಗಳಿವೆ, ಹಣೆಯಲ್ಲಿ ಕುಂಕುಮ ಇದೆ. ನೀನು ಸುಮಂಗಲಿಯಾಗಿರುವಿ. ನಿನ್ನನ್ನು ಟ್ರೇನ್ ಹತ್ತಿಸಿದವನು ನಿನ್ನ ಗಂಡನಾ?"

ಕೋಪದಿಂದ ಸುಜಾತಾಳ ಶರೀರ ಕಂಪಿಸಿತು. ಶಿಷ್ಟಾಚಾರವಿಲ್ಲದ ಇಂತಹ ಮನುಷ್ಯನನ್ನು ಆಕೆ ತನ್ನ ಜೀವನದಲ್ಲಿ ಎಂದೂ ಕಂಡಿರಲಿಲ್ಲ. ಒಬ್ಬ ವಿದೇಶಿ ಪುರುಷ ಹೀಗೆ ಒಬ್ಬ ಅಪರಿಚಿತ ಮಹಿಳೆಗೆ ವೈಯಕ್ತಿಕ ಪ್ರಶ್ನೆ ಕೇಳುವುದನ್ನು ಯಾರೇ ಆಗಲಿ ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ! ಸುಜಾತಾ ಅತ್ಯಂತ ನಿರ್ಭಾವುಕಳಾಗಿ "ನನ್ನ ಕುರಿತು ಇಷ್ಟೆಲ್ಲ ವಿವರಗಳು ನಿನಗೇಕೆ ಬೇಕು? ನನಗೆ ಇದೆಲ್ಲ ಸರಿ ಕಾಣದು ತಿಳೀತಾ?" ಎಂದು ಇಂಗ್ಲಿಷಿನಲ್ಲಿ ಉತ್ತರಿಸಿದಳು.

ಆದಿತ್ಯ ಸುಖ ಸವಲತ್ತುಗಳ ಮಧ್ಯದಲ್ಲಿ ಬೆಳೆದಿದ್ದಾನೆ. ಯಾವ ರೀತಿಯ ಕೊರತೆಯೂ ಅವನಿಗಿರಲಿಲ್ಲ. ಬಾಲ್ಯದಿಂದಲೇ ಅವನಿಗೆ ಉಣ್ಣೋದು-ತಿನ್ನೋದು ಬಲು ಪ್ರೀತಿಯ ಕೆಲಸ. ಮಿಠಾಯಿ ಎಂದರಂತೂ ಮುಗಿದೇ ಹೋಯಿತು. ಈಗ ಅವನು ಸಾಫ್ಟ್‌ವೇರ್ ಇಂಜಿನಿಯರ್. ಹಗಲುರಾತ್ರಿ ಕಂಪ್ಯೂಟರ್ ಎದುರು ಕೂತಿರಬೇಕು. ಹೆಂಡತಿಯೂ ಕೆಲಸದಲ್ಲಿದ್ದಾಳೆ. ಇನ್ನೂ ಮಕ್ಕಳಾಗಿಲ್ಲ, ಸಮಯ ಸಿಕ್ಕಾಗಲೆಲ್ಲ ಒಳ್ಳೆ ಹೋಟೆಲ್‌ಗಳಲ್ಲಿ ಚೆನ್ನಾಗಿ ತಿಂದು ತೇಗುವುದು ಅವನಿಗೆ ಬಹಳ ಇಷ್ಟ. ಪರಿಣಾಮವಾಗಿ ಮೂವತ್ತು ವರ್ಷ ವಯಸ್ಸಿಗೇ ದಪ್ಪಗಾಗಿ ಹಿರಿಯನಂತೆ ಕಾಣುತ್ತಾನೆ.

ಸುಜಾತಾ ಯಾವಾಗಲೂ ಶಿಸ್ತಿನಿಂ ಇರುವವಳು. ಊಟ-ತಿಂಡಿಗಳ ಕುರಿತು ಬಲು ಎಚ್ಚರ. ಪ್ರತಿದಿನ ನಿಯಮಿತವಾಗಿ ವ್ಯಾಯಾಮ-ಪ್ರಾಣಾಯಾಮ ಮಾಡುವು ದರಿಂದ ಆಕೆ ತೆಳುವಾಗಿದ್ದಾಳೆ. ಈ ವಿದೇಶಿಗ ಆದಿತ್ಯನ ಬಗ್ಗೆ ಹೀಗೆ ಪ್ರಶ್ನೆ ಕೇಳಲು ಇದೇ ಕಾರಣವಿರಬೇಕು! ಈ ವಿದೇಶಿಗರಿಗೆ ಸಭ್ಯತೆ ಸಂಸ್ಕೃತಿ ಯಾವುದೂ ಇರುವುದಿಲ್ಲ, ಅವರಿಗೆ ಹೆಣ್ಣು-ಗಂಡು ಎಂಬ ಎರಡೇ ಸಂಬಂಧಗಳು ಕಂಡುಬರುವುದು.

ಆದಿತ್ಯ ನನ್ನ ಸಹೋದರ, ಭಾವ-ಮೈದುನ ಅಥವಾ ಸಂಬಂಧಿಕ, ಇಲ್ಲವೆ ಯಾರೋ ಗೆಳೆಯನಿರಬೇಕು ಎಂದೇಕೆ ಅವನಿಗೆ ಅನಿಸಲಿಲ್ಲ? ಛೀ!ಛೀ! ಈ 'ಗಂಡ' ಎಂಬ ಶಬ್ದ ಕೇಳಿದರೆ ಹೇಗೋ ಅನಿಸಿ ಬಿಡುತ್ತದೆ! ಈ ಕಿರಿಕಿರಿಯ ಪದದಿಂದಾಗಿ ಆಕೆಗೆ ಇಡೀ ರಾತ್ರಿ ಚೆನ್ನಾಗಿ ನಿದ್ದೆ ಬರಲಿಲ್ಲ. ಎರಡು ಮೂರು ಸಲ ಎದ್ದು ನೀರು ಕುಡಿದು ಮಲಗಿದನಂತರ ನಿದ್ದೆ ಯಾವಾಗ ಆವರಿಸಿಬಿಟ್ಟಿತೋ ಗೊತ್ತಾಗಲೇ ಇಲ್ಲ, ಬೆಳಗ್ಗೆ ಚಹಾದವನ ಧ್ವನಿ ಕೇಳಿ ಎಚ್ಚರವಾಯಿತು. ಗಡಿಯಾರ ನೋಡಿಕೊಂಡಳು. ಎಂಟು ಗಂಟೆಯಾಗಿತ್ತು, ಆಕೆಯ ಸಹ ಪ್ರಯಾಣಿಕ ಪ್ಲಾಸ್ಟಿಕ್ ಗ್ಲಾಸ್‌ನಲ್ಲಿ ಚಹ ಗುಟುಕರಿಸುತ್ತಿದ್ದ. ಅಪ್ಪಟ ಅಧಿಕಾರಿಯಂತೆ ಕಾಣುತ್ತಿದ್ದ ಆತನ ರೀತಿ ರಂಗುಗಳಿಂದಾಗಿ ಅವನು ಸದಾ ರೈಲು ಯಾತ್ರೆ ಕೈಗೊಳ್ಳುವ ರೂಢಿ ಇದ್ದವನಂತೆ ಕಂಡ. ಸುಜಾತಾಳಿಗೆ ಅವನನ್ನು ನೋಡಿ ಒಂದಿಷ್ಟು ವಿಚಿತ್ರ ಎನಿಸಿತು.

ಸುಜಾತಾ ಮುಖ ತೊಳೆದು ಹಿಂದಿರುಗಿದಾಗ ಅವನು ಕೈಯಲ್ಲಿ ಚಹಾ ಗ್ಲಾಸ್ ಹಿಡಿದುಕೊಂಡಿದ್ದ. "ತಗೋ ಚಹ ಕುಡಿ!" ಎಂದ. ಬೆಳಗಿನ ಬೆಳಕಿನಲ್ಲಿ ಆತನ ವಯಸ್ಸು ಸ್ಪಷ್ಟವಾದಾಗ ಆಕೆ ಮೃದುವಾದಳು. ನಿರಾಕರಿಸುವ ಬದಲಾಗಿ ಚಹಾ ಗ್ಲಾಸು ತೆಗೆದುಕೊಂಡಳು.

"ನೀನು ಬರುವುದು ಲೇಟಾಗುತ್ತದೆಂದು ಚಹ ತರಿಸಿಟ್ಟುಕೊಂಡೆ. ಈಗಾಗಲೇ ಎಂಟೂವರೆ ಗಂಟೆಯಾಗಿದೆ. ಮುಂದೆ ಚಹ ಸಿಗುವುದಿಲ್ಲ" ಎಂದ. ರಾತ್ರಿ ಆ ವೃದ್ಧನೊಂದಿಗೆ ನಡೆದುಕೊಂಡ ರೀತಿಗಾಗಿ ಆಕೆ ಪಶ್ಚಾತ್ತಾಪ ಪಟ್ಟಳು. ಅಜ್ಜ-ಅಜ್ಜಿಯ ವಯಸ್ಸಿನ ಹಿರಿಯನ ಬಗ್ಗೆ ಸಿಟ್ಟಾಗಿದ್ದು ಸರಿಯಲ್ಲ ಎಂದುಕೊಂಡಳು. ಆಕೆಗೆ ನೀತಿವಂತ ಹಾಗೂ ಶಿಸ್ತಿನ ತನ್ನ ಅಜ್ಜನ ನೆನಪಾಯಿತು. ಸಾಯುವವರೆಗೂ ಆತನಿಗೆ ಎಷ್ಟೋ ಸಂಗತಿಗಳು ಅರ್ಥವಾಗುತ್ತಿರಲಿಲ್ಲ, ಆದರೂ ಯಾವಾಗಲೂ ಏನೇನೋ ಮಾತಾಡುತ್ತಲ್ಲೇ ಇದ್ದ.

ಅಜ್ಜನ ನೆನಪಾದ ಕೂಡಲೇ ಆಕೆ ಖಿನ್ನಳಾದಳು. ಕಿಟಕಿಯ ಹೊರಗೆ ನೋಡುತ್ತಾ ಅನ್ಯ ಮನಸ್ಕಳಾಗಿ ಚಹ ಕುಡಿಯತೊಡಗಿದಳು. ಎ.ಸಿ. ಕಂಪಾರ್ಟ್‌ಮೆಂಟಿನಲ್ಲಿದ್ದರೆ ಕಿಟಕಿಯ ಹೊರಗೆ ನೋಡುವುದು ಮಜಾ ಅನಿಸುವುದಿಲ್ಲ, ಆ ವೃದ್ಧ "ನೀನು ಹೋಗುತ್ತಿರು ವುದೆಲ್ಲಿಗೆ?" ಕೇಳಿದ. ಜೊತೆಗೆ "ನಿನ್ನ ಕಣ್ಣುಗಳು ಹಾಗೂ ಕಪ್ಪಾದ ಕೂದಲನ್ನು ನೋಡಿದರೆ ನೀನು ಪೂರ್ವ ಭಾರತದ ವಳಿರಬೇಕು ಎಂದು ಅನಿಸುತ್ತದೆ. ಅಲ್ಲಿಯ ಜನ ಮೀನು ಬಹಳ ತಿನ್ನುತ್ತಾರಾದ್ದರಿಂದ ಅವರ ಕಣ್ಣುಗಳು ಮೀನಿನಂತೆ ಚಂಚಲವಾಗಿರುತ್ತವೆ. ಆ ಪ್ರದೇಶದ ತಂಪು ವಾತಾವರಣ ದಿಂದಾಗಿ ಅವರ ಕೂದಲು ಉದ್ದ ಹಾಗೂ ಗುಂಗುರಾಗಿ ರುತ್ತವೆ. ಆದ್ದರಿಂದ ಆ ಮಹಿಳೆಯರು ಉದ್ದುದ್ದಾಗಿ ಹೆರಳು ಹೆಣೆದುಕೊಂಡಿರುತ್ತಾರೆ" ಎಂದು ಸೇರಿಸಿದ.

ಅಜ್ಜನ ಮಾತು ಕೇಳಿ ಸುಜಾತಾಗೆ ಮತ್ತೆ ವಿಚಿತ್ರವೆನಿಸಿತು. ಅವನ ಇಂಗ್ಲಿಷಿನ ಉಚ್ಚಾರಣೆ ಕಂಡು ಅವನೊಬ್ಬ ಕೆಳ ವರ್ಗದ ಮನುಷ್ಯ ಅನ್ನಿಸಿತು. ಸುಜಾತಾಳಿಗೆ ಇಂಗ್ಲಿಷ್ ಮಾತನಾಡಲು ಬರುತ್ತದೆ ಎಂದು ಗೊತ್ತಾದನಂತರ ಅವನು ಹಿಂದಿಯಲ್ಲಿ ಮಾತಾಡಲೇ ಇಲ್ಲ, ಏನೇ ಆಗಲಿ ಈ ಮುದಿಯ ತನ್ನ ಕಣ್ಣು ಹಾಗು ಕೂದಲುಗಳ ಕುರಿತು ಮಾತನಾಡಿದ್ದು ಆಕೆಗೆ ಸರಿ ಅನಿಸಲಿಲ್ಲ, ಈಗ ಆಕೆಗೂ ಜಿಜ್ಞಾಸೆ ತಡೆಯಲಾಗಲಿಲ್ಲ, ಅವನತ್ತ ನೋಡುತ್ತಾ ಕೇಳಿದಳು "ನೀವು ಭಾರತೀಯರ ಕುರಿತು ಇಷ್ಟೆಲ್ಲಾ ಮಾತಾಡುತ್ತೀರಿ ಹೇಗೆ? ಅಷ್ಟೆಲ್ಲಾ ನಿಮಗೆ ಹೇಗೆ ಗೊತ್ತು? ತಾವು ಹಿಂದೂಸ್ಥಾನದಲ್ಲಿಯೇ ಇರ್ತೀರೇನು? ಈಗ ಹೋಗುತ್ತಿದ್ದೀರಿ?" ಅಜ್ಜನ ಸುಕ್ಕುಗಳ ಮುಖದ ಮುಗುಳ್ನಗೆ ಹರಡಿತು. "ನಿಮ್ಮ ಈ ಮಹಾನ್ ದೇ ಇರುವ ಸೌಭಾಗ್ಯ ನನಗೆಲ್ಲಿದೆ ಬಿಡಿ! ಆದರೂ ನಾ ಸೌಭಾಗ್ಯಶಾಲಿ. ಏಕೆಂದರೆ ಜೀವನದ ಪ್ರಾರಂಭದ ಕೆ ಇಲ್ಲಿರುವ ಸದವಕಾಶ ನನಗೆ ದೊರಕಿತ್ತು, ನನ್ನ ತಂದೆ ಬ್ರಿಟಿಷ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದರು. ಭಾರತೀಯ ಸೇನೆಯಲ್ಲಿ ಡಾಕ್ಟರ್ ಆಗಿದ್ದರು. ಹೊಂದಿದ ನಂತರ ಕೆಲವು ದಿವಸ ಮೇರಠ್‌ನಲ್ಲಿ ಡ ಆಗಿ ಕೆಲಸ ಮಾಡಿದರು. ಬಹಳ ಹಣ ಗಳಿಸಿ ನಾನು ನನ್ನ ತಾಯಿ ತಂದೆಗೆ ಒಬ್ಬನೇ ಮಗ. ನನ್ನ ಅಕಸ್ಮಾತ್ ಸತ್ತ ನಂತರ ದುಃಖಿತರಾಗಿ ಡೆಹರಾಡೂನ್‌ನಲ್ಲಿದ್ದ ತಮ್ಮ ಮನೆಗೆ ಹಿಂತಿರುಗಿ ಅಲ್ಲಿ ನಮ್ಮದು ಬಹಳ ಹೊಲನೆಲಗಳ ಸಂಪತ್ತು ತೋಟ ಬಂಗಲೆಗಳಿದ್ದವು. ಅಮ್ಮ ಬದುಕಿದ್ದಾಗ ತಮ್ಮ ಗೆಳೆಯರೊಂದಿಗೆ ಅಲ್ಲಿಗೆ ಹೋಗಿ ಮಜ ಮಾಡಿ ಬರುತ್ತಿದ್ದರು. ಅಂದು ಇಂಗ್ಲಿಷರಲ್ಲಿ ಫಾರ್ಮ್‌ಹೌಸ್ ಪಾರ್ಟಿಗಳು ಬಹಳ ಪ್ರಸಿದ್ಧವಾಗಿ ಈಗ ಅದೆಲ್ಲ ಯಾವುದೋ ಬೇರೆ ಜನ್ಮದಲ್ಲಿ ನ ಅನ್ನಿಸುತ್ತದೆ. ಅಪ್ಪ ಕರ್ನಲ್ ರೋನಾಲ್ಡ್ ಮ ರಾಜನಂತೆ ಬದುಕುತ್ತಿದ್ದ, ಆದರೆ ಅಮ್ಮ ಸತ್ತ ಅವರ ಬದುಕೇ ಬದಲಾಯಿತು, ಗುಡ್ಡಗಾಡಿನ ಬ ಸೇವೆಯೇ ತನ್ನ ಜೀವನದ ಗುರಿಯಾಗಿಸಿಕೊಂಡರು. ಹದಿನೈದು ವರ್ಷದವನಾಗಿದ್ದೆ ನನ್ನ ಬಾಲ್ಯವನ್ನು ಗುಡ್ಡ ಜನರೊಡನೆ, ಡೆಹರಾಡೂನ್‌ನ ನಯನ ಮನೋಹ ಪರ್ವತಗಳೂ ಮತ್ತು ಗಿಡಗಂಟೆಗಳ ಪ್ರಕೃತಿಯಲ್ಲಿ ಕ ನನ್ನ ಓದುಬರಹ ಕೂಡ ನಡೆದದ್ದು ಅಲ್ಲಿಯೇ. ಏನಿರಲಿಲ್ಲ? ನನ್ನ ಸುತ್ತ ಚಾಕರಿ ಮಾಡುವವ ಬೆಲೆಬಾಳುವ ಕಾರುಗಳು, ಆನೆ ಕುದುರೆಗಳಿದ್ದವು ಈ ಸುಂದರ ದೇಶದಲ್ಲಿ ನಾನು ಎಂತೆಂಥ ಸುಖವೈಭ ಜೀವನ ಸಾಗಿಸಿಲ್ಲ! ಆನಂತರ ನನ್ನ ಜೀವನದಲ್ಲಿ ಅಕಸ್ ಒಂದು ದುರ್ಘಟನೆ ಸಂಭವಿಸಿತು. ಎಲ್ಲ ಬಿಟ್ಟು ಸತ್ತು ಸ್ವರ್ಗ ಸೇರಿದರು! ಆದಾಗಲೇ ಭಾರತ ಸ್ವತಂತ್ರ ಉಳಿದೆಲ್ಲ ಹೊಲ, ನೆಲ, ಸಂಪತ್ತು ಮಾರಿ ನಾವು ಪೂರ್ವಜರ ಸ್ಕಾಟ್‌ಲ್ಯಾಂಡ್‌ಗೆ ಹೊರಟುಹೋ ಪ್ರಾರಂಭದಲ್ಲಿ ಸುಖಸಂತೋಷದಲ್ಲಿ ದಿನ ಕಳೆದಿ ನಾನು ನನ್ನ ಕಾರ್ಯಕ್ಷೇತ್ರದಲ್ಲಿ ಯಾವ ಪ್ರಗತಿ ಸಾಧಿಸಲಿಲ್ಲ, ಚಿಕ್ಕ ನೌಕರಿಯೊಂದನ್ನು ಪಡೆದು ಆಸ್ಟ್ರೇಲಿ ಹೋದೆ. ಅಲ್ಲೇ ವಾಸಿಸತೊಡಗಿದೆ. ವೃದ್ಧಾಪ್ಯ ವೇತ ಅಲ್ಲಿಯ ಸರ್ಕಾರ ನನಗೆ ಪ್ರತಿ ತಿಂಗಳು ಕೊಡುವ ಇಲ್ಲಿನ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಸಮ! ಹ ಬದುಕುತ್ತಿದ್ದೇನೆ. ಆದರೆ ನಾನು ಈ ಸುಂದರ ದೇ ಮರೆಯಲಿಲ್ಲ, ಒಂದಷ್ಟು ಹಣ ಕೂಡಿದ ಕ ಸುತ್ತಾಡಲು ಭಾರತಕ್ಕೆ ಬಂದುಬಿಡುತ್ತೇನೆ. ನಮ್ಮ ಸಂಬಂಧಿಕರು ಈಗಲೂ ಮೇರಠ್ ಡೆಹರಾಡೂನ್‌ನಲ್ಲಿ ವಾಸಿಸುತ್ತಿದ್ದಾರೆ. ನಾನೆಂದರೆ ತುಂಬಾ ಪ್ರೀತಿ. ಅವರೊಡನೆ ಕೆಲವು ದಿನ ಕಳೆಯು ನನಗಿಷ್ಟ, ನನ್ನ ಅಪ್ಪನಿಗೂ ಪ್ರವಾಸ ಎಂದರೆ ಇಷ್ಟವಾಗಿತ್ತು, ತನ್ನ ಕೆಲಸದ ಒತ್ತಡದ ನಡುವೆಯೂ ಪಡೆದು ಪ್ರವಾಸ ಹೋಗುತ್ತಿದ್ದರು. ಅವರ ಜೊತೆ ಈ ಮಹಾನ್ ದೇಶದ ಆ ಕೊನೆಯಿಂದ ಈ ಕೊನೆ ಹಲವು ಸಲ ಸುತ್ತಾಡಿದ್ದೇನೆ. ಆ ನೆನಪುಗಳು ಇ ನನ್ನ ತಲೆಯಲ್ಲಿ ತಾಜವಾಗಿವೆ. ಈಗ ಕ ಹೋಗುತ್ತಿದ್ದೇನೆ. ಅಲ್ಲಿಂದ ಡಾರ್ಜಿಲಿಂಗ್‌ಗೆ ಹೊ ಎಂದು ಹೇಳಿ ಆಕೆಯತ್ತ ಬೆರಳು ಮಾಡಿ "ನನ್ನ ಹ್ಯಾರಿ, ನಿನ್ನ ಹೆಸರೇನೆಂದು ಕೇಳಬಹುದೆ?" ಎ

ಸುಜಾತಾ ತನ್ನ ಹೆಸರು ಹೇಳಿ ನಮಸ್ಕರಿ ವೃದ್ಧನಿಗೆ ನಿರಾಶೆಯಾಗಿರಬೇಕು. ಅವನು ನಗುತ್ತ "ನೀವು ಭಾರತೀಯರಲ್ಲಿ ಒಂದು ದೋಷವಿದೆ. ಇಂದಿಗೂ ಸಂಕೋಚ ಹಾಗೂ ಪರಂಪರೆಗಳಲ್ಲಿ ಕೂರಲು ಬಯಸುತ್ತೀರಿ. ನಿಮಗೆ ಬದುಕುವ ರೀ ಗೊತ್ತಿಲ್ಲ, ಜೀವಿಸುವುದು ಹೇಗೆ ಎಂಬುದೇ ಗೊತ್ತಿಲ್ಲ, ನಾಚಿಕೆ ಹಾಗೂ ಸಂಕೋಚದಿಂದಾಗಿ ಜ ಸುಂದರ ಅನುಭವಗಳಿಂದ ವಂಚಿತರಾಗುತ್ತೀರಿ. ಇ

ವರ್ಷಗಳು ನಿಮ್ಮ ದೇಶವನ್ನಾಳಿದರೂ ಅವರಿಂದ ...ೀ ಸಂಸ್ಕೃತಿ ಮತ್ತು ಸಭ್ಯತೆಗಳನ್ನು ಕಲಿಸಲಾಗಲಿಲ್ಲ."

...ಜಾತಾ ಮಂತ್ರಮುಗ್ಧಳಾಗಿ ಅವನತ್ತ ನೋಡಿದಳು. ...ಿಯನ ಹೃದಯದಲ್ಲಿ ಭಾರತದ ಬಗ್ಗೆ ಇದ್ದ ಪ್ರೀತಿ ...ಆಕೆಯ ಹೃದಯ ತುಂಬಿ ಬಂತು. ವಿದೇಶಿಯವರು ...ಗಿ ಭಾರತೀಯರನ್ನು ಕೀಳಾಗಿ ಕಾಣುತ್ತಾರೆ ಎಂದೇ ...ಾಳಿಗೆ ಇಲ್ಲಿಯವರೆಗೆ ಅನ್ನಿಸಿತ್ತು. ಆಕೆ ಅಮೆರಿಕಕ್ಕೆ ...ದಾಗಲೂ ಹೀಗೆ ಅನ್ನಿಸಿತ್ತು. ಅದೇನೇ ಇರಲಿ, ವೃದ್ಧನ ...ು ಕೇಳಿ ಸುಜಾತಾಳ ಹೃದಯದಲ್ಲಿ ಅವನ ಬಗ್ಗೆ ...ಮಲ ಭಾವನೆ ಮೂಡಿತು.

...ವನ ಮಾತಿಗೆ ಆಕೆ ಪ್ರತಿಕ್ರಿಯಿಸದೆ ಸುಮ್ಮನೆ ...ಳಿದ್ದಳು. ವಿದೇಶೀಯನೊಬ್ಬನಿಗೆ ಭಾರತೀಯರ ...ಚ ಹಾಗೂ ನಾಚಿಕೆಗಳ ಕುರಿತು ಆಕೆ ಏನೆಂದು ...ೇಕು!

...ವು ಒಬ್ಬರೇ ಇಷ್ಟೊಂದು ದೂರದ ಪ್ರವಾಸದಲ್ಲಿ ...ದ್ದೀರಾ? ಹೆಂಡತಿ, ಮಕ್ಕಳು, ಯಾರೂ ನಿಮ್ಮ ಜೊತೆ ...ಪ್ರವಿಲ್ಲವೇ?" ಕೇಳಿದಳು.

...ನಾನು ಆಸ್ಟ್ರೇಲಿಯಾದಲ್ಲಿ ಮದುವೆಯಾಗಿದ್ದೆ. ಆದರೆ ...ಾಂಪತ್ಯ ಹತ್ತು ವರ್ಷವೂ ನಡೆಯಲಿಲ್ಲ. ಆಕೆಯಿಂದ ...ಬ್ಬ ಮಗ ಹುಟ್ಟಿದ. ವಿಚ್ಛೇದನ ಪಡೆದ ನಂತರ ...ಪ್ಯಾರಿಸ್‌ಗೆ ಹೋದಳು. ಅಲ್ಲಿ ಒಬ್ಬ ಫ್ರೆಂಚ್ ಚಿತ್ರಕಲಾವಿ...ನ್ನು ಮದುವೆಯಾಗಿದ್ದಾಳೆ. ನಮ್ಮ ಮಗ ತನ್ನ ...ಬದೊಂದಿಗೆ ಕೆನಡಾದಲ್ಲಿದ್ದಾನೆ. ಆಗಾಗ ಅವನಿಂದ ...ಬರುತ್ತೆ" ಎಂದು ವೃದ್ಧ ದುಃಖದಿಂದ ಹೇಳಿದ.


...ವನ ಕತೆ ಕೇಳಿ ಸುಜಾತಾಳಲ್ಲಿ ಕರುಣೆ ಉಕ್ಕಿ... ಆಕೆ ಮತ್ತೆ ತನ್ನ ಅಜ್ಜನ ಸ್ನೇಹಪರತೆ ನೆನೆಸಿಕೊಂಡಳು. ... ಅಜ್ಜ ಸಂಸ್ಕೃತ ವಿದ್ವಾಂಸರಾಗಿದ್ದರು. ಅವರು ...ಮಲ್ಲಿ ಸಾಧಾರಣ ಶಿಕ್ಷಕರಾಗಿದ್ದರೂ ತಮ್ಮ ...ಯಿಂದಾಗಿ ಹಲವು ಪುಸ್ತಕಗಳನ್ನು ಬರೆದಿದ್ದರಲ್ಲದೆ ...ಮಾಗಗಳಲ್ಲಿ ಹಿರಿತನ ವಹಿಸುತ್ತಿದ್ದರು. ಬೇಡವೆಂದರೂ ...ವರಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು. ಅವರ ಇಬ್ಬರು ...ಲ್ಲಿ ಸುಜಾತಾಳ ತಂದೆ ಪ್ರಸಿದ್ಧ ನೇತ್ರ ತಜ್ಞರಾಗಿದ್ದವರು. ...ಬ್ಬ ಮಗ ದೆಹಲಿಯಲ್ಲಿ ಇಂಜಿನಿಯರ್ ಆಗಿದ್ದರು. ... ಮಗಳ ಗಂಡ ಉತ್ಕಲ್ ವಿಶ್ವವಿದ್ಯಾಲಯದಲ್ಲಿ ...ಸರ್ ಆಗಿದ್ದವರು. ಈಗ ಎಲ್ಲರೂ ನಿವೃತ್ತ ಬದುಕು ...ುತ್ತಿದ್ದಾರೆ. ತುಂಬಿದ ಪರಿವಾರ. ಎಲ್ಲರೂ ...ಗ್ಯರಾಗಿದ್ದೂ ಒಂದಲ್ಲ ಒಂದು ಚಿಂತೆ ಅಜ್ಜನನ್ನು ...ಕೊಂಡಿರುತ್ತಿದ್ದವು. ಅಜ್ಜಿ ಸತ್ತನಂತರ ಅಜ್ಜ ಹದಿನೈದು ... ಬದುಕಿದ್ದರು. ಜೀವನದ ಕೊನೆ ದಿನಗಳಲ್ಲಿ ಅವರು ... ಪುನಸ್ಕಾರಗಳಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರು. ... ರೀತಿಯಲ್ಲಿ ಜೀವನದಿಂದ ಸನ್ಯಾಸ ಪಡೆದಂತೆ! ...ಮ ಉದ್ದ ರೇಷ್ಮೆ ಉತ್ತರೀಯ ಹೊದ್ದು ಶ್ರೀಗಂಧದ ... ಹಣೆಯ ಮೇಲಿಟ್ಟು ಪೂಜಾಗೃಹದಿಂದ ...ಬಂದರೆ ಸಾಕು ಹಿರಿಯ ಮೊಮ್ಮಗಳು ಸುಜಾತಾಳಿಂದ ...ದು ಕಿರಿಯ ಮೊಮ್ಮಗ ಬಿಟ್ಟುವರೆಗೆ ಎಲ್ಲರೂ ...ಕ್ಕಾಗಿ ಸಾಲಾಗಿ ನಿಲ್ಲುತ್ತಿದ್ದರು. ಅಜ್ಜ ಒಂದಿಷ್ಟು ...-ಬೂಂದಿ, ಪುಟಾಣಿ, ಬಾಳೆಹಣ್ಣು, ಬೆಲ್ಲ ಇತ್ಯಾದಿ ...ಟ್ಟು ಎಲ್ಲರ ಅಂಗೈಯಲ್ಲಿ ಇಡುತ್ತ ಹೋಗುತ್ತಿದ್ದರು. ...ೆ ತಾವು ತಿನ್ನುತ್ತಿದ್ದರು. ತುಳಸಿದಳ ಕಲೆಸಿದ ಆ ...ೆ ಮಕ್ಕಳಿಗೆ ಅಮೃತದಷ್ಟು ರುಚಿಯಾಗಿರುತ್ತಿತ್ತು. ... ವರ್ಷಗಳ ನಂತರವೂ ಅಜ್ಜನ ಶರೀರ, ಪೂಜಾಗೃಹ, ...ನಗಳ ನೆನಪುಗಳು ಸುಜಾತಾಳ ಕಣ್ಣು ತುಂಬಿಸಿದವು. ...ಷ್ಟು ಎಷ್ಟು ವರ್ಷಗಳಾದವು! ಆದರೆ ಸ್ಮೃತಿಗಳು ...ೂ ತಾಜಾ ಆಗಿವೆ. ಸುಜಾತಾಳ ಮೊದಲ ಮಗುವನ್ನು ... ನೋಡಿಕೊಂಡು ಹೋಗಿದ್ದರು. ಆ ಭಾವನಾತ್ಮಕ ...ನ್ನು ಅವಳಿಂದ ಮರೆಯಲು ಸಾಧ್ಯವೇ ಇಲ್ಲ. ಕೊನೆಯ ...ಲ್ಲಿ ಅಜ್ಜನಿಗೆ ಗಂಟಲು ಕ್ಯಾನ್ಸರ್ ಆಗಿತ್ತು. ಸುಜಾತಾಳ ...ತಂದೆ ಅಲ್ಲದೆ ಇಡೀ ಕುಟುಂಬವೇ ಅವರ ...ಸೆಯಲ್ಲಿ ತೊಡಗಿತ್ತು. ಅಜ್ಜ ಹಲವು ಸಲ ಊಟದ ...ನ್ನು ದೂರ ಎಸೆದು ಬಿಡುತ್ತಿದ್ದರು. ಮಕ್ಕಳಂತೆ ... ಮಾಡುತ್ತಿದ್ದರು. ಇಷ್ಟಾದರೂ ಒಂದಿಷ್ಟು ಬೇಸರ ...ಕೊಳ್ಳದೆ ಅವಳ ತಾಯಿ, ತಂದೆ, ಚಿಕ್ಕಪ್ಪ, ಚಿಕ್ಕಮ್ಮ, ... ಎಲ್ಲರೂ ನಿರಂತರವಾಗಿ ಅಜ್ಜನ ಸೇವೆ ಮಾಡುತ್ತಿದ್ದರು. ...ಾಗೆ ತಮ್ಮ ಕಣ್ಣಿಂದ ಅಜ್ಜ ದೂರವಾಗುವುದು ...ಿತ್ತು.

...ಗೂ ಆ ಹೃದಯ ಹಿಂಡುವ ಕ್ಷಣ ಬಂದೇ ... ಇಡೀ ಕುಟುಂಬ ದುಃಖದಲ್ಲಿ ಮುಳುಗಿತು. ... ಮತ್ತು ಮೌನ ಆವರಿಸಿತು. ಇಂದು ಮತ್ತೆ ... ಕಣ್ಣೆದುರಿನಲ್ಲಿ ಆ ದೃಶ್ಯ ಮಿಂಚಿಹೋಯಿತು. ...ದು ಮಹಾನತೆ ಸಾವು! ಎಷ್ಟೊಂದು ಆತ್ಮೀಯ ...ಜನಗ!

...ಜಾತಾ ದುಃಖ ತುಂಬಿದ ಮನಸ್ಸಿನಿಂದ ಆ ವಿದೇಶಿ...ನ್ನು ನೋಡಿದಳು - ಓಹ್! ಎಷ್ಟೊಂದು ದುಃಖಿ ... ಏಕಾಂಗಿಯಾಗಿದ್ದಾನೆ ಈ ಮುದುಕ! ತನ್ನ ಸ್ವಜನ...ರಿಗಳಿಗೆ ನಿಸ್ಸಂಕೋಚವಾಗಿ ಬೀಳ್ಕೊಡುವ ಪಾಠ ... ಸಂಸ್ಕೃತಿ ಸಭ್ಯತೆಗಳ ಪ್ರತೀಕವೇ ತಾನು ಸ್ವತಃ ... [illegible]

ಬಗ್ಗೆ ಎಳ್ಳಷ್ಟೂ ಶ್ರದ್ಧೆ ಇಲ್ಲದ್ದನ್ನು ಅದು ಹೇಗೆ ಸಭ್ಯತೆ ಎನ್ನಬಹುದು? ಯಾವ ವಯಸ್ಸಿನಲ್ಲಿ ಮನುಷ್ಯ ಶಾಂತವಾಗಿ ಮನೆಯಲ್ಲಿ ತನ್ನ ಮಕ್ಕಳು ಮೊಮ್ಮಕ್ಕಳೊಂದಿಗೆ ಇರಬೇಕಾಗಿದೆಯೋ, ಆ ವಯಸ್ಸಿನಲ್ಲಿ ತನ್ನ ಗತದ ಸುಖ-ಸ್ಮೃತಿಗಳನ್ನು ನೆನಪಿಸಿಕೊಳ್ಳಲು ದೂರದ ಆಸ್ಟ್ರೇಲಿಯಾದಿಂದ ಇಲ್ಲಿಗೆ ಬಂದು ಒಂದೆಡೆಯಿಂದ ಮತ್ತೊಂದೆಡೆಗೆ ತಿರುಗಾಡುತ್ತಿದ್ದಾನೆ. ಅಂಥಾದ್ದರಲ್ಲಿ ನಮಗೆ ಹೇಳುತ್ತಾನೆ "ನಿಮಗೆ ಜೀವನದ ಅರ್ಥವೇ ಗೊತ್ತಿಲ್ಲ" ಎಂದು.

"ತಾವು ಒಬ್ಬರೆ ಇದ್ದೀರಿ. ಅಗತ್ಯ ಬಿದ್ದಾಗ ನಿಮ್ಮನ್ನು ನೋಡಿಕೊಳ್ಳುವವರು ಯಾರು? ಮನೆಯ ಕೆಲಸ ಮಾಡುವವರು ಯಾರು? ಅನಾರೋಗ್ಯವಾದಾಗ ನಿಮ್ಮ ಸೇವೆ ಮಾಡುವವರು ಯಾರು?" ಸುಜಾತಾ ಶಾಂತವಾಗಿಯೇ



ಕೇಳಿದಳು.

"ವಾಹ್! ಇದೆಂದರೆ ಭಾರತೀಯ ಮಾನಸಿಕತೆ! ನನ್ನ ಸೇವೆ ಮಾಡುವ ಅವಶ್ಯಕತೆ ಎಲ್ಲಿದೆ? ನಾನು ಇನ್ನೂ ಆರೋಗ್ಯವಾಗಿದ್ದೇನೆ. ಆದರೂ ನನ್ನ ಕೆಲಸ ನಾನೇ ಮಾಡಿಕೊಳ್ಳೋದೆಂದರೆ ಬೇಸರವಾಗುತ್ತೆ ನಿಜ. ಇಂಡಿಯಾದಲ್ಲಿದ್ದಾಗ ನೌಕರರನ್ನು ಅವಲಂಬಿಸಿ ಬಾಲ್ಯ ಕಳೆದೆಯಾದ್ದರಿಂದ ನನ್ನಲ್ಲಿ ಇನ್ನೂ ಸ್ವಾವಲಂಬಿ ಸ್ವಭಾವ ಬಂದಿಲ್ಲ. ಆಸ್ಟ್ರೇಲಿಯಾದಲ್ಲಿ ಬಹಳಷ್ಟು ಜನ ತಾವೇ ಕೈಯ್ಯಾರೆ ಇಟ್ಟಿಗೆ ತಯಾರಿಸಿ, ಸಿಮೆಂಟ್ ಕಲಸಿ ತಮ್ಮ ಮನೆ ತಾವೇ ಕಟ್ಟಿಕೊಳ್ಳುತ್ತಾರೆ. ತಮ್ಮ ಕೈಯಿಂದಲೇ ಕಟ್ಟಿಗೆಗಳಿಂದ ಭಾವಣಿ ಸಿದ್ಧಪಡಿಸಿಕೊಳ್ಳುತ್ತಾರೆ. ದಿನನಿತ್ಯದ ಕೆಲಸಗಳಿಗೆ ಅಲ್ಲಿ ನೌಕರರು ಸಿಗುವುದಿಲ್ಲ. ಎಲ್ಲವೂ ಸ್ವತಃ ಮಾಡಿಕೊಳ್ಳಬೇಕಾಗುತ್ತದೆ. ಅದಲ್ಲದೆ ನನ್ನಲ್ಲಿ ಅಷ್ಟೊಂದು ಹಣವೂ ಇಲ್ಲ. ಇಲ್ಲವೆಂದರೆ ನಾನು ರೈಲು ಪ್ರಯಾಣ ಏಕೆ ಮಾಡುತ್ತಿದ್ದೆ? ವಿಮಾನದಲ್ಲಿ ಹೊರಡುತ್ತಿರಲಿಲ್ಲವೆ?" ಎಂದ ಆತ "ಹ್ಹ! ಹ್ಹ!" ಎಂದು ನಕ್ಕ.

ಹೀಗೇ ಮಾತಾಡುತ್ತ ಪುಸ್ತಕ ಪತ್ರಿಕೆಗಳನ್ನು ಓದುತ್ತ ದಿನ ಕಳೆದುಹೋಯಿತು. ರಾತ್ರಿ ಎಂಟು ಗಂಟೆಯಾಯಿತು. ಅಟೆಂಡೆಂಟ್ ಮುದುಕನ ಡಿನ್ನರ್ ಪ್ಯಾಕೆಜ್ ತಂದುಕೊಟ್ಟ. ಸುಜಾತಾ ಆದಿತ್ಯನ ಹೆಂಡತಿ ಕೊಟ್ಟ ಚಿಕ್ಕ ಟಿಫಿನ್ ಬಾಕ್ಸ್ ತೆರೆದಳು. ಊಟ ಮುಗಿಸಿ ಮಲಗುವ ಸಿದ್ಧತೆ ನಡೆಸಿದಳು. ಹಿಂದಿನ ರಾತ್ರಿ ಚೆನ್ನಾಗಿ ನಿದ್ರೆ ಮಾಡಿರಲಿಲ್ಲ, ಇನ್ನು ಇಡೀ ದಿನ ಆ ಮುದುಕನ ಹುಡುಕಾಟದ ದೃಷ್ಟಿ ಎದುರಿಸುತ್ತ ಕಣ್ಣು ಮುಚ್ಚಲೂ ಆಗಿರಲಿಲ್ಲ. ಅವನ ಮಾತುಗಳನ್ನು ನೆನೆಸಿಕೊಳ್ಳುತ್ತ ಕಣ್ಣು ಮುಚ್ಚಿದವಳಿಗೆ ನಿದ್ರೆ ಯಾವಾಗ ಆವರಿಸಿಕೊಂಡಿತೋ ತಿಳಿಯಲೇ ಇಲ್ಲ.

ಮಾರನೆ ಮುಂಜಾನೆ ಎಚ್ಚರವಾಯಿತು. ಬೆಳಗ್ಗೆ ಸುಮಾರು ಐದು ಗಂಟೆಯ ಹೊತ್ತಿಗೆ ರೈಲು ಕಟಕ್ ತಲುಪುತ್ತದೆ. ಸುಜಾತಾ ಅವಸರದಿಂದ ಎದ್ದಳು. ಸಾಮಾನುಗಳೆಲ್ಲ ಸೀಟಿನ ಕೆಳಗಿನಿಂದ ಹೊರಗೆ ಎಳೆದು ಬಾಗಿಲ ಹತ್ತಿರ ಇಡಲು ಸಜ್ಜಾದಳು. ಆಗ ಆ ಮುದುಕ "ರೈಲು ಒಂದು ಗಂಟೆ ಲೇಟ್ ಇದೆ. ಅವಸರ ಮಾಡಬೇಡ! ರೈಲಿನಿಂದ ಇಳಿಯಲು ನಾನು ನಿನಗೆ ಸಹಾಯ ಮಾಡುತ್ತೇನೆ" ಎಂದ.

ಸುಜಾತಾ ಮುದುಕನಿಗೆ ಧನ್ಯವಾದ ಹೇಳಿದಳು. ಇನ್ನು ಹದಿನೈದು ನಿಮಿಷಗಳಲ್ಲಿ ರೈಲು ಭುವನೇಶ್ವರ್ ತಲುಪುತ್ತದೆಂದು ಕಂಪಾರ್ಟ್‌ಮೆಂಟಿನ ಅಟೆಂಡೆಂಟ್‌ನಿಂದ ತಿಳಿದುಕೊಂಡಳು. ಆಗ ವೃದ್ಧನೂ ಎದ್ದು ಕೂತ. ತನ್ನಿಂದಾಗಿ ಆ ವೃದ್ಧ ಬೇಗ ಏಳಬೇಕಾಯಿತೆಂದು ತಿಳಿದು ಸುಜಾತಾಳಿಗೆ ಬೇಸರವಾಯಿತು.

ಆಗ ಆತ "ಸುಜಾತಾ, ಇಂಡಿಯಾದಲ್ಲಿ ಅನೇಕ ...ಯುವತಿಯರು ಹಾಗೂ ಮಧ್ಯ ವಯಸ್ಸಿನ ಮಹಿಳೆಯರು ಒಂದಲ್ಲ ಒಂದು ಕಾರಣದಿಂದಾಗಿ ತಮಗಿಂತಲೂ ಹೆಚ್ಚು ವಯಸ್ಸಿನ ಗಂಡಸರನ್ನು ಮದುವೆಯಾಗುತ್ತಾರೆ. ನಿನ್ನ ಪರಿಚಯದವರಲ್ಲಿ ಯಾರಾದರೂ ಆರೋಗ್ಯವಂತೆ ಹಾಗೂ ಯೋಗ್ಯವಂತ ಮಧ್ಯ ವಯಸ್ಸಿನ ಮಹಿಳೆ ಇದ್ದಾರೆಯೆ? ಆಕೆಯ ಮೇಲೆ ಯಾರ ಬಂಧನಗಳೂ ಇರಬಾರದು. ಒಂದಿಷ್ಟು ಓದಿದವಳಾದರೂ ಸರಿಯೇ. ಆಕೆ ಬಯಸುವುದಾದರೆ ನಾನು ವಿವಾಹವಾಗಲು ಸಿದ್ಧನಿದ್ದೇನೆ. ಆಕೆ ನನ್ನೊಡನೆ ಆಸ್ಟ್ರೇಲಿಯಾದಲ್ಲಿ ಇರಲು ತಯಾರಿರಬೇಕು ಅಷ್ಟೆ. ಒಬ್ಬಂಟಿ ಆಗಿರುವುದು ಈಗ ಸರಿ ಅನ್ನಿಸುತ್ತಿಲ್ಲ. ನನ್ನ ಅತ್ಯಂತ ಹತ್ತಿರದ ಮನೆಯೂ ಒಂದು ಮೈಲಿ ದೂರ ಇದೆ. ನಾನು ಸತ್ತರೂ ಕೇಳುವವರಿಲ್ಲದಂತಾಗಿದೆ. ನಾನು ಎಷ್ಟು ವೃದ್ಧನಾಗಿ ಕಾಣಿಸುತ್ತೇನಾದರೂ ನಾನು ಅಷ್ಟು ವೃದ್ಧನಲ್ಲ. ಸತ್ಯ ಹೇಳುವುದಾದರೆ, ನಿನ್ನಂತಹ ಸುಂದರಿಗೆ ನಾನು ಈಗಲೂ ಎಲ್ಲ ರೀತಿಯ ಸುಖ ಕೊಡಲು ಸಮರ್ಥನಾಗಿದ್ದೇನೆ. ನನ್ನ ಉಳಿದ ಜೀವನವನ್ನು ಒಬ್ಬ ವಿಶ್ವಾಸನೀಯ ಭಾರತೀಯ ಮಹಿಳೆಯೊಂದಿಗೆ ಕಳೆಯಲು ಬಯಸಿದ್ದೇನೆ. ಬಣಗುಡುವ ಮನೆಗೆ ಹೋಗಲು ಮನಸ್ಸಾಗುತ್ತಿಲ್ಲ!!" ಎಂದ.

ಸುಜಾತಾ ಆಶ್ಚರ್ಯಚಕಿತಳಾದಳು. ಸ್ವಲ್ಪ ಹೊತ್ತಿನ ಮುಂಚೆ ಭಾರತೀಯ ಮನೋವೃತ್ತಿಯ ಬಗ್ಗೆ ಅಷ್ಟೊಂದು ಟೀಕೆಟಿಪ್ಪಣಿ ಮಾಡುತ್ತಿದ್ದ ವೃದ್ಧನಿಗೆ ತನ್ನ ಒಬ್ಬಂಟಿತನದ ಬಗ್ಗೆ ಏಕಿಷ್ಟು ದುಃಖವಾಗುತ್ತಿದೆ? ಅಷ್ಟು ಸಭ್ಯ ಹಾಗೂ ಸಮೃದ್ಧ ದೇಶದಲ್ಲಿದ್ದರೂ ಯಾಕಿಷ್ಟು ಅಸುರಕ್ಷತೆ ಆತನನ್ನು ಕಾಡುತ್ತಿದೆ? ಸುಜಾತಾ ಒಂದಿಷ್ಟು ಸುಧಾರಿಸಿಕೊಂಡು "ಮಿಸ್ಟರ್ ಮೆಕ್ಕಾರ್ಥಿ, ತಾವು ತಮ್ಮ ಸಮವಯಸ್ಸಿನ ಸ್ಥಳೀಯ ಮಹಿಳೆಯೊಬ್ಬಳನ್ನು ಸಂಗಾತಿಯಾಗಿ ಏಕೆ ಆಯ್ಕೆ ಮಾಡಿಕೊಳ್ಳುವುದಿಲ್ಲ? ಒಂದಿಷ್ಟು ಓದಿ ಬರೆದ ಮಹಿಳೆ ತಮ್ಮೊಡನೆ ವಿದೇಶಕ್ಕೆ ಹೋಗಿ ಅಲ್ಲಿ ತಮ್ಮ ಹೆಜ್ಜೆಯೊಂದಿಗೆ ಅದು ಹೇಗೆ ಹೆಜ್ಜೆ ಹಾಕಬಲ್ಲಳು?" ಎಂದು ಕೇಳಿದಳು.

'ತಮ್ಮ ನಂತರ ಆ ಮಹಿಳೆ ಆ ವಿದೇಶದಲ್ಲಿ ಒಬ್ಬಂಟಿಯಾಗಿ ಏನು ಮಾಡಬೇಕು?' ಎಂದು ಕೇಳಬೇಕೆನಿಸಿತು ಸುಜಾತಾಳಿಗೆ. ಆದರೆ ಮರಣದ ಹತ್ತಿರವಿರುವ ಮುದುಕನನ್ನು ಹಾಗೆ ಕೇಳಲು ಆಕೆಯಿಂದ ಆಗಲಿಲ್ಲ.

ಆ ಮುದುಕ "ನನಗೆ ಗೊತ್ತು, ಸ್ವಲ್ಪ ಸಹಾಯ ಮಾಡಿದರೂ ಸಾಕು ಭಾರತೀಯ ಮಹಿಳೆ ತನ್ನ ಸರ್ವಸ್ವವನ್ನೂ ಅರ್ಪಿಸಲು ಸಿದ್ಧಳಾಗುತ್ತಾಳೆ. ಅಂತಹ ಒಬ್ಬ ಸಹಾಯಕ ಹೆಣ್ಣು ನನ್ನ ನಸೀಬಿನಲ್ಲಿಲ್ಲವೇ? ಅವಳಿಗೆ ನಾನು ಎಲ್ಲ ಸುಖ ಕೊಡುವೆ. ಆಕೆ ನನ್ನ ಸಂಗಾತಿಯಾಗಿರುತ್ತಾಳೆ. ಅವಳಿಗೆ ಯಾವ ಅನಾನುಕೂಲತೆಯೂ ಆಗುವುದಿಲ್ಲ. ನಿನ್ನ ದೇಶದ ಮಹಿಳೆಯರನ್ನು ನಾನು ಚೆನ್ನಾಗಿ ಬಲ್ಲೆ. ಆಸ್ಟ್ರೇಲಿಯಾದ ಯಾವುದೇ ಮಹಿಳೆ ನನ್ನಂತಹ ಮುದುಕನನ್ನು ಯಾಕೆ ಒಪ್ಪಿಕೊಂಡಾಳು? ಅವರು ಬಹಳ ಸ್ವಾರ್ಥಿಗಳು. ಪ್ಲೀಸ್ ಸುಜಾತಾ ನನ್ನ ವಿಳಾಸ ನೋಟ್ ಮಾಡಿಕೊಂಡಿರು! ನನಗೆ ಗೊತ್ತು, ನೀನು ಬಹಳ ದಯಾಳು ಆಗಿರುವೆ! ಈ ಸಹ ಪಯಣಿಗನಿಗೆ ಒಬ್ಬಳು ಸಂಗಾತಿಯ ವ್ಯವಸ್ಥೆ ಮಾಡಿದೆಯಾದರೆ ನಾನು ನಿನಗೆ ಸದಾಕಾಲವೂ ಋಣಿಯಾಗಿರುವೆ! ತಗೋ ನನ್ನ ಕಾರ್ಡು ಇಟ್ಟುಕೊಂಡಿರು" ಎಂದ.

ಸುಜಾತಾ ಕೈಚಾಚಿ ಕಾರ್ಡು ತೆಗೆದುಕೊಂಡಳು. ಗಾಡಿ ಕಟಕ್ ತಲುಪಿತು. ಯುವಕನಂತೆ ಆ ವೃದ್ಧ ಸುಜಾತಾಳ ಎಲ್ಲ ಸಾಮಾನುಗಳನ್ನು ರೈಲಿನಿಂದ ಇಳಿಸಿ ಪ್ಲಾಟ್‌ಫಾರ್ಮ್ ಮೇಲಿಟ್ಟು ಅವಸರದಿಂದ ರೈಲು ಹತ್ತಿ ಕುಳಿತ ಹಾಗೂ ಕೈ ಬೀಸಿ ಬೀಳ್ಕೊಡುಗೆ ಹೇಳಿದ, ಸ್ವಲ್ಪ ಹೊತ್ತಿನಲ್ಲಿಯೇ ಗಾಡಿ ಕಣ್ಮರೆಯಾಯಿತು.

ಅಷ್ಟೊತ್ತಿಗೆ ಸುಜಾತಾಳ ಮಗ ಬಂದಿದ್ದ. ಅವನು ಕೂಲಿಯವನೊಡನೆ ಎಲ್ಲಾ ಸಾಮಾನು ಹೊತ್ತಿಸಿಕೊಂಡು ಅವಸರದಿಂದ ಫ್ಲಾಟ್‌ಫಾರ್ಮ್ ಮೇಲೆ ನಡೆಯುತ್ತಿದ್ದ. ಮಗನ ಹಿಂದೆ ನಡೆಯುತ್ತಾ ಸುಜಾತಾ ಆಕಾಶದ ಕಡೆಗೆ ಮುಖ ಮಾಡಿ "ದೇವರೆ, ನಿನಗೆ ಧನ್ಯವಾದ, ಈ ಭೂಮಿ ಮೇಲೆ ಭಾರತದಂತಹ ದೇಶ ಕೊಟ್ಟಿರುವೆ. ಇಲ್ಲಿ ವಯಸ್ಸಾದ ವೃದ್ಧಾವಸ್ಥೆಯವರು ವಧು-ವರರಾಗಲು ಅಥವಾ ಸಹಚರ-ಸಹಚರಿಯರಾಗಲು ಹುಡುಕಾಟ ಮಾಡಬೇಕಾದ ಅವಶ್ಯಕತೆ ಇಲ್ಲ. ಆಧುನಿಕ ಸಮಾಜದಲ್ಲಿ ತೀವ್ರಗತಿಯಲ್ಲಿ ಸಂಬಂಧಗಳು ಹರಿದುಕೊಳ್ಳುತ್ತಲಿದ್ದರೂ ಈಗಲೂ ಹೆಚ್ಚಿನ ಯುವಕರಲ್ಲಿ ತಮ್ಮ ವೃದ್ಧ ತಾಯಿ ತಂದೆಯರ ಬಗ್ಗೆ ಗೌರವಭಾವನೆ ಇದೆ. ಆದರೂ ಭಾರತೀಯ ಈ ಮನೋವೃತ್ತಿಯು ಬೇಗ ನಾಶವಾಗುವುದೇ?" ಎಂದು ಯೋಚಿಸಿದಳು.

ಈ ದೇಶದಲ್ಲಿ ನೀರು ಕೊಡುವ ನದಿಯನ್ನು ಪೂಜಿಸುತ್ತೇವೆ. ಪ್ರಾಣ ಕೊಡುವ ಗಾಳಿಯನ್ನು ಆರಾಧಿಸುತ್ತೇವೆ. ಬೆಳಕು ಕೊಡುವ ಸೂರ್ಯನಿಗೆ ಅರ್ಘ್ಯ ಕೊಡಲಾಗುತ್ತದೆ. ಅಂತಹ ದೇಶದಲ್ಲಿ ಜನ್ಮ ಕೊಡುವ ತಾಯಿ ತಂದೆಗೆ, ಸುಖ ದುಃಖದಲ್ಲಿ ಸಹಚರ್ಯ ಕೊಡುವ ಸ್ತ್ರೀ-ಪುರುಷರನ್ನು ಇಷ್ಟು ಬೇಗ ತ್ಯಜಿಸಲು ಸಾಧ್ಯವಾಗುತ್ತದೆಯೆ? ಇಲ್ಲ ಎಂದಿಗೂ ಇಲ್ಲ ಎನ್ನಿಸಿದ್ದರಿಂದ ಸುಜಾತಾಳ ಮನಸ್ಸು ಹಗುರವಾಯಿತು.


ಮುಂದೆ ನಡೆಯುತ್ತಿದ್ದ ಮಗನನ್ನು ಪ್ರೀತಿಯಿಂದ ನೋಡಿದಳು. ಇಲ್ಲ, ಆ ವಿದೇಶಿಗನಂತೆ ತಾನು ಎಂದೂ ನಿರಾಶೆಗೊಳ್ಳಬೇಕಿಲ್ಲ. ಈ ಮಧುರ ಸಂಬಂಧಗಳು ಎಂದಿಗೂ ಸಾಯುವುದಿಲ್ಲ. ಶತಮಾನಗಳಿಂದ ಹರಿದು ಬಂದ ನಮ್ಮ ಸಂಸ್ಕೃತಿ ಮುಂದೆಯೂ ಹೀಗೆ ಹರಿಯುತ್ತಿರುತ್ತದೆ ಎಂದು ಅವಳು ಮನಸ್ಸಿನಲ್ಲಿಯೇ ಅಂದುಕೊಂಡಳು.

ಏಕಾಂಗಿ ವೃದ್ಧನ ನೆನಪಾದೊಡನೆ ಅವಳ ಹೃದಯ ಕರುಣೆಯಿಂದ ತುಂಬಿತು.


ಒರಿಯಾ ಮೂಲ: **ದೀಪ್ತಿ ಪಟ್ನಾಯಕ್**

ಕನ್ನಡಕ್ಕೆ ರೂಪಾಂತರ: **ಪ್ರೊ. ಕಾಶೀನಾಥ ಅಂಬಲಗಿ**

ಮೋದಿಯ 'ಜನದ್ರೋಹಿ' ಮಸಲತ್ತು



ಬೊಲಂಗೋಚಿ ಕಾರ್ಪೋರೇಟ್ ಮಾಧ್ಯಮಗಳ ಅಬ್ಬರದ ತುತ್ತೂರಿಯ ನೆರವಿನಿಂದ 'ವಿಶಿಷ್ಟ' ಎಂದು ಕರೆಸಿಕೊಂಡ ಈ ವರ್ಷದ ಬಜೆಟ್ ಮಂಡಿಸಿದ್ದ ಮೋದಿ ಸರ್ಕಾರವೀಗ ಆರ್ಥಿಕ ಕೊರತೆಯ ಸಮಸ್ಯೆಗಳಿಂದ ತತ್ತರಿಸುತ್ತಿದೆ. ಪ್ರಸಕ್ತ ವರ್ಷದ ಆರ್ಥಿಕ ಕೊರತೆ ಬಜೆಟ್‌ನಲ್ಲಿ ನಿಗದಿಮಾಡಿರುವ ಒಟ್ಟು ಮೊತ್ತವನ್ನು ಮೀರಲಿರುವುದನ್ನರಿತ ಮೋದಿ ಸರ್ಕಾರದ ಕೊಡಲಿಯೇಟು ಬಿದ್ದಿರುವುದು ಮಾತ್ರ ಸಾಮಾಜಿಕ ಕ್ಷೇತ್ರದ ಮೇಲೆ. ಮೋದಿಗೆ ತಾನು ಚುನಾವಣೆಗಳ ವೇಳೆ ಕೊಟ್ಟಂಥ 'ಕಾರ್ಪೋರೇಟು', 'ಅಭಿವೃದ್ಧಿ'ಯ ಭರವಸೆಯನ್ನು ಈಡೇರಿಸಬೇಕಾದ ಅನಿವಾರ್ಯತೆ ಇದೆ. ಅಂತೆಯೇ ಇದೀಗ ಬಜೆಟಿನಲ್ಲಿ ವಿವಿಧ ಕಾರ್ಯಕ್ರಮಗಳಿಗಾಗಿ ಅಂದಾಜು ಮಾಡಲಾದ ವೆಚ್ಚಗಳನ್ನು ಪರಿಷ್ಕರಣೆ ಮಾಡಲು ಹೊರಟಿರುವ ವಿತ್ತ ಸಚಿವಾಲಯದ ಕೆಂಗಣ್ಣು ಬಿದ್ದಿರುವುದೇ ಮೋದಿ ದೃಷ್ಟಿಯಲ್ಲಿ ಅಷ್ಟೊಂದು ಮುಖ್ಯವಲ್ಲದ ಸಾಮಾಜಿಕ ವಲಯದ ಮೇಲೆ. ಹಳ್ಳಿಗಳ ಅಭಿವೃದ್ಧಿ ಮೇಲೆ. ಹಾಗಾಗಿ ಆದೀಗ ಬಜೆಟ್ಟಿನಲ್ಲಿ ಸಾಮಾಜಿಕ ವಲಯಕ್ಕೆಂದು ಮೀಸಲಾಗಿಟ್ಟ ದುಡ್ಡಿಗೆ ದೊಡ್ಡ ಮಟ್ಟದಲ್ಲಿ ಕನ್ನಹಾಕುತ್ತಿದೆ. ಪಂಚಾಯತ್ ವ್ಯವಸ್ಥೆ ಗ್ರಾಮೀಣಾಭಿವೃದ್ಧಿ



ಮತ್ತು ನಿರ್ಮಲೀಕರಣ ಕಾರ್ಯಕ್ರಮಗಳಿಗೆಂದು ಬಜೆಟ್‌ನಲ್ಲಿ ಮೀಸಲಾಗಿಟ್ಟ ಮೊತ್ತದಲ್ಲಿ ಶೇಕಡಾ 25ರಷ್ಟು ಕಡಿತ ಮಾಡಲಾಗುತ್ತಿದೆ. ಜೊತೆಗೆ ಶಿಕ್ಷಣಕ್ಷೇತ್ರದ ಅನುದಾನದಲ್ಲಿ 11,000 ಕೋಟಿ ರೂಪಾಯಿಗಳ ಕಡಿತ ಮಾಡಲಾಗುತ್ತಿದೆಯಾದರೆ ಆರೋಗ್ಯ ಕ್ಷೇತ್ರಕ್ಕೆಂದು ತೆಗೆದಿರಿಸಲಾಗಿದ್ದ ಮೊತ್ತದಿಂದ 7,000 ಕೋಟಿ ರೂಪಾಯಿಗಳಷ್ಟನ್ನು ಕಿತ್ತುಕೊಳ್ಳಲಾಗುತ್ತಿದೆ. ಪರಿಣಾಮವಾಗಿ ಸರ್ಕಾರಿ ಶಾಲೆಗಳು, ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛ ಭಾರತ ಅಭಿಯಾನ ಮತ್ತು ಆರೋಗ್ಯ ಸೇವೆಗಳ ಗತಿ ಏನಾಗಲಿದೆಯೆಂದು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಆದರೆ ಕಾರ್ಪೋರೇಟುಗಳ 'ಅಭಿವೃದ್ಧಿ'ಯ ಸಲುವಾಗಿ ಮೂಲಭೂತ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಗೊತ್ತುಪಡಿಸಲಾದ ಮೊತ್ತಕ್ಕೆ, ಅತ್ಯಂತ ಕಡಿಮೆ ಹಾನಿ ಆಗುತ್ತಿರುವುದನ್ನು ... [illegible]





ಅಕ್ಕ ನಾಗಮ್ಮನವರ ಗದ್ದುಗೆ



ಮುಖ್ಯಮಂತ್ರಿಗಳಿಗೊಂದು ಬಹಿರಂಗ ಪತ್ರ

ಗೌರವಾನ್ವಿತ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರಿಗೆ,

ಶರಣು ಶರಣಾರ್ಥಿ.

ಬಹಳ ನೋವಿನಿಂದ ಈ ಪತ್ರ ಬರೆಯುತ್ತಿರುವೆ. ಕೆಲ ದಿನಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ತರೀಕೆರೆ ಮಾರ್ಗವಾಗಿ ಹೋಗುತ್ತಿರುವಾಗ, ಅಲ್ಲಿನ ಎಣ್ಣೆಹೊಳೆ ಬಳಿಯಲ್ಲಿ ಲಿಂಗೈಕ್ಯರಾದ ಅಕ್ಕ ನಾಗಮ್ಮ (ನಾಗಲಾಂಬಿಕೆ)ನವರ ಗದ್ದುಗೆಗೆ 20 ವರ್ಷಗಳ ನಂತರ ಎರಡನೇ ಬಾರಿ ಭೇಟಿ ನೀಡುವ ಅವಕಾಶ ದೊರೆಯಿತು. ಅಲ್ಲಿನ ದುಸ್ಥಿತಿ ನೋಡಿ ವಿಷಾದವೆನಿಸಿತು.

ಇಡೀ ಬದುಕನ್ನು ಸಂಘಟನೆ ಮತ್ತು ಹೋರಾಟಗಳಲ್ಲಿ ಕಳೆದ ವೀರವನಿತೆ ಅಕ್ಕ ನಾಗಮ್ಮ 12ನೇ ಶತಮಾನದ ಶರಣರ ಚಳವಳಿಗೆ ಮೂಲ ಕಾರಣಳಾದವಳು. ಬಸವಣ್ಣನವರ ನವಸಮಾಜ ನಿರ್ಮಾಣಕ್ಕೆ ಬೆನ್ನೆಲುಬಾಗಿ ನಿಂತವಳು. ಸಮಗಾರ ಮೂಲದ ಹರಳಯ್ಯನವರ ಮತ್ತು ಬ್ರಾಹ್ಮಣ ಮೂಲದ ಮಧುವರಸರ ಮಕ್ಕಳಾದ ಶೀಲವಂತ ಹಾಗೂ ಲಾವಣ್ಯರ ಮದುವೆ ನಂತರ ಕಲ್ಯಾಣದಲ್ಲಿ ಪಟ್ಟಭದ್ರ ಹಿತಾಸಕ್ತಿಗಳಿಂದ ನಡೆದ ಶರಣರ ಹತ್ಯಾಕಾಂಡದಲ್ಲಿ ಸಹಸ್ರಾರು ವಚನಕಟ್ಟುಗಳನ್ನು ಕೂಡ ಸುಡಲಾಯಿತು. ಹರಳಯ್ಯ ಮತ್ತು ಮಧುವರಸರಿಗೆ ಎಳೆಹೂಟೆ ಶಿಕ್ಷೆಯ ಮೂಲಕ ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಅಳಿದುಳಿದ ಶರಣರು ದಿಕ್ಕಾಪಾಲಾಗಿ ಹೋದರು. ಇಂಥ ವಿಷಮ ವಾತಾವರಣದಲ್ಲಿ ಎದೆಗುಂದದ ಅಕ್ಕ ನಾಗಮ್ಮನವರು ಮಗ ಚೆನ್ನಬಸವಣ್ಣ, ಗಂಗಾಂಬಿಕೆ, ಕಿನ್ನರಿ ಬ್ರಹ್ಮಯ್ಯ, ನುಲಿಯ ಚಂದಯ್ಯ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಕೂಗಿನ ಮಾರಿತಂದೆ ಮುಂತಾದ ವೀರ ಶರಣರ ಜೊತೆ ವಚನಕಟ್ಟುಗಳ ರಕ್ಷಣೆಗಾಗಿ ರಕ್ಷಣಾತ್ಮಕ ಹೋರಾಟಗಳನ್ನು ನಡೆಸುತ್ತ ಉಳವಿಯ ಕಡೆ ನಡೆದರು. ಗಂಗಾಂಬಿಕೆ, ಮಾಚಿದೇವ, ಮಾರಿತಂದೆ, ಕಕ್ಕಯ್ಯ ಮುಂತಾದ ಶರಣರು ಉಳವಿ ತಲುಪುವ ಮೊದಲೇ ಲಿಂಗೈಕ್ಯರಾದರು.

ಉಳಿದವರು ಚೆನ್ನಬಸವಣ್ಣನವರ ನೇತೃತ್ವದಲ್ಲಿ ಉಳವಿ ತಲುಪಿದರು. ಆದರೆ ಸತತ ಮಳೆ, ಭಾರಿ ಚಳಿ, ವಿಷಜಂತುಗಳು, ಹಿಂಸ್ರಪ್ರಾಣಿಗಳು ಹಾಗೂ ಜಿಗಣೆಗಳಂಥ ಉಪದ್ರವ ನೀಡುವ ಕ್ರಿಮಿಕೀಟಗಳಿಂದಾಗಿ ಉಂಟಾದ ವಿಷಮ ವಾತಾವರಣದಲ್ಲಿ ಅನೇಕ ಶರಣರು ಅಕಾಲ ಮರಣಕ್ಕೆ ತುತ್ತಾದರು. ಇಂದಿಗೂ ಉಳವಿಯಲ್ಲಿ 'ಹೆಣದ ಕೆರೆ' ಎಂಬ ಗದ್ದೆ ಇದೆ. ಮಾನವಕುಲದ ಉದ್ಧಾರಕ್ಕಾಗಿ ಇರುವ ವಚನಗಳ ಸಂರಕ್ಷಣೆಗಾಗಿ ಶರಣರು ಎಷ್ಟೊಂದು ಕಷ್ಟಪಟ್ಟರು ಎಂಬುದು ಇದರಿಂದ ಗೊತ್ತಾಗುತ್ತದೆ. (ವಚನ ಗಳನ್ನು ಬರೆದ ಶರಣರಲ್ಲಿ ಶೇಕಡಾ 90ಕ್ಕೂ ಹೆಚ್ಚು ಮಂದಿ ಅಸ್ಪೃಶ್ಯ ಮತ್ತು ಹಿಂದುಳಿದ ಜನಾಂಗಗಳಿಂದ ಬಂದ ಕಾಯಕಜೀವಿಗಳು ಎಂಬುದನ್ನು ಮರೆಯಬಾರದು.) ಅವರು ಕಲ್ಯಾಣದಿಂದ ಹೊರಡುವಾಗ ವಚನ ಸಂಪತ್ತನ್ನು ಬಿಟ್ಟು ಇನ್ನಾವ ಸಂಪತ್ತನ್ನೂ ತಮ್ಮ ಜೊತೆಗೆ ತರಲಿಲ್ಲ. ಮಾನವೀಯ ಸಿದ್ಧಾಂತಗಳ ಮೂಲಕ ಜನ ಬದುಕಲೆಂದು ಅವರು ತಮ್ಮ ಪ್ರಾಣತ್ಯಾಗ ಮಾಡಿದರು! ಇಡಿ ವಿಶ್ವದಲ್ಲೇ ಅನನ್ಯವಾದ ಘಟನೆ ಇದು. ಇದಕ್ಕೆ ಮೂಲಪ್ರೇರಣೆ ಅಕ್ಕ ನಾಗಮ್ಮನವರು.

ಬಸವಣ್ಣ, ನೀಲಾಂಬಿಕೆ, ಗಂಗಾಂಬಿಕೆ, ಚೆನ್ನಬಸವಣ್ಣ ಹೀಗೆ ಇಡೀ ಕುಟುಂಬವೇ ಜನಕಲ್ಯಾಣಕ್ಕಾಗಿ ಜೀವ ತೇಯ್ದು ಇಹಲೋಕ ಯಾತ್ರೆ ಮುಗಿಸಿದ ನಂತರ ಅಕ್ಕ ನಾಗಮ್ಮನವರು ಉಳವಿಯಿಂದ ಬಾಳೆಹೊನ್ನೂರು ಮುಂತಾದ ಕಡೆಗಳಲ್ಲಿ ಸಾಗುತ್ತ ತರೀಕೆರೆ ಕಡೆಗೆ ಬಂದರು. ಆಗ ಜೊತೆಯಲ್ಲಿ ಶರಣ ನುಲಿಯ ಚಂದಯ್ಯನವರು ಮಾತ್ರ ಇದ್ದರು. ಅಕ್ಕ ನಾಗಮ್ಮನವರು ತರೀಕೆರೆಯಲ್ಲಿ ಲಿಂಗೈಕ್ಯರಾದ ನಂತರ ನುಲಿಯ ಚಂದಯ್ಯನವರು ನಂದಿಗ್ರಾಮದಲ್ಲಿ ಸ್ವಲ್ಪ ಸಮಯ ಉಳಿದು ಶರಣತತ್ತ್ವ ಪ್ರಚಾರ ಮಾಡಿದರು. ತದನಂತರ ಮುಂದೆ ಸಾಗಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ನುಲೆನೂರಿನಲ್ಲಿ ಲಿಂಗೈಕ್ಯರಾದರು.

ಇಂಥ ಚಾರಿತ್ರಿಕ ದಾಖಲೆ ಸೃಷ್ಟಿಸಿದ ಮಹಾನ್ ಶರಣೆ ಅಕ್ಕ ನಾಗಮ್ಮನವರ ಸಮಾಧಿ ಇಂದು ಅನಾಥವಾಗಿ ಹೇಳಹೆಸರಿಲ್ಲದಂತೆ ಜನಮಾನಸದಿಂದ ಮರೆಯಾಗುತ್ತ ಕನ್ನಡಿಗರ ಅವಜ್ಞೆಗೆ ಸಾಕ್ಷಿಯಾಗುತ್ತಿದೆ. ರಾಜ್ಯದಲ್ಲಿ ಸಹಸ್ರಾರು ವಿರಕ್ತಮಠಗಳ ಸ್ವಾಮಿಗಳು ಮಠಮಾನ್ಯಗಳನ್ನು ಹೊಂದಿದ್ದಾರೆ. ಬಸವಣ್ಣನವರ ಹೆಸರಿನಲ್ಲಿ ಮಠಗಳ ಬೆಳವಣಿಗೆಗಾಗಿ ಭಕ್ತರಿಂದ ಮತ್ತು ಸರ್ಕಾರಗಳಿಂದ ಕೋಟ್ಯಂತರ ರೂಪಾಯಿ ಪಡೆದುಕೊಳ್ಳುವುದರಲ್ಲೇ ಅವರಲ್ಲಿನ ಅನೇಕರು ತಲ್ಲೀನರಾಗಿದ್ದಾರೆ. (ಬಸವಣ್ಣನವರ ಧರ್ಮದಲ್ಲಿ ಮಠಗಳಿಲ್ಲ, ಸ್ವಾಮಿಗಳಿಲ್ಲ, ಮಂದಿರಗಳಿಲ್ಲ, ಮೂರ್ತಿಗಳಿಲ್ಲ. ಆದರೆ ಇಂದಿನ ಬಸವಧರ್ಮದಲ್ಲಿ ಯಾವುವು ಇರಬಾರದಾಗಿತ್ತೋ ಅವೇ ಪ್ರಮುಖ ಸ್ಥಾನ ಪಡೆಯುತ್ತಿವೆ) ಕೆಲವು ಸ್ವಾಮಿಗಳಿಗೆ ಎಂಜಿನಿಯರಿಂಗ್, ಮೆಡಿಕಲ್, ಡೆಂಟಲ್ ಮತ್ತು ನರ್ಸಿಂಗ್ ಕಾಲೇಜುಗಳನ್ನು ಪಡೆಯುವುದರಲ್ಲೇ ಆಸಕ್ತಿ ಇದೆ. ಇನ್ನೂ ಕೆಲವರು ಬೆಂಜ್ ಕಾರು, ಬುಲೆಟ್ ಪ್ರೂಫ್ ಕಾರುಗಳಿಗೆ ಮೋಹಗೊಂಡಿದ್ದಾರೆ. ಮತ್ತೆ ಕೆಲವರು ನೂರಾರು ಕೋಟಿ ರೂಪಾಯಿಗಳನ್ನು ಸಂಗ್ರಹಿಸುತ್ತ ಬಸವಣ್ಣನವರ ಮೂರ್ತಿ ನಿಲ್ಲಿಸುವ ಯೋಜನೆ ರೂಪಿಸುತ್ತಿದ್ದಾರೆ. ಇವರಾರಿಗೂ ಶರಣರ ಕ್ರಾಂತಿಯ ಮೂಲಸೆಲೆಯಾದ ಅಕ್ಕ ನಾಗಮ್ಮನವರ ಸಮಾಧಿಯ ಕಡೆಗೆ ಗಮನವಿಲ್ಲ. ಕೋಟ್ಯಧೀಶ ಲಿಂಗಾಯತರು ಕೂಡ ಶ್ರೀಮಂತ ಸ್ವಾಮಿಗಳನ್ನು ಸಂಪ್ರೀತಗೊಳಿಸುವಲ್ಲಿ ಮತ್ತು ರಾಜಕೀಯ ಹುದ್ದೆ ಪಡೆಯುವುದರಲ್ಲಿ ತಲ್ಲೀನರಾಗಿದ್ದಾರೆ. ದೇಶದ ಇತಿಹಾಸ ಜ್ಞಾನದ ರಕ್ಷಣೆಗಾಗಿ ಖಡ್ಗ ಹಿಡಿದ ಮೊದಲ ವೀರ ಅಕ್ಕ ನಾಗಮ್ಮನವರ ಬಗೆಗಿನ ನಮ್ಮ ಉದಾಸೀನತೆಗೆ ... ಇಲ್ಲ.

ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾ... ನಾಗಮ್ಮನವರ ಸಮಾಧಿ ಸ್ಥಳದ ಅಭಿವೃದ್ಧಿಗಾಗಿ ... ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಆದರೆ ತ... ಕಾರಣಗಳಿಂದಾಗಿ ಆ ಹಣ ಚಿಕ್ಕಮಗಳೂರು ಜಿಲ್ಲಾಧಿಕಾ... ಕಚೇರಿಗೆ ವಾಪಸಾಯಿತು. ಅಕ್ಕ ನಾಗಮ್ಮನವರ ಸ... ಸ್ಥಳ ಇಂದು ಖಾಸಗಿಯವರ ಆಸ್ತಿಯಾಗಿದೆ. ಆ ಸ್ಥಳದ... ಅಭಯ ನೀಡಿ ಸಮಾಧಿ ಸ್ಥಾನವನ್ನು ಐತಿಹಾಸಿಕ ಸ್ಮೃತಿ... ಸ್ಥಾನವಾಗಿ ಅಭಿವೃದ್ಧಿಗೊಳಿಸುವುದು ಇಂದಿನ ತು... ಅವಶ್ಯಕತೆಯಾಗಿದೆ.

ರಾಜ್ಯ ಸರ್ಕಾರ ಮನಸ್ಸು ಮಾಡಿದರೆ ಸಂವಿಧಾನದ... ಆ ಜಾಗವನ್ನು ಪಡೆದುಕೊಳ್ಳುವುದರಲ್ಲಿ ಯಾವುದೇ ಸ... ಇಲ್ಲ. ತಾವು ಈ ಪವಿತ್ರವಾದ ಕಾರ್ಯ... ಪೂರ್ತಿಗೊಳಿಸುವ ಮೂಲಕ 12ನೇ ಶತಮಾನದ ಶರಣ ಸಂಕುಲಕ್ಕೆ ಮತ್ತು ಮಾನವ ಘನತೆಗೆ ಗೌರವ ಸಲ್ಲಿಸುವಿರೆಂದು ಆಶಿಸುವೆ.




ಶರಣುಗಳೊಂದಿಗೆ,

● ರಂಜಾನ್ ದರ್ಗಾ

ಕೊಚ್ಚೆ ಮನಸ್ಸಿನ ಸ್ವಚ್ಛ ಭಾರತ

ಬಾಗಿಲುಗಳಿಲ್ಲದ ಕಿಟಕಿಯ ಬಳಿ ಗಾಳಿಯ ಹೊಡೆತವನ್ನು ಸಹಿಸಿ, ಸೊಳ್ಳೆ ತಿಗಣೆಗಳ ಚಿತ್ರಹಿಂಸೆಯ ಜೊತೆಗೆ ಮೂರು ಜನ ವಾಸಿಸಲು ಯೋಗ್ಯವಾದ ಕೊಠಡಿಯಲ್ಲಿ 8-9 ಜನ "ಅಡ್ಜಸ್ಟ್" ಮಾಡಿಕೊಂಡೇ ಮಲಗಬೇಕು! ಇಂತಹ ಸುಖನಿದ್ರೆಯನ್ನು ಮುಗಿಸಿ ಬೆಳಗೆದ್ದು ತಟ್ಟೆ ಹಿಡಿದು ತಿಂಡಿಗಾಗಿ ಸುಮಾರು 30 ಮೀಟರ್ ಸರದಿ ಸಾಲಿನಲ್ಲಿ ನಿಂತು ತಿಂಡಿ ಸಿಗಬಹುದೇ ಎಂದು ತಮ್ಮ ತಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಬೇಕು. ತಿಂಡಿ ಮುಗಿಸಿ ಕೈತೊಳೆಯುವ ಜಾಗಕ್ಕೆ ಬಂದರೆ ಅಲ್ಲಿ ಅಡುಗೆಭಟ್ಟರಾದಿಯಾಗಿ ಎಲ್ಲರೂ ಮೂತ್ರ ವಿಸರ್ಜನೆ ಮಾಡಿರುವ ದುರ್ನಾತವನ್ನು ಸಹಿಸಬೇಕು. ಇನ್ನು ಕುಡಿಯುವ ನೀರು... ಶುದ್ಧವಾಗಿದ್ದರೆ ಶೋಭೆಯೇ? ಶಾಂತಂ ಪಾಪಂ... ಅದು ಕೂಡ ಪಾಚಿಯೊಟ್ಟಿಗೆ ಬರುವ ಪುಣ್ಯಜಲ!! ನೀರಿನಿಂದ ಬರುವ ಚರ್ಮರೋಗಗಳು ಇಲ್ಲಿ ಸರ್ವಸಾಮಾನ್ಯ. ಇದೇನು ಕ್ರಿಮಿನಲ್(?)ಗಳನ್ನು ಶಿಕ್ಷಿಸಲೆಂದೇ ಇರುವ ಜೈಲುಗಳೆಂದು ತಿಳಿದಿರೆ? ಖಂಡಿತ ಅಲ್ಲ, ಭಿಕ್ಷುಕರ ಪುನರ್ವಸತಿ ಕೇಂದ್ರದ ಚಿತ್ರಣವೂ ಅಲ್ಲ, ಈ ಜಾಗ ನಮ್ಮ ಭಾರತ ದೇಶವನ್ನು ಕಟ್ಟಬೇಕಿರುವ ವಿದ್ಯಾರ್ಥಿ-ಯುವಜನರು ವಾಸಿಸುತ್ತಿರುವ, ಘನ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ, ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿರುವ ಭಗವಾನ್ ಬುದ್ಧ ಕಾನೂನು ವಿದ್ಯಾರ್ಥಿ ನಿಲಯದ ಸಂಕ್ಷಿಪ್ತ ಚಿತ್ರಣ! ರಾಜ್ಯದ ಇತರೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯವೂ ಇದಕ್ಕಿಂತ ಹೆಚ್ಚು ಭಿನ್ನವಾಗಿರುವುದಿಲ್ಲ.

ಇಂತಿಪ್ಪ ಸಂದರ್ಭದೊಳ್, ಬೆಂಗಳೂರಿನ ಎಲ್ಲಾ ಸರ್ಕಾರಿ ವಿದ್ಯಾರ್ಥಿನಿಲಯಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಒಂದು ಸುತ್ತೋಲೆ ಬರುತ್ತದೆ. "ದಿನಾಂಕ 14 ಮತ್ತು 15 ರ ನವೆಂಬರ್‌ನ ತಿಂಗಳಿನ ಸದರಿ ದಿನಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ 'ಸ್ವಚ್ಛತಾ ಆಂದೋಲನ'(ಪ್ರಜ್ಞಾವಂತ ದಲಿತ ಹುಡುಗರು ಮೋದಿಯನ್ನು ವಿರೋಧಿಸುವರೆಂದು ತಿಳಿದು ಸ್ವಚ್ಛ ಭಾರತವೆಂದು ನೇರವಾಗಿ ನಮೂದಿಸಿರಲಿಲ್ಲ)ವನ್ನು ಮಾಡತಕ್ಕದ್ದು ಮತ್ತು ಇದರಲ್ಲಿ ನಿಲಯಪಾಲಕರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸತಕ್ಕದ್ದು" ಎಂಬ ಸುತ್ತೋಲೆಯು ನಿಲಯದ ಗೋಡೆ ಹತ್ತಿತ್ತು, ಅಂತೆಯೇ 14ರ ಬೆಳಗ್ಗೆಯಿಂದಲೆ ನಿಲಯಪಾಲಕರು ವಿದ್ಯಾರ್ಥಿಗಳೊಟ್ಟಿಗೆ ಕಾರಿಡಾರ್, ಹೊರಾಂಡದಲ್ಲಿನ ಪ್ಲಾಸ್ಟಿಕ್ ಮತ್ತು ಗಿಡಗಳನ್ನು ಕಿತ್ತು ಸ್ವಚ್ಛಗೊಳಿಸಿದರು (?). ಇನ್ನು ನೀರಿನ ತೊಟ್ಟಿ, ಶೌಚಾಲಯಗಳ ಕಡೆ ಮುಖ ಹಾಕದ ಸಿಬ್ಬಂದಿಗಳು, ಎಂದಿನಂತೆ ಆ ಕೆಲಸವನ್ನು



ಕನಿಷ್ಠ ವೇತನವನ್ನೂ ಪಡೆಯದ ನಿಲಯದ ಪೌರ ಕಾರ್ಮಿಕನಾಗಿರುವ ಪರಮೇಶನಿಗೆ ಮೀಸಲಿಟ್ಟರು.

ಈ 'ಆಂದೋಲನ'ಕ್ಕೆ ವಿದ್ಯಾರ್ಥಿಗಳು ಮೋದಿ ಮತ್ತು ನಿಲಯಪಾಲಕರಿಗೆ ಹಿಡಿ ಶಾಪಹಾಕುತ್ತಲೇ ಭಾಗವಹಿಸಿದ್ದು ಸಾಮಾನ್ಯವಾಗಿ ಕಾಣುತಿತ್ತು, ಇನ್ನೂ ಮೋದಿಯ ಸ್ವಚ್ಛ ಭಾರತ ಎಂದು ಬಂದವರು ಕ್ಯಾಮರಾಗಳಿಗೆ ಪೋಸು ಕೊಟ್ಟಾದ ಮೇಲೆ ಪೇರಿ ಕಿತ್ತರು. ನಿರಾಸಕ್ತಿ ತೋರುವ ವಿದ್ಯಾರ್ಥಿಗಳಿಗೆ ನಿಲಯಪಾಲಕರು "ಬರ್ರೋ ಸ್ವಲ್ಪ ಕೈಜೋಡಿಸಿ, ನಮ್ಮ ಪ್ರಧಾನಿ ಮೋದಿಯೇ ಪೊರಕೆ ಹಿಡಿಯುವಾಗ ನಾವುಗಳು ಇಷ್ಟಾದರೂ ಮಾಡುವುದು ಬೇಡವೆ?" ಎಂದು ಹುರಿದುಂಬಿಸಲು ಪ್ರಯತ್ನಿಸುತ್ತಿದ್ದರಾದರು ಅವರು ಕ್ಯಾರೆ ಅನ್ನುವಂತಿರಲಿಲ್ಲ. ಕೆಲವು ಪ್ರಾಮಾಣಿಕರು ಈ ನೆಪದಲ್ಲಾದರೂ ಹಾಸ್ಟೆಲ್ ಒಂದಷ್ಟು ಸ್ವಚ್ಛವಾಗಲೆಂದು ಕೊನೆಯವರೆಗೂ (?) 'ಸ್ವಚ್ಛತಾ ಆಂದೋಲನ'ದಲ್ಲಿದ್ದರು. (ನಿಲಯ ಇನ್ನೇನು ಸ್ವಚ್ಛ ಆಗಿಯೇಬಿಟ್ಟಿತು ಎಂದು ಭಾವಿಸಿದ್ದವರಿಗೆ ಶೌಚಾಲಯದಿಂದ ಬರುತ್ತಿದ್ದ ವಾಸನೆ ಮತ್ತು ಪಾಚಿಯುಕ್ತ ನೀರು ಗಂಟಲಿನಲ್ಲಿಳಿದು ಸಮಾಧಾನ ಮಾಡಿದ್ದವು). ಅಂತೂ ಇಂತು ಅಧಿಕಾರಿಗಳ ಒತ್ತಡಕ್ಕೂ, ಫೋಟೊ ತೆಗೆಸಿಕೊಳ್ಳುವ ಶೋಕಿಗೂ ಮತ್ತು ಸ್ವಚ್ಛ ಭಾರತವೆಂಬ ಕ್ರೇಜಿಗೂ ಸ್ವಚ್ಛ ಭಾರತವೆಂಬ ಮೆಲೋಡ್ರಾಮಾ ಮುಗಿಯಿತು, ಫೋಟೊಗಳನ್ನು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಕೆಲಸ ಮುಗಿಸಿದ್ದೇವೆ ಅನ್ನುವ ಪುರಾವೆಯನ್ನು ವಾಟ್ಸ್ ಆಪ್ ಮಾಡಿದ ನಿಲಯಪಾಲಕರು 'ಅಚ್ಚುಕಟ್ಟಾಗಿ' ತಮ್ಮ ಕೆಲಸ ಮುಗಿಸಿದ್ದರು. ಅತ್ತ ಕಡೆ ಅಧಿಕಾರಿಗಳೂ ಏನೋ ಸಾಧಿಸಿಬಿಟ್ಟೆವೆಂಬ ನೆಮ್ಮ... ನಿಟ್ಟುಸಿರು ಬಿಟ್ಟರಂತೆ! (ಎರಡು ದಿನದಲ್ಲೆ ಹಾಸ್ಟೆಲ್ ಯಥಾಸ್ಥಿತಿಗೆ ಬ... ಎಂದು ಮತ್ತೆ ಬಿಡಿಸಿ ಹೇಳಬೇಕಾಗಿಲ್ಲ ಅಲ್ಲವೆ?)

ಇಷ್ಟೆಲ್ಲ ಇಲ್ಲಿ ಚರ್ಚಿಸಲು ಕಾರಣವಿದೆ. ಮೊದಲೇ ಹೇಳಿ... ವಿದ್ಯಾರ್ಥಿನಿಲಯ ಸಾವಿರಾರು ಸಮಸ್ಯೆಗಳ ಗೂಡಾಗಿದೆ. ವಿದ್ಯಾರ್ಥಿಗಳ ಊ... ಪೌಷ್ಟಿಕಾಂಶದ ಮಾತು ಕೇಳುವಂತಿಲ್ಲ, ಮೊಟ್ಟೆ, ಬಾಳೆಹಣ್ಣು, ... ಪಲ್ಯಗಳಂತಹ ಪದಾರ್ಥಗಳು ಇಲ್ಲಿ ಕನಸಿನ ಮಾತೇ ಸರಿ. ನಿಲಯ ಪಾ... ಇಲ್ಲಿ ಊಟ ಮಾಡುವುದೇ ಇಲ್ಲ!! ಇದರಿಂದ ಇಲ್ಲಿನ ಊಟದ ಗುಣ... ಹೇಗಿದೆ ಎಂದು ಅರ್ಥಮಾಡಿಕೊಳ್ಳಬಹುದಾಗಿದೆ.

ಇದನ್ನೆಲ್ಲಾ ವಿರೋಧಿಸಿ ಪ್ರತಿಭಟನೆಗಳು ನಡೆದಿವೆ. ಸಮಾಜ ... ಅಧಿಕಾರಿಗಳೊಂದಿಗೆ ಚರ್ಚಿಸಿ ಹಲವು ಬೇಡಿಕೆಗಳನ್ನು ವಿದ್ಯಾರ್ಥಿಗಳು ಇ... ಮೂಲಭೂತ ಸೌಕರ್ಯಗಳನ್ನು ಒದಗಿಸುವ ಹಲವು ಬೇಡಿಕೆಗಳ ಜೊತೆ... "ಅಧಿಕಾರಿಗಳು ತಿಂಗಳಲ್ಲಿ ಎರಡು ದಿನ ನಿಲಯದ ಕೊಠಡಿಗಳಲ್ಲಿ ... ಹೂಡಬೇಕು" ಎಂಬುದೂ ಒಂದಾಗಿತ್ತು, ಇದನ್ನು ಕೇಳಿಯೇ ಹ... ಸಮಾಜ ಕಲ್ಯಾಣ ಅಧಿಕಾರಿ ಲಕ್ಷ್ಮಣ್ ರೆಡ್ಡಿ ನಿಲಯದ ಕಡೆ/ವಿದ್ಯಾ... ಕಡೆ ತಲೆ ಹಾಕದೆ ಕಾಣೆಯಾಗಿದ್ದಾರೆ. ಇನ್ನು ಅಧಿಕಾರ ಸ್ವೀಕರಿಸಿದ ಹೊಸ... ಸಮಾಜ ಕಲ್ಯಾಣ ಸಚಿವ ಆಂಜನೇಯ ಅವರು "ವಿದ್ಯಾರ್ಥಿನಿಲಯ... ವಿಶೇಷ ಒತ್ತು ಕೊಡುವೆ, ಹಾಸ್ಟಲ್‌ನಲ್ಲಿ ವಾಸ್ತವ್ಯ ಮಾಡುವೆ" ಎಂದು ... ಈಗ ತಮ್ಮ ಮಾತು ತಪ್ಪಿದ್ದಾರಲ್ಲದೆ, ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ... ಹಕ್ಕಾಗಿ) ಭಾಗವಹಿಸಿದರೆ ಅಂತವರಿಗೆ ವಿದ್ಯಾರ್ಥಿವೇತನ ರದ್ದು ಮಾಡು... ವಿದ್ಯಾರ್ಥಿ ವಿರೋಧಿ ಕರಡು ರಚಿಸಲು ಮುಂದಾಗಿದ್ದಾರೆ!!

ರಾಜ್ಯದ ಎಲ್ಲಾ ಕಡೆ, ಸರ್ಕಾರಿ ವಿದ್ಯಾರ್ಥಿನಿಲಯಗಳ ಸ್ಥಿತಿ ... ಶೋಚನೀಯವಾಗಿದೆ. ಅಲ್ಲಿ ಮೂಲಭೂತ ಸೌಕರ್ಯದ ಮಾತು ಹ... ಕನಿಷ್ಠ ಓದುವ ವಾತಾವರಣವೂ ಇಲ್ಲ, ಇಂತಹ ದಯನೀಯ ಸ್ಥಿತಿ ಇದ್ದಾ... ಇದರ ಸುಧಾರಣೆಯ ಕಡೆ ಗಮನ ಹರಿಸದ ಕೊಚ್ಚೆ ಮನಸ್ಸಿನ ಅಧಿಕಾ... ಸ್ವಚ್ಛ ಭಾರತಕ್ಕೆ ಒತ್ತು ನೀಡುವುದು ಅನ್ಯಾಯವಲ್ಲವೆ? ಹಳ್ಳಿಗಾಡಿನ ದ... ಸಮುದಾಯಗಳಿಂದ 'ಉತ್ತಮ ಶಿಕ್ಷಣ'(?)ವನ್ನು ಪಡೆಯಲು ಬಂ... ಶೋಷಿತ ವಿದ್ಯಾರ್ಥಿಗಳನ್ನು ಇಲ್ಲಿ ಇನ್ನಷ್ಟು ಶೋಷಿಸಲಾಗುತ್ತಿದೆ. ... ವಾತಾವರಣದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಎಂತಹ ಸಮಾ... ಕಟ್ಟಬಹುದು ಯೋಚಿಸಿ....

ಸ್ವಚ್ಛ ಭಾರತಕ್ಕೆ ಇದೇ ವಿದ್ಯಾರ್ಥಿಗಳನ್ನು ಬಳಸಿಕೊಂಡ ಆದರೆ ವಿದ್ಯಾ... ಹಿತ ಕಾಯದ ಸಮಾಜ ಕಲ್ಯಾಣ ಅಧಿಕಾರಿಗಳಿಗೆ, ಸಚಿವರಿಗೆ, ಮ... ನನ್ನದೊಂದು ಧಿಕ್ಕಾರ...

● ಸರೋವರ್ ಬೆಂ...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಪುರಾಣ ಕೇಳಿ, ಓದಬೇಡಿ

ನಮ್ಮ ದೇಶದ ಬಹು ಜನರ ಅದರಲ್ಲೂ ಸಾಮಾನ್ಯ ...ರ ಸಾಮಾನ್ಯ ಲಕ್ಷಣವೆಂದರೆ ಓದುವುದಕ್ಕಿಂತ ಕೇಳಿ ...ಯುವುದು. ಇದಕ್ಕೆ ಕಾರಣಗಳು ಕಾಲದಿಂದ ಕಾಲಕ್ಕೆ ...ಲಾಗುತ್ತಾ ಬಂದಿದೆ. ಆರಂಭದಲ್ಲಿ ಹೆಚ್ಚಿನ ಜನ ...ಕ್ಷರಸ್ಥರಾಗಿದ್ದರು. ಕೆಲವೇ ಮಂದಿ ಅಕ್ಷರ ಬಲ್ಲವರಾಗಿದ್ದರು. ... ಮತ್ತು ಇತರ ಕಠಿಣ ಪರಿಶ್ರಮದ ಕಸುಬುಗಳಿಂದಾಗಿ ...ದೆ ಕಲಿಕೆ ಮತ್ತು ವಿದ್ಯಾಭ್ಯಾಸಕ್ಕೆ ತಾವಾಗಿಯೇ ...ಹಾಲು ಜನ ಆಸಕ್ತಿ ವಹಿಸಲಿಲ್ಲ. ಜೊತೆಗೆ ಬ್ರಾಹ್ಮಣ್ಯದ ...ವಾ ಇತರೇ ಸಾಮಾಜಿಕ ಮೇಲ್ವರ್ಗದ ಅಧಿಕಾರವೂ ...ರಜ್ಞಾನದ ಪರಿಗ್ರಹಿಸುವಿಕೆಯ ಮೇಲೆ ಅಧಿಕಾರವನ್ನು ...ಸಿದ್ದು, ಅಕ್ಷರವಾಗಲಿ ಅಥವಾ ವಿದ್ಯೆಯಾಗಲಿ ತೀರಾ ...ಮಾನ್ಯ ಮತ್ತು ಕೆಳಸ್ತರದ ವರ್ಗಗಳಿಗೆ ತಲುಪಲೇ ಇಲ್ಲ. ...ರೆಲ್ಲರೂ ಪ್ರವಚನಕಾರರನ್ನೇ ಅವಲಂಬಿಸಿದ್ದರು. ಹಾಗಾಗಿ ...ಚನಕಾರ ತಾನು ಓದಿರುವುದು ಅದೇನೇ ಇದ್ದರೂ ...ಕ್ಕೆ ಸಮೀಪವಾಗಿ ಅಥವಾ ವ್ಯತಿರಿಕ್ತವಾಗಿ ತನ್ನದೇನನ್ನೋ ...ಿ ಕೇಳುಗರಿಗೆ ಮನದಟ್ಟು ಮಾಡಿಬಿಡುತ್ತಾನೆ. ಅದು ...ತಮಾನಗಳಿಂದ ನಡೆದಿದೆ. ಪ್ರವಚನಕಾರರು ತಮ್ಮ ...ರ್ಣನೆಗಳನ್ನು ಇದರಲ್ಲಿ ಬೆರೆಸಿ ಧಾರಾಳವಾಗಿ ಕೇಳುಗರಿಗೆ ...ಬಡಿಸುತ್ತಿದ್ದರು. ಪ್ರವಚನಕಾರನ ಭಾವುಕತೆ ಮತ್ತು ...ಾರಿಕತೆಯ ಆಧಾರದಲ್ಲಿ ವಸ್ತು ವಿಷಯಗಳು ಕೇಳುಗರಿಗೆ ...ಪುವುದು ಮಾತ್ರವಲ್ಲದೇ ಪ್ರತಿಷ್ಠಾಪಿತವಾಗುತ್ತಿತ್ತು.

ಈಗಲೂ ಬಹಳಷ್ಟು ಜನರು ಅಕ್ಷರಸ್ಥರಾದರೂ ...ದ್ಯಾವಂತರಲ್ಲ. ಅಕ್ಷರಸ್ಥರೆಂದರೆ ಓದಲು ಮತ್ತು ಬರೆಯಲು ...ವರು. ವಿದ್ಯಾವಂತರೆಂದರೆ ಅಕ್ಷರಗಳು ಹೇಳುವ ಮತ್ತು ...ದೇ ಇರುವ ಸಂದೇಶಗಳನ್ನೂ ತಿಳಿಯುವುದು.

ಅಕ್ಷರಸ್ಥ ಮತ್ತು ವಿದ್ಯಾವಂತರ ಜೊತೆಜೊತೆಗೆ ...ಜ್ಞಾವಂತರನ್ನು ಮತ್ತು ಜ್ಞಾನಿಗಳನ್ನು ಹಾಗೂ ಚತುರ ...ವಾ ಕುಶಲಕಾರರನ್ನು ಸೇರಿಸಲಾಗದು ಎಂಬುದನ್ನು ...ಡಬೇಕು. ಯಾವುದೇ ರೀತಿಯಲ್ಲಿ ಅಕ್ಷರಸ್ಥರಲ್ಲದೇ ...ವವರು ಮತ್ತು ಕ್ರಮದಲ್ಲಿ ಕಲಿತ ವಿದ್ಯಾವಂತರಲ್ಲದೇ ...ಂತಹ ನಮ್ಮ ಪೂರ್ವಿಕರು ಪ್ರಜ್ಞಾವಂತರೂ, ಜ್ಞಾನಿಗಳೂ ...ತ್ತು ಕುಶಲಕರ್ಮಿಗಳೂ ಆಗಿದ್ದರು. ಆದರೆ ಅವರು ...ಲತೆಗಳನ್ನು ಅರಿಯುವಷ್ಟು ಕೌಟಿಲ್ಯರಾಗಿರಲಿಲ್ಲ. ಅವರು ...ಗ್ಧರು. ತಾವು ಸುಳ್ಳು ತಟವಟಗಳನ್ನು ಮಾಡದೇ ...ವುದರಿಂದ ಇತರರನ್ನೂ ಹಾಗೆಯೇ ನಂಬುತ್ತಿದ್ದರು. ...ವು ಮಾಡುವ ಕೃಷಿ ಅಥವಾ ಕುಶಲಕರ್ಮಗಳಲ್ಲಿ ಹೇಗೆ ...ೕಸ ಮಾಡಲು, ಭತ್ತವನ್ನು ಗೋಧಿಯೆನ್ನಲು ...ಧ್ಯವಾಗುವುದಿಲ್ಲವೋ ಅದೇ ರೀತಿ ಕಲಿತವರು ತಾವು ...ಕುವುದನ್ನು ಹೇಳುವುದರಲ್ಲೂ ಹಾಗೆಯೇ ...ತ್ತಾರೆಂದು ನಂಬಿದ್ದರು.

ರಾಮಾಯಣವೆಷ್ಟು ಗೊತ್ತು?


...ತನ್ನ ಅನೇಕ ಜನ ಹೆಂಡತಿಯರೊಡನೆ, ಕುಡಿಯುತ್ತಾ ...ತಃಪುರಗಳಲ್ಲಿ ಕಾಲ ಕಳೆಯುತ್ತಿದ್ದ ರಾಮ ಎಂದಿಗೂ ...ಜ್ಯಭಾರದ ಕಡೆ ಗಮನ ಕೊಟ್ಟವನೇ ಅಲ್ಲ. ಎಲ್ಲವನ್ನೂ ...ತನೇ ನಿಭಾಯಿಸುತ್ತಿದ್ದದ್ದು. ಇದನ್ನು ಮೂಲ ...ಮಾಯಣದ ಪ್ರಕಾರವೇ ಬಾಬಾ ಸಾಹೇಬ್ ಅಂಬೇಡ್ಕರ್ ...ರಿಸುತ್ತಾ "ರಾಮನು ಪ್ರಜೆಗಳ ಕಷ್ಟವನ್ನು ವಿಚಾರಿಸಿದನು ...ಬುದಕ್ಕೆ ಕೇವಲ ಒಂದೇ ಒಂದು ಸಂದರ್ಭವನ್ನು ...ಲ್ಮೀಕಿ ದಾಖಲೆಯಾಗಿ ಒದಗಿಸುತ್ತಾನೆ. ಆದರೆ ...ರದೃಷ್ಟವಶಾತ್, ಆ ಸಂದರ್ಭವೂ ಒಂದು ದುರಂತವೇ ...ದೆ. ಈ ಘಟನೆಯಲ್ಲಿ ಆಗಿರಬಹುದಾದ ಅನ್ಯಾಯವನ್ನು ...ತಾನೇ ಸರಿಗಟ್ಟಲು ಹೋಗಿ, ಇತಿಹಾಸ ಹಿಂದೆಂದೂ ...ರಿಯದ ಘೋರ ಅಪರಾಧವನ್ನು ತನ್ನ ಕೈಯಿಂದಲೇ ...ಬಿಡುತ್ತಾನೆ" ಎಂದು ಹೇಳಿ ಶೂದ್ರ ಶಂಭೂಕನ ...ಯ ಕಥೆಯನ್ನು ವಿವರಿಸುತ್ತಾರೆ.


...ರಾಮನ ಆಳ್ವಿಕೆಯಲ್ಲಿ ಅಕಾಲ ಮರಣಗಳಿರುವುದಿಲ್ಲ ...ದು ವಾಲ್ಮೀಕಿ ವಿವರಿಸುತ್ತಾನೆ. ಆದರೆ ಅದು ...ಸ್ವರದುಟ್ಟಿಗೆ ಉತ್ಪ್ರೇಕ್ಷೆ ಎಂದರೆ, ಅವನ ಹೆಂಡತಿಯಾದ ...ತೆಯೇ ಆತ್ಮಹತ್ಯೆ ಮಾಡಿಕೊಂಡೋ ಅಥವಾ ...ಸ್ಮಿಕವಾಗಿಯೋ ಅಕಾಲ ಮರಣಕ್ಕೆ ಈಡಾಗುತ್ತಾಳೆ. ...ತೆಯ ಬಗ್ಗೆ ಅಂತಃಕರಣದಿಂದ ಬರೆಯುವ ಅಂಬೇಡ್ಕರ್ ...ಗದಂತೆ ವರ್ತಿಸಿದ ರಾಮನನ್ನು ಸೇರುವುದಕ್ಕಿಂತ ಸೀತೆಗೆ ...ಯುವುದೇ ಸರಿಯೆನಿಸಿತು" ಎಂದು ಆಕೆ ಆತ್ಮಹತ್ಯೆ ...ಡಿಕೊಂಡಳು ಎಂದು ಸೂಚ್ಯವಾಗಿ ತಿಳಿಸುತ್ತಾರೆ. ಸೀತೆಯ ... ಬಿಡಿ. ವರ್ಣಾಶ್ರಮ ಪದ್ಧತಿಯಲ್ಲಿ ಸ್ತ್ರೀಗೆ ಗೈದು ...ಮ ಹಿಕ್ಕೆಯಾಗಿ ಬಿದ್ದು ಸಾಯಬೇಕಿತ್ತು ಅಥವಾ ಹೀಗೆ ...ವಾದರೂ ಸಾಯಬೇಕಾಗಿದ್ದ ಅನಿವಾರ್ಯತೆ ಇತ್ತು ...ನೆ ರಾಮನೆಂಬುವನ ನೆರಳಿನಂತೆ ಜೀವನಪೂರ್ತಿ ...ವಾಲಿಸಿದ ಲಕ್ಷ್ಮಣನೂ ಆತ್ಮಹತ್ಯೆ ಮಾಡಿಕೊಂಡ. ...ಮನು ಏಕಾಂತದಲ್ಲಿರುವಾಗ ಲಕ್ಷ್ಮಣ ಕಾವಲಿಗಿದ್ದ. ಆಗ ...ಸ ದೂರ್ವಾಸ ಬಿಡಬಾರದೇ ಇದ್ದರೂ ಶಾಪದ

ಭೀತಿಯಿಂದ ಅವನನ್ನು ಬಿಟ್ಟುಬಿಟ್ಟ ಲಕ್ಷ್ಮಣ ಕರ್ತವ್ಯಲೋಪ ಎಸಗಿದವನಾಗಿ ತಾನು ಸರಯೂ ನದಿಯಲ್ಲಿ ಮುಳುಗಿ ಸತ್ತ. ಇದಕ್ಕಿಂತ ದೊಡ್ಡ ದುರಂತವೆಂದರೆ ಸ್ವಯಂ ರಾಮನೇ ಆತ್ಮಹತ್ಯೆ ಮಾಡಿಕೊಂಡು ಸಾಯುವುದು. ತನ್ನ ಹೆಂಡತಿಯನ್ನು ಅಗಲಿರಲು ಸಾಧ್ಯವಿದ್ದ, ತಾನೇ ಸ್ವಯಂ ಕಾಡಿಗೆ ಕಳಿಸಲೂ ಸಾಧ್ಯವಾದ ರಾಮನಿಗೆ ಈ ತನ್ನ ತಮ್ಮನ ಅಗಲುವಿಕೆಯನ್ನು ಭರಿಸಲಾಗಲಿಲ್ಲ. ಅವನೂ ಕೂಡ, ಅಷ್ಟರಲ್ಲಿ ಅವನ ಅವತಾರದ ಉದ್ದೇಶ ಮುಗಿದಿತ್ತಂತೆ, ಸರಯೂ ನದಿಯಲ್ಲಿ ಸ್ವಯಂಪ್ರೇರಿತನಾಗಿ ಮುಳುಗಿ ಸತ್ತ.

ಇನ್ನು ಶಂಭೂಕನ ವಧೆಯ ಘಟನೆಯಲ್ಲಿ ನಾವು ಗಮನಿಸಬೇಕಾದ ಅನೇಕ ಮಹತ್ವದ ಒಳನೋಟಗಳಿವೆ.

ರಾಮನ ಆಳ್ವಿಕೆಯಲ್ಲಿ ಅಕಾಲ ಮರಣಗಳಿರುವುದಿಲ್ಲ. ಈ ರೂಢಿಗೆ ವಿರುದ್ಧವಾಗಿ ಒಬ್ಬ ಬ್ರಾಹ್ಮಣನ ಮಗನು ಅಕಾಲ ಮರಣಕ್ಕೀಡಾಗುತ್ತಾನೆ. ಶೋಕತಪ್ತನಾದ ಬ್ರಾಹ್ಮಣನು ಸತ್ತ ಬಾಲಕನ ಶವವನ್ನು ತಂದು ಅರಮನೆಯ ಬಾಗಿಲಿನ ಮುಂದಿಟ್ಟು ಗೋಳಾಡುತ್ತಾನೆ. ತನ್ನ ಮಗನ ಸಾವಿಗಾಗಿ ರಾಮನನ್ನು ದೂರುತ್ತಾನೆ. ರಾಮನ ರಾಜ್ಯದಲ್ಲೆಲ್ಲೋ ಜರುಗಿರುವ ಪಾಪದ ಪರಿಣಾಮವಾಗಿ ತನ್ನ ಮಗನು ಸತ್ತಿದ್ದಾನೆ. ಅಂತಹ ಪಾಪವನ್ನು ಎಸಗಿದ ಪಾಪಿಯನ್ನು ಶಿಕ್ಷಿಸದೇ ಇದ್ದಲ್ಲಿ ರಾಜನೇ ತಪ್ಪಿತಸ್ಥನಾಗುತ್ತಾನೆ. ತನ್ನ ಮಗನು ಮರಳಿ ಜೀವ ಪಡೆಯುವವರೆಗೂ ತಾನು ರಾಮನ ವಿರುದ್ಧ ಆಮರಣಾಂತ ಉಪವಾಸ ಮಾಡುವುದಾಗಿ ಬೆದರಿಸುತ್ತಾನೆ. ಆಗ ರಾಮ ಎಂಟು ಮಂದಿ ಮೇಧಾವಿ ಋಷಿಗಳೊಡನೆ ಚರ್ಚಿಸಿದಾಗ ನಾರದ "ರಾಮರಾಜ್ಯದಲ್ಲಿ ಪ್ರಜೆಗಳೊಬ್ಬರ ಪೈಕಿ ಯಾರೋ ಶೂದ್ರನೊಬ್ಬನು ತಪಸ್ಸು ಮಾಡುತ್ತಿದ್ದಾನೆ. ತಪಸ್ಸು ಮಾಡುವ ಹಕ್ಕು ದ್ವಿಜ ಅಂದರೆ ಎರಡು ಬಾರಿ ಹುಟ್ಟಿದವನಿಗೆ ಮಾತ್ರ. ಶೂದ್ರನೆಂದರೆ ಆತನಿಗೆ ಯಾವುದೇ ಸಂಸ್ಕಾರವಿಲ್ಲ, ದೀಕ್ಷೆಯಿಲ್ಲ. ಅವನು ತಪಸ್ಸಿಗೆ ಯೋಗ್ಯನಲ್ಲ. ಇದರಿಂದಾಗಿಯೇ ಧರ್ಮಕ್ಕೆ ಚ್ಯುತಿ ಬಂದು ಬ್ರಾಹ್ಮಣನ ಮಗ ಸತ್ತಿದ್ದಾನೆ" ಎಂದು ಹೇಳುತ್ತಾನೆ.





ಆಗ ರಾಮನು ಪುಷ್ಪಕವಿಮಾನವನ್ನು ಏರಿ ಆ ಧರ್ಮಕ್ಕೆ ಚ್ಯುತಿತಂದ ರಾಮರಾಜ್ಯದ ದ್ರೋಹಿಗಾಗಿ, ಬ್ರಾಹ್ಮಣನ ಮಗನ ಕೊಲೆಪಾತಕನಿಗಾಗಿ ಹುಡುಕಾಡಿದಾಗ ದಕ್ಷಿಣ ಭಾಗದ ದಟ್ಟವಾದ ಪ್ರದೇಶದಲ್ಲಿ ಒಬ್ಬನು ಉಗ್ರ ತಪಸ್ಸನ್ನು ಮಾಡುತ್ತಿದ್ದ ಎಂದು ಕಾಣಿಸುತ್ತದೆ. ಅವನು ಸಶರೀರವಾಗಿ ಸ್ವರ್ಗ ಸೇರಲು ತಪಸ್ಸು ಮಾಡುತ್ತಿರುತ್ತಾನೆ. ರಾಮ ವಿಚಾರಿಸಿದಾಗ ಅವನು ಶೂದ್ರ ಶಂಭೂಕನೇ ಆಗಿದ್ದು ಗೊತ್ತಾಗುತ್ತದೆ. ರಾಮ ಕೂಡಲೇ ಶಂಭೂಕನ ತಲೆಯನ್ನು ಕಡೆಯುತ್ತಾನೆ. ಆ ಕ್ಷಣದಲ್ಲೇ ದೂರದ ಅಯೋಧ್ಯೆಯಲ್ಲಿ ಬ್ರಾಹ್ಮಣನ ಮಗನಿಗೆ ಜೀವ ಬರುತ್ತದೆ. ಧಾರ್ಮಿಕ ಹಕ್ಕಿಲ್ಲದಿದ್ದ ಶಂಭೂಕನು ಸತ್ತ ವಿಷಯಕ್ಕೆ ದೇವತೆಗಳು, ಋಷಿಗಳು ಸಂತೋಷಪಡುತ್ತಾರೆ. ಹೂಮಳೆಗರೆಯುತ್ತಾರೆ. ಅಗಸ್ತ್ಯ ಮಹರ್ಷಿಯು ಆತನಿಗೆ ದೈವೀಕವಾದ ಕೈಕಡಗವನ್ನು ಉಡುಗೊರೆಯಾಗಿ ಕೊಡುತ್ತಾನೆ. ಜನರಲ್ ಡಯರ್ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಮಾಡಿದಾಗ ಆತನಿಗೆ ಚಿನ್ನದ ಪಿಸ್ತೂಲನ್ನು ಕೊಟ್ಟು ಇಂಗ್ಲೆಂಡಲ್ಲಿ ಸನ್ಮಾನಿಸಿದಂತೆ.

ಇವಿಷ್ಟನ್ನು ಆ ಘಟನೆ ವಿವರಿಸುತ್ತದೆ.

ಇದರಲ್ಲಿ ಕಂಡುಬರುವ ವಿಷಯಗಳೇನು? ತಪಸ್ಸೆಂಬುದು ದ್ವಿಜನಾದ ಬ್ರಾಹ್ಮಣನು ಮಾತ್ರ ಮಾಡುವಂತಿದ್ದು ಇತರರು ಮಾಡಬಾರದ್ದೆಂದರೆ ಆ ಒಂದು ಉದಾತ್ತವಾದ ಕ್ರಿಯೆಯೆಂಬುದನ್ನು ಸಾರ್ವತ್ರಿಕವಾಗಲು ಬ್ರಾಹ್ಮಣರು ಬಿಡಲಿಚ್ಛಿಸಿರಲಿಲ್ಲ ಎಂಬುದು. ಅದು ಸ್ಪಷ್ಟವಾಗಿಯೇ ನಮ್ಮ ಚರಿತ್ರೆ, ಸಂಸ್ಕೃತಿ ಮತ್ತು ಸಾಮಾಜಿಕ ಪರಂಪರೆಗಳು ಹೇಳುತ್ತವೆ. ಇನ್ನೂ ಮುಂದುವರೆದು ಹೇಳುವುದೆಂದರೆ ಶೂದ್ರನೊಬ್ಬ ತಪಸ್ಸು ಮಾಡುವನೆಂದರೆ ಬ್ರಾಹ್ಮಣನೊಬ್ಬನ ಮಗನು ಸಾಯುತ್ತಾನೆಂದು. ಇಲ್ಲಿ ಸೂಕ್ಷ್ಮವನ್ನು ಗಮನಿಸಿದಾಗ ಶೂದ್ರರಿಗೆ ವಿದ್ಯೆ ದೊರಕಿದರೆ ತಮ್ಮ ಮುಂದಿನ ಪೀಳಿಗೆಯು ಸಂಕಷ್ಟಕ್ಕೆ ಈಡಾಗುವುದೆಂಬ ದೂರಾಲೋಚನೆ. ಇದರಲ್ಲಿ ಹಾಗಿದೆ, ಅದರಲ್ಲಿ ಹೀಗಿದೆ ಎಂದು ತಮ್ಮ ಮೂಗಿನ ನೇರಕ್ಕೆ, ತಮ್ಮ ಹಿತಾಸಕ್ತಿಗೆ ಧಕ್ಕೆಯಾಗದಂತೆ

ಮೋಸಗೊಳಿಸಿಕೊಂಡೇ ಪ್ರವಚನಕಾರರಾಗಿ ಬಂದಿದ್ದ ಬ್ರಾಹ್ಮಣ ಹಿತಾಸಕ್ತಿಯ ಕಾವಲುಭಟರಿಗೆ ಇನ್ನು ಶೂದ್ರರು ತಾವೇ ಓದಲು ಪ್ರಾರಂಭಿಸಿದರೆ ಬಣ್ಣಗಳು ಬಯಲಾಗುವ ಆತಂಕವೂ ಅಲ್ಲಿ ಧ್ವನಿಸುತ್ತದೆ.

ವೈಷ್ಣವ ಜನತೋ

ಬ್ರಾಹ್ಮಣನು ಸತ್ತ ಮಗನ ಶವವನ್ನು ತೆಗೆದುಕೊಂಡು ಅರಮನೆಗೆ ಹೋಗಿ ಉಪವಾಸ ಮಾಡುವುದನ್ನು ನೋಡಿದರೆ ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆಯಾದ ಪೂನಾ ಒಪ್ಪಂದ ನೆನಪಿಗೆ ಬರುತ್ತದೆ. ಮುಸಲ್ಮಾನರಿಗೆ ನೀಡಿರುವಂತೆ ಅಸ್ಪೃಶ್ಯರಿಗೂ ಪ್ರತ್ಯೇಕ ಚುನಾಯಕಗಳನ್ನು ನೀಡುವಂತೆ 1927ರಲ್ಲಿ ಸೈಮನ್ ಆಯೋಗದ ಮುಂದೆ ಅಂಬೇಡ್ಕರ್ ವಾದ ಮಂಡಿಸುತ್ತಾರೆ. ಮುಂದೆ ಲಂಡನ್‌ನ ದುಂಡುಮೇಜಿನ ಸಮ್ಮೇಳನದಲ್ಲಿಯೂ ಇದೇ ವಾದವನ್ನು ಮಂಡಿಸಿದಾಗ, ಇದರಿಂದ ಹಿಂದೂ ಧರ್ಮವು ಹೋಳಾಗುವುದೆಂದು ಗಾಂಧೀಜಿ ಒಪ್ಪದೇ ವಿರೋಧಿಸುತ್ತಾರೆ. ಆದರೆ ಅಂಬೇಡ್ಕರ್ ವಾದವನ್ನು ಗೌರವಿಸಿದ ಬ್ರಿಟಿಷ್ ಸರ್ಕಾರ ಆಗಸ್ಟ್ 17, 1932ರಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಕಗಳ ಬದಲು, ವಿಶೇಷ ಚುನಾಯಕಗಳಿಗೆ ಆದೇಶ ಹೊರಡಿಸುತ್ತಾರೆ. ಆದರೆ ಗಾಂಧೀಜಿಯವರು ಆಮರಣಾಂತ ಉಪವಾಸ ಕೈಗೊಳ್ಳುತ್ತಾರೆ. ಕಸ್ತೂರಿಬಾರವರೇ ಮೊದಲಾಗಿ ಅನೇಕರು ಭಾವನಾತ್ಮಕವಾಗಿಯೂ ಗಾಂಧೀಜಿಯವರ ಮಾತು ಕೇಳುವಂತೆ ಅಂಬೇಡ್ಕರ್‌ರವರನ್ನು ಮನವೊಲಿಸಲು ಯತ್ನಿಸುತ್ತಾರೆ. ಆಗ ಒಲ್ಲದ ಮನಸ್ಸಿನಿಂದಲೇ ಅಂಬೇಡ್ಕರ್ ಯರವಾಡ ಜೈಲಿನಲ್ಲಿ ಒಪ್ಪಂದಕ್ಕೆ ಸಹಿಹಾಕಿ ಹೊರಗೆ ಬಂದಾಗ ಈ ಒಪ್ಪಂದದ ಬಗ್ಗೆ ಮಾಧ್ಯಮ ಮಿತ್ರರು ಕೇಳುತ್ತಾರೆ. ಆಗ ಅಂಬೇಡ್ಕರ್ ಹೇಳಿದ್ದನ್ನು ನೋಡಿ: "ಬ್ರಿಟಿಷರ ಜೊತೆ ಹೋರಾಟ ಮಾಡಿ ಒಂದು ರಸಭರಿತ ಹಣ್ಣನ್ನು ನನ್ನ ಜನರಿಗೆ ತಂದಿದ್ದೆನು. ಮಹಾತ್ಮ ಗಾಂಧಿಯವರು ಆ ಹಣ್ಣನ್ನು ಸಮನಾಗಿ ಹಂಚಿಕೊಡುವುದಾಗಿ ಹೇಳಿ ನನ್ನಿಂದ ಕಿತ್ತುಕೊಂಡರು. ಆ ಹಣ್ಣಿನ ರಸವನ್ನೆಲ್ಲಾ ಹೀರಿಕೊಂಡು ಸಿಪ್ಪೆಯನ್ನು ನನ್ನ ಮತ್ತು ನನ್ನ ಜನರ ಮುಖದ ಮೇಲೆ ಉಗಿದಿದ್ದಾರೆ. ಉಗಿಸಿಕೊಂಡವರಿಗೆ ಏನನಿಸುತ್ತದೆ?" ಎಂಬುದು ಅವರ ಸಂಕಟವಾಗಿತ್ತು. ಶೂದ್ರನೊಬ್ಬನ ಹಕ್ಕನ್ನು ಕಿತ್ತುಕೊಳ್ಳಲು ರಾಮರಾಜ್ಯದಲ್ಲಿ ಬ್ರಾಹ್ಮಣನೊಬ್ಬ ರಾಮನ ಮುಂದೆ ಉಪವಾಸ ಮಾಡುವ ಬೆದರಿಕೆಯನ್ನು ಒಡ್ಡಿದ್ದು, ಭಾರತವನ್ನು ರಾಮರಾಜ್ಯವನ್ನಾಗಿ ಕಾಣಲು ಕನವರಿಸುತ್ತಿದ್ದ ಗಾಂಧೀಜಿ ಈ ಸಂದರ್ಭದಲ್ಲಿ ಮಾಡಿದ ಉಪವಾಸ ನೆನಪಿಗೆ ಬರುತ್ತದೆ. ಗಾಂಧೀಜಿಗೆ ಅಸ್ಪೃಶ್ಯರ ಬಗ್ಗೆ ತಮ್ಮದೇ ಆದ ಉದಾತ್ತವಾದ ವೈಚಾರಿಕವಾದ ಧೋರಣೆ ಮತ್ತು ಮಾನವೀಯವಾದ ಕಳಕಳಿ ಇದ್ದಿರಬಹುದು. ಆದರೆ ಅವರಿಗೆ ಅದರ ಸೂಕ್ಷ್ಮತೆಯ ಅರಿವೇ ಇರಲಿಲ್ಲ ಎಂದು ಸ್ಪಷ್ಟವಾಗಿ ಅನಿಸುತ್ತದೆ.

ರಾಮರಾಜ್ಯ

ರಾಮರಾಜ್ಯದ ಕನಸು ಕಾಣುತ್ತ, ರಾಮಭಜನೆಯನ್ನು ಮಾಡುತ್ತಾ, ರಾಮನನ್ನು ಆದರ್ಶವಾಗಿ ಕಾಣುತ್ತಾ, ಅಸ್ಪೃಶ್ಯರನ್ನು ಹರಿಜನರೆಂದು ಕರೆಯುವ ಗಾಂಧೀಜಿ ನನಗೆ ವೈಷ್ಣವ ಧರ್ಮದ ಪ್ರಚಾರಕರಾಗಿಯೂ ಕಾಣುತ್ತಾರೆ. ನನಗೆ ಅವರು ರಾಮನೆಂಬ ನಮ್ಮ ಸಮಸಮಾಜಕ್ಕೆ ಒಗ್ಗದ ಪುರುಷೋತ್ತಮನನ್ನು ಆದರ್ಶವಾಗಿ ಅಥವಾ ಆರಾಧ್ಯವಾಗಿ ಸ್ವೀಕರಿಸಿರುವುದೇ ಒಂದು ಆಶ್ಚರ್ಯವಾಗಿತ್ತು. ರಾಮರಾಜ್ಯವೆಂಬುದೇನು? ಸಾಧಾರಣ ಡೋಬಿ ಗಂಡಹೆಂಡತಿ ಮನೆಯೊಳಗೆಲ್ಲೋ ಮಾತಾಡಿಕೊಳ್ಳುವುದು ಆಳರಸನ ಕಿವಿ ತಲುಪುವಷ್ಟು ಗೂಢಾಚಾರರ ರಾಜ್ಯವದು. ತಪಸ್ಸು ಮತ್ತು ಅಧ್ಯಯನದಂತಹ ಅರಿವಿಗೆ ಸಂಬಂಧಪಟ್ಟಂತಹ ವಿಷಯವು ಶೂದ್ರರಿಗೆ ನಿಲುಕಬಾರದು ಎಂಬ ಅಸಮಾನತೆಯ ರಾಜ್ಯವನ್ನು ಬಯಸಿದ್ದಾದರೂ ಏಕೆ ಮತ್ತು ಹೇಗೆ ಎಂದು. ಸ್ವಂತ ಹೆಂಡತಿಯನ್ನೇ ವಿಚಾರಣೆಯಿಲ್ಲದೇ ಕಾಡುಪಾಲು ಮಾಡಿದ ಸ್ತ್ರೀ ವಿರೋಧಿ ಗಂಡನ ಹೊಣೆಗೇಡಿತನದ ರಾಜ್ಯವದು. ವಾಲ್ಮೀಕಿ ರಾಮರಾಜ್ಯವೆಂದರೆ ಏನು ಹೀಗೆ ಚೆನ್ನಾಗಿ ವಿವರಿಸಿದ್ದಾರೆ. ಆದರೆ, 1992, ಡಿಸೆಂಬರ್ 6ರಂದು ರಾಮರಾಜ್ಯವೆಂದರೆ ಹೇಗಿರುತ್ತದೆ ಎಂದು ಮನುವಾದಿಗಳು ನಮಗೆ ಭಾರತದಲ್ಲಿ ಒಂದು ನಿದರ್ಶನವನ್ನೂ ಕೊಟ್ಟರು.


ಇರಲಿ, ಶೂದ್ರ ಶಂಭೂಕನ ಘಟನೆ ಇನ್ನೊಂದು ಮಹತ್ತರವಾದ ಒಳನೋಟವನ್ನು ನೀಡುತ್ತದೆ. ಪುರೋಹಿತ ವರ್ಗವು ಆಳುವ ವರ್ಗದೊಡನೆ ಪರಸ್ಪರ ಬೆರೆಯುವುದರ ಅಪಾಯವನ್ನು ಸ್ಪಷ್ಟಪಡಿಸುತ್ತದೆ. ಪುರೋಹಿತ ವರ್ಗ, ಆಳುವ ವರ್ಗವು ಶಾಮೀಲಾಗುವುದರಿಂದ ಸಾಧಾರಣ ಜನರು, ಅಧಿಕಾರ ಪ್ರತಿಷ್ಠೆಗಳಿಂದ ಹೊರತಾದ ಜನರು ತಮ್ಮ ಪಾಡಿಗೆ ತಾವು ವ್ಯಕ್ತಿಗತವಾದ ಉನ್ನತಿಯನ್ನೂ ಪಡೆಯಲು ಸಾಧ್ಯವಾಗದು ಎಂದು ಹೇಳುತ್ತದೆ.

ದೇವತೆಗಳು, ಬ್ರಾಹ್ಮಣರು ಮತ್ತು ಇತರರು ಶೂದ್ರ ಶಂಭೂಕನ ವಧೆಯಾದ ಮೇಲೆ ರಾಮನ ಮೇಲೆ ಹೂಮಳೆಗರೆದು ಕೊಂಡಾಡಿದರು. ಸರಿ, ಆದರೆ ಅಗಸ್ತ್ಯನೆಂಬ ದ್ರಾವಿಡನಿಗೇನು ಅಲ್ಲಿ ಕೆಲಸ? ಅಗಸ್ತ್ಯನು ಆರ್ಯನಲ್ಲ, ತನ್ನ ಅಧ್ಯಯನದಿಂದ ಮತ್ತು ತಪಸ್ಸಿನಿಂದ ತಾನು ಮಹರ್ಷಿಯೆಂಬ ಗೌರವಕ್ಕೆ ಪಾತ್ರನಾಗಿದ್ದ. ಹುಟ್ಟಿನಿಂದ ಬ್ರಾಹ್ಮಣನಲ್ಲ, ಆದರೆ ಸಾಧನೆಯಿಂದ ಬ್ರಾಹ್ಮಣನೆಂಬುದನ್ನು ನಿರೂಪಿಸಿದ್ದ. ಆದರೆ ಆರ್ಯನಲ್ಲದ, ಬ್ರಾಹ್ಮಣನಲ್ಲದ ಮತ್ತೊಬ್ಬ ಶೂದ್ರನು ತಪಸ್ಸು ಮಾಡಿ, ಆ ಅಧಿಕಾರದಿಂದ ವಂಚಿತನಾಗಿ ಕೊಲೆಗೀಡಾದಾಗ ಪ್ರತಿಭಟಿಸುವ ಬದಲು ತಾನೇ ಕೈಕಡಗವನ್ನು ಉಡುಗೊರೆಯಾಗಿ ಕೊಟ್ಟು ಸನ್ಮಾನಿಸುತ್ತಾನಲ್ಲಾ?

ತಾನು ಯಾವುದೇ ಮೂಲದಿಂದ ಬಂದಿರಲಿ, ತನಗೊಂದು ಸ್ಥಾನಮಾನವು ದೊರಕಿದ ಮೇಲೆ ಅದನ್ನು ಉಳಿಸಿಕೊಳ್ಳಲು ಮತ್ತೆ ಆಳುವವರ್ಗಕ್ಕೆ ಸಲಾಮು ಹೊಡೆಯುವ ಜನರು ಇಲ್ಲಿ ನೆನಪಿಗೆ ಬರುತ್ತಾರೆ. ದಲಿತರು, ಶೂದ್ರರು ಮತ್ತು ಇತರ ಅನೇಕರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಒಂದು ಉತ್ತಮ ಹಂತವನ್ನು ತಲುಪಿದಾಗ ಅದನ್ನು ಕಳೆದುಕೊಳ್ಳದಿರಲು ತಮ್ಮತನವನ್ನು ಬಿಟ್ಟುಕೊಡುವುದು. ಆಳುವವರ್ಗದ ಹೊಳಪು ಇವರ ಕಣ್ಣನ್ನು ಕುಕ್ಕಿಬಿಡುತ್ತದೆ.

ಯಾವ ದಲಿತರನ್ನು, ಶೂದ್ರರನ್ನು ಅಪಮಾನಿಸಿದನೋ, ತಪಸ್ಸಿನ ಹಕ್ಕಿನಿಂದ ವಂಚಿತರನ್ನಾಗಿಸಿದನೋ ಅದೇ ರಾಮನಿಗೆ ಮಂದಿರ ಕಟ್ಟಲು ಬಾಬ್ರಿ ಮಸೀದಿಯ ಧ್ವಂಸದ ಪ್ರಕರಣದಲ್ಲಿ ದಲಿತರು ಮತ್ತು ಶೂದ್ರರೇ ಕರಸೇವಕರಾಗಿ ಬಳಕೆಯಾಗಿದ್ದು ಎಂದು ಗಮನಿಸಬೇಕು.

ಮಂಡಲ್ ವರದಿ ಜಾರಿಗೆ ಬರಕೂಡದು ಎಂದು ಚಳವಳಿ ಮಾಡುತ್ತಾ ಮೈಗೆ ಬೆಂಕಿ ಹಚ್ಚಿಕೊಂಡವರಾದರೂ ಶೂದ್ರರೇ, ಬ್ರಾಹ್ಮಣರಲ್ಲ. ಮನುವಾದಿಗಳ ಸಂಘಟನೆಗೆ ಕಂದವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವಂತಹ ಚಾತುರ್ಯವಿದೆ.



ಮಡೆಸ್ನಾನ-ಬೌದ್ಧಿಕ ಗುಲಾಮಿತನದ ಸಂಕೇತ

ಕೆಲ ತಿಂಗಳುಗಳ ಹಿಂದೆ ಗೌರಿ ಲಂಕೇಶ್ ಪತ್ರಿಕೆಯ ಲ್ಲಿನ ತಮ್ಮ 'ಅಂಚೆನಿಂದ' ಅಂಕಣದಲ್ಲಿ ಡಾ. ವಾಸುರವರು ನ್ಯಾಯಾಲಯದ ತೀರ್ಪು ಅಥವಾ ತೀರ್ಮಾನಗಳು ಯಾವತ್ತಿಗೂ ನ್ಯಾಯದ ಪರವೇ ಇರುತ್ತದೆಂದು ನಿರೀಕ್ಷಿಸಲಾಗ ದೆಂದು ಕೆಲ ಉದಾಹರಣೆಗಳ ಸಮೇತ ಬರೆದಿದ್ದರು. ಕೆಲ ಲಾಬಿ ಅಥವಾ ಇನ್ನಾವುದೋ ಪ್ರಭಾವಕ್ಕೊಳಗಾದ ತೀರ್ಪಿನ ಉದಾಹರಣೆಗಳು ನಮ್ಮ ಕಣ್ಣ ಮುಂದೆಯೇ ಸಾಕಷ್ಟಿವೆ. ಅದು ಕಂಬಾಲಪಲ್ಲಿ ಪ್ರಕರಣದ ವಿಚಾರದಲ್ಲಾಗಿ ರಬಹುದು, ಶಿಕ್ಷಣದ ಖಾಸಗೀಕರಣದ ವಿಚಾರದಲ್ಲೂ ಇದ್ದಿರಬಹುದು. ಇಂಥದೇ ತೀರ್ಮಾನ ಇದೀಗ ಮಡೆಸ್ನಾನದ ವಿಚಾರದಲ್ಲೂ ನ್ಯಾಯಾಲಯ ಕೈಗೊಂಡು ಹಲವರನ್ನು ಹುಬ್ಬೇರಿಸುವಂತೆ ಮಾಡಿದೆ. ನ್ಯಾಯಾಲಯದ ಪ್ರಕಾರ ಇದು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದಲ್ಲವಂತೆ, ಅದು ಕೇವಲ ಪಬ್ಲಿಸಿಟಿಗೋಸ್ಕರವಂತೆ. ಬಹುಶಃ ಮಹಾದೇವಿಯಕ್ಕ ಹೇಳಿದ್ದಿರಬಹುದು 'ಧರೆ ಹೊತ್ತಿ ಉರಿಯುತಿರೆ ನಿಲಲಾಗದಯ್ಯ? ಎಂದು. ಸ್ವಸ್ಥ ಸಮಾಜದ ರಕ್ಷಣೆಗೆಂದೇ ಇರುವ ನ್ಯಾಯಾಲಯವೇ ಇಂತಹ ತೀರ್ಮಾನವನ್ನು ತಳೆದರೆ ಇನ್ನು ಯಾರ ಮೇಲೆ ಭರವಸೆಯನ್ನಿಡುವುದು? ನಿಂತ ನೆಲವೇ ಹೊತ್ತಿ ಉರಿಯುವಾಗ ಹೋಗುವುದಾದರೂ ಎಲ್ಲಿಗೆ?

ಕುಕ್ಕೆ ಸುಬ್ರಹ್ಮಣ್ಯದಲ್ಲಿರುವ ಮಡೆಸ್ನಾನವು ಭಕ್ತರು ದೇವರ ಪ್ರಸಾದದ ಮೇಲೆ ಸೇವೆ ಹೆಸರಿನಲ್ಲಿ ನಡೆಸುವ ಹೊರಳಾಡುವಿಕೆ ಅಷ್ಟೆ ಎಂದು ಅದರ ತೀವ್ರತೆಯನ್ನು ಕುಗ್ಗಿಸಿ ಕೆಲವರು ಹೇಳುವುದುಂಟು. ಮಡೆ ಎಂದರೆ ತುಳುವಿನಲ್ಲಿ ಎಂಜಲು ಎಂದರ್ಥ. ಅದು ಭಕ್ತಿಯೇ ಇರಲಿ ಸಂಪ್ರದಾಯವೇ ಇದ್ದಿರಲಿ ಅಲ್ಲಿ ಬಳಸಲ್ಪಡುವುದು ವ್ಯಕ್ತಿಯೊಬ್ಬನ ಎಂಜಲು ಎನ್ನುವ ತ್ಯಾಜ್ಯ ಎನ್ನುವುದನ್ನು ಮರೆಯಬಾರದು. ಭಕ್ತ ಅಥವಾ ಹರಕೆ ಹೊತ್ತ ಸಂತ್ರಸ್ತ (ಗುಣವಾಗದ ಕಾಯಿಲೆಯಿಂದ ಬಳಲುತ್ತಿರುವ ರೋಗಿ, ತನ್ನ ಮಗಳಿಗೆ ಮದುವೆಯಾಗದಿರುವುದಕ್ಕೆ ಕೊರಗುತ್ತಿರುವವನು/ಳು ಇತ್ಯಾದಿ) ತನ್ನ ಕಾರ್ಯಸಿದ್ಧಿಗಾಗಿ ದೇವರಲ್ಲಿ ತನ್ನ ನಿಷ್ಠೆ ಅಥವಾ ಭಕ್ತಿಯ ಪರಾಕಾಷ್ಠೆಯಲ್ಲಿ ತೋರಿ ಸಂಪ್ರೀತಗೊಳಿಸಲು ನೋಡುವ ಹರಕೆಗಳು ಸಾರ್ವಕಾಲಿಕ ಹಾಗು ಸಾರ್ವತ್ರಿಕವಾದದ್ದು. ದೇಶ ಧರ್ಮಗಳ ಎಲ್ಲೆ ಮೀರಿ ಇದು ವ್ಯಾಪಿಸಲ್ಪಟ್ಟಿದೆ. ಬೆನ್ನುಹುರಿಗೆ ಕೊಕ್ಕೆ ಸಿಕ್ಕಿಸಿಕೊಂಡು ಸಿಡಿಯೇರುವುದು, ಮೊಣಕಾಲಲ್ಲಿ ಬೆಟ್ಟ ಏರುವುದು ಇನ್ನೂ ಎಂತೆಂತದ್ದೋ ಹರಕೆಗಳಿವೆ. ಯಾರೋ ಅದರಲ್ಲೂ ಭೂಸುರರೆಂಬ ಪವಿತ್ರಾತ್ಮರು ಉಂಡ ಕೊಳಕು ತ್ಯಾಜ್ಯದ ಮೇಲೆ ಉರುಳುವುದೂ ಕೂಡ ಇಂತಹ ಹರಕೆಗಳಲ್ಲೊಂದು. ಮನೆಯಲ್ಲಿ ತನ್ನದೇ ಮಗುವಿನ ಮೂಗಲ್ಲಿ ಸುರಿಯುತ್ತಿದ್ದ ಸಿಂಬಳ ತೆಗೆಯಲು ಹೇಸುವ ವ್ಯಕ್ತಿ ಇಲ್ಲಿ ಎಂಜಲಮೇಲೆ ಹೊರಳಲು ಹೇಸಲಾರ. ಯಾಕೆಂದರೆ ಇದು ಹರಕೆ.

ಇದೊಂದು ಮಾಮೂಲಿ ಹರಕೆ ಅಥವಾ ಬಹಳ ಸಮಯದಿಂದ ನಡೆದುಬಂದಿರುವ ಸಂಪ್ರದಾಯವೇ ಇದ್ದಿರಬಹುದು ಆದರೆ ಇಲ್ಲಿ ಎಲ್ಲರೂ (ಬೆಂಬಲಿಸುವವರು ಹಾಗು ಹರಕೆದಾರರು) ಒಂದು ಅಮಾನವೀಯ ಸಿದ್ಧಾಂತವನ್ನು ಜೀವಂತವಾಗಿರಿಸುವಲ್ಲಿ ಪ್ರತ್ಯಕ್ಷ ಯಾ ಪರೋಕ್ಷವಾಗಿ ಸಹಕರಿಸುತ್ತಿದ್ದಾರೆಂಬುದಂತೂ ಸತ್ಯ. ಕಾಯಿಲೆ ನೋವು ಕಷ್ಟಕಾರ್ಪಣ್ಯ ಎಲ್ಲರಿಗೂ ಬರುತ್ತದೆ. ಅದು ಶೂದ್ರ ಇದ್ದಿರಬಹುದು ಬ್ರಾಹ್ಮಣ ಮುಸಲ್ಮಾನನೇ ಇದ್ದಿರಬಹುದು. ಎಲ್ಲೂ ದಿಕ್ಕು ತೋಚದಾದಾಗ ಈ ನಂಬಿಕೆಯ ಪ್ರಯತ್ನಕ್ಕಿಳಿಯಲು ಮುಂದಾಗುವವರಿಗೆ ಇದ್ಯಾವುದೂ ಅಡ್ಡಗೋಡೆಗಳಲ್ಲ, ಇಲ್ಲಿ ಬ್ರಾಹ್ಮಣ ಮುಸಲ್ಮಾನರೂ ಕಾಣಿಸಿಕೊಂಡ ಮಾತ್ರಕ್ಕೆ ಇದು ಸರ್ವಮಾನ್ಯ ಎಂದೆನಿಸದು. ಮುಖ್ಯವಾಗಿ ಗಮನಿಸಬೇಕಾದುದು ಇದೊಂದು ಸಮಾಜದಲ್ಲಿ ಮೇಲುಕೀಳನ್ನು ಪರೋಕ್ಷವಾಗಿ ಸಾಧಿಸುವ ಸಮಾಜ ಮುಖಿಯಲ್ಲದ ಸಂಪ್ರದಾಯವೆಂದು. ಈ ಮೇಲುಕೀಳಿನ ನೋವಿನ ಅರಿವಿಲ್ಲದವರಿಗೆ ಇವ್ಯಾವುದೂ ಅರ್ಥವಾಗದು. ಅದೇ ರೀತಿ ಒಂದು ವರ್ಗದ ಅಡಿಯಾಳಿನಂತೆ ಬೌದ್ಧಿಕ ಜೀತವನ್ನು ಅನುಭವಿಸುವವರಿಗೂ ಸಹ. ಅದೇರೀತಿ ಕೆಲವರ್ಗಕ್ಕೆ ಕುಸಿಯುತ್ತಿರುವ ತಮ್ಮ ಶ್ರೇಷ್ಠತೆಯನ್ನು ಸಾಧಿಸಿತೋರಲು ಇಂತಹ ಆಚರಣೆಗಳು ಬೇಕು. ನಿಮಗೆ ಗೊತ್ತಿರಬಹುದು ಕರ್ನಾಟಕದ ಅನೇಕ ಸ್ವಾಮೀಜಿಗಳು ಸರಕಾರದ ವಿರುದ್ಧ ಮೌಢ್ಯವಿರೋಧಿ ಕಾಯಿದೆ ಜಾರಿಗಾಗಿ ಮೊನ್ನೆ ಕೆಲ ದಿನಗಳ ಕಾಲ ಚಳವಳಿಯನ್ನು ನಡೆಸಿದರೆ ಮಡೆಸ್ನಾನ ಪಂಕ್ತಿಭೇದದ ಫಲಾನುಭವಿಗಳೆನಿಸಿದ ಎಲ್ಲ ವಿಚಾರಕ್ಕೂ ಮೂಗು ತೂರಿಸುವ ಚಾಳಿಯ ಕರಾವಳಿ ಕರ್ನಾಟಕದ ಯಾವ ಸ್ವಾಮಿಯೂ ಆ ಕಡೆ ತಲೆಯನ್ನೇ ಹಾಕಿರಲಿಲ್ಲ. ಕೊಳಕು ಎಂಜಲ ಮೇಲೆ ಹೊರಳಾಡುವ ಮಡೆಸ್ನಾನ ಅಮಾನವೀಯ ಅಲ್ಲವಾದರೆ ಬೆತ್ತಲೆ ಸೇವೆ, ಸತಿ ಪದ್ಧತಿ ದೇವದಾಸಿ ಪದ್ಧತಿಯೂ ಅಮಾನವೀಯವಲ್ಲ. ಅವುಗಳಿಗೂ ಮಡೆಸ್ನಾನಕ್ಕೂ ಗಟ್ಟಿಯಾದ ಆದರದ್ದೇ ಆದ ತರ್ಕ ಸಿದ್ಧಾಂತಗಳಿವೆ. ಅವುಗಳಿಗೂ ಮರುಜೀವ ಕೊಡೋಣ.

-ಶಶಿ ಪುತ್ತೂರು, ದಕ



ಮಡೆ ಸ್ನಾನವಲ್ಲ, ವಿಪ್ರ ಉಚ್ಚಿಷ್ಟ ಸ್ನಾನಂ!

ಎಲ್ಲಾ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ಮಡೆಸ್ನಾನ ಮುಂದುವರಿಸಲು ಹೈಕೋರ್ಟ್ ಅನುಮತಿ ಕೊಟ್ಟ ಮೇಲೆ ಈ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದ್ದು ಈ ಮಡೆಸ್ನಾನ ಎಂಬ ಶಬ್ದ ರಾಷ್ಟ್ರಮಟ್ಟದಲ್ಲಿ ಪ್ರಚಾರ ಪಡೆಯಿತು. ಈ ಅನಿಷ್ಟ ಶಬ್ದದ ಮೊದಲ ಭಾಗ ಅಚ್ಚ ತುಳು ಶಬ್ದ ಎಂದು ನಾವು ತುಳುವರು ಹೆಮ್ಮೆ ಪಡಬಹುದೇನೋ! ತುಳುವಿನಲ್ಲಿ ಮಡೆ ಎಂದರೆ ಎಂಜಲು. ಮಡೆಸ್ನಾನ ಎಂದರೆ ಎಂಜಲು-ಉರುಳು ಸೇವೆ. ವಿಚಿತ್ರವೆಂದರೆ ತುಮಕೂರು ಹಾಗೂ ರಾಮನಗರ ಜಿಲ್ಲೆಗಳಲ್ಲಿ ಇರುವ ಸುಬ್ರಹ್ಮಣ್ಯ ದೇವಳಗಳಲ್ಲೂ ಹೀಗೆಯೇ ಪುರೋಹಿತರ ಎಂಜಲ ಮೇಲೆ ಹರಕೆ ಹೊತ್ತವರು ಉರುಳುತ್ತಾರೆ. ಆದರೆ ಹಳೆ ಮೈಸೂರಿನ ಈ ಅಚ್ಚ ಕನ್ನಡ ಪ್ರದೇಶಗಳಲ್ಲೂ ಎಂಜಲು-ಉರುಳುಸೇವೆ ಎಂಬ ಕನ್ನಡ ಹೆಸರು ಪ್ರಚಲಿತವಾಗದೇ ಮಡೆಸ್ನಾನ ಎಂಬ ತುಳು ಹೆಸರೇ ಪ್ರಚಲಿತಗೊಂಡಿರುವುದು ಕೌತುಕಪೂರ್ಣ.

ಇದಕ್ಕಿಂತ ಆಶ್ಚರ್ಯದ ವಿಷಯವೆಂದರೆ ತುಳುನಾಡಿನ ಪುರೋಹಿತರು, ಧಾರ್ಮಿಕ ನೇತಾರರು ಮತ್ತು ವೈದಿಕ ಮನಸ್ಥಿತಿಯ ಶೂದ್ರ ಸಾಹಿತಿಗಳು ಈ ತುಳು ಶಬ್ಧವನ್ನು ಮುಂದುವರಿಸಿರುವುದು! ಯಾಕೆಂದರೆ ಹಿಂದೂ ದೇವರ ಯಾವುದೇ ವಿಷಯ ಬಂದರೂ ಮೂಲ ತುಳು ಶಬ್ದವನ್ನು ಬದಿಗೊತ್ತಿ ಅದರ ಜಾಗದಲ್ಲಿ ಸಂಸ್ಕೃತ ಶಬ್ದಗಳನ್ನು ಹೇರುವುದು ತುಳುನಾಡಿನ ವೈದಿಕರು ಶತಮಾನಗಳಿಂದ ಮಾಡುತ್ತಿರುವ ತುಳುದ್ರೋಹದ ಘನ ಕೆಲಸ. ಯಾವುದೇ ಸಣ್ಣ ಹಳ್ಳಿಯ ದೇವಸ್ಥಾನ ಪ್ರಸಿದ್ಧಿ ಪಡೆಯಲಿ, ಆಗ ತಕ್ಷಣ ಒಂದು ಕಾಲ್ಪನಿಕ ಕ್ಷೇತ್ರ ಪುರಾಣ ಹೊಸೆದು ಆ ಕುಗ್ರಾಮದ ತುಳು ಹೆಸರಿಗೆ 'ಪುರ' ಎಂಬ ಸಂಸ್ಕೃತ ಶಬ್ದ ಜೋಡಿಸಿ ಯಾವುದಾದರೂ ಕಾಲ್ಪನಿಕ ಋಷಿಯ ತಪಸ್ಸಿಗೆ ದೇವರು ಮೆಚ್ಚಿದ್ದು ಅಥವಾ ಯಾವುದಾದರೂ ಕಾಲ್ಪನಿಕ ರಾಕ್ಷಸನನ್ನು ಕೊಲ್ಲಲು ದೇವರು ಆ ಸ್ಥಳದಲ್ಲಿ ಅವತರಿಸಿದ್ದು ಎಂದು ಪ್ರಚಾರ ಮಾಡಿ ಕೃತಾರ್ಥರಾಗುವುದು ಇಲ್ಲಿಯ ವೈದಿಕರ ಅತಿ ಹಳೆಯ ತಂತ್ರ. ಹಾಗಿರುವಾಗ ಇವರು ಮಡೆಸ್ನಾನ ಎಂಬ ತುಳು ಶಬ್ದವನ್ನು ಯಾಕೆ ಸಂಸ್ಕೃತಕರಣಗೊಳಿಸಲಿಲ್ಲ ಎಂಬುದೇ ನನ್ನಂತಹ ಪಾಮರರಿಗೆ ಸೋಜಿಗದ ಸಂಗತಿ. ಮಡೆಸ್ನಾನ ಎಂದು ಒಂದು ಸಾರಿ ಹೇಳದೇ ಮಡೆ-ಮಡೆ ಸ್ನಾನ ಎಂದು ಎರಡು ಸಾರಿ ಹೇಳುವುದರ ಔಚಿತ್ಯವೇನು ಎಂಬುದು ಸಹ ವ್ಯಾಕರಣ ಪ್ರಿಯರಿಗೆ ಅರ್ಥವಾಗುತ್ತಿಲ್ಲ.

"ವಿಪ್ರ ಉಚ್ಚಿಷ್ಟ ಸ್ನಾನಂ" ಎಂಬ ಸಂಸ್ಕೃತ ಹೆಸರೇ ಮಡೆಸ್ನಾನಕ್ಕೆ ಸರಿ ಹೊಂದುತ್ತದೆ. ಕೆಲವು ದೇವಸ್ಥಾನಗಳಲ್ಲಿ ಅಪ್ಪ ಎಂಬ ಅಕ್ಕಿಯ ಸಿಹಿ ಖಾದ್ಯ ದೇವರಿಗೆ ಅರ್ಪಿಸುವುದಕ್ಕೆ ತುಳುವಿನಲ್ಲಿ ಇರುವ "ಅಪ್ಪದ ಸೇವೆ" ಎಂಬ ಸರಳ ಹೆಸರಿನ ಬದಲಿಗೆ ಪುರೋಹಿತರು "ಅಪಹಾಪೂಪಹ ಸೇವೆ" ಎಂಬ ವಿಚಿತ್ರವಾದ ಸಂಸ್ಕೃತ ಶಬ್ದ ಉಪಯೋಗಿಸಿ ತುಳುವನ್ನು ಕಡೆಗಣಿಸುತ್ತಾರೆ. ಹಾಗಿರುವಾಗ ಈ ಮಡೆಸ್ನಾನಕ್ಕೆ ಉಚ್ಚಿಷ್ಟ ಸ್ನಾನಂ ಎಂಬ ಶಬ್ದವನ್ನು ವೈದಿಕರು ಯಾಕೆ ಬಳಕೆಗೆ ತಂದಿಲ್ಲ ಎಂಬುದೇ ತುಳುವರನ್ನು ಕಾಡುತ್ತಿರುವ ದೊಡ್ಡ ಪ್ರಶ್ನೆ! ಇನ್ನು ಮಡೆಸ್ನಾನಕ್ಕೆ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ ಇದೆ ಎಂದು ಸಮರ್ಥಿಸಲು ಕಥೆಗಳು ಯಾಕಿಲ್ಲ, ಎಂಬುದು ಇನ್ನೊಂದು ತಾರ್ಕಿಕ ಪ್ರಶ್ನೆ. ಕ್ಷೇತ್ರ ಪುರಾಣ ಹೊಸೆಯುವುದರಲ್ಲಿ ಪಿಎಚ್‌ಡಿ ಮಾಡಿರುವ ನನ್ನ ಮಿತ್ರನೊಬ್ಬ ಮಡೆಸ್ನಾನದ ಹಿನ್ನೆಲೆಗಾಗಿ ಎರಡು ಹೊಸ ಕಥೆ ಹೆಣೆದು ಕೊಟ್ಟಿದ್ದನ್ನು ಇಲ್ಲಿ ಬರೆದಿದ್ದೇನೆ - ಇಂದ್ರನು ಅಹಲ್ಯೆಯನ್ನು ಮೋಸದಿಂದ ಭೋಗಿಸಿ ನಂತರ ಅವಳ ಗಂಡನಾದ ಗೌತಮ ಋಷಿಯಿಂದ ಇಂದ್ರನು ಮೈಯೆಲ್ಲಾ ಹುಣ್ಣಿನ (?) ರೋಗದಿಂದ ಪೀಡಿತನಾಗುವಂತೆ ಶಾಪಗ್ರಸ್ತನಾಗುತ್ತಾನೆ. ಅದರ ಪರಿಹಾರಕ್ಕಾಗಿ ಅವನು ಕುಮಾರಸ್ವಾಮಿಯನ್ನು ಪೂಜಿಸುತ್ತಾನೆ. ಇಂದ್ರನ ಪೂಜೆಗೆ ದೇವರು ಮೆಚ್ಚಿ ಅವನ ಮೈಯಲ್ಲೆಲ್ಲಾ ಆಗಿರುವ ಹುಣ್ಣಿಗೆ ದಿವ್ಯ ಔಷಧವೆಂದರೆ ತುಳುನಾಡಿನಲ್ಲಿರುವ ತನ್ನ ಯಾವುದೇ ದೇವಸ್ಥಾನದ ಆವರಣದ ಒಳಗೆಯೇ ಬ್ರಾಹ್ಮಣರ ಉಚ್ಚಿಷ್ಟದ ಮೇಲೆ ಹೊರಳುವುದು ಎಂದು ಇಂದ್ರನಿಗೆ ಪರಿಹಾರ ಹೇಳಿ ದೇವರು ಮಾಯವಾಗುತ್ತಾನೆ. ಎರಡನೆಯ ಕಥೆಯೆಂದರೆ ಒಮ್ಮೆ ಅರ್ಜುನನು ಉಲೂಪಿ ಚಿತ್ರಾಂಗದೆ ಪ್ರಮೀಳಾ ಜತೆ ವಿಹಾರಕ್ಕೆ ಹೋಗುತ್ತಿದ್ದಾಗ ಅವರಿಗೆ ಗೊತ್ತಿಲ್ಲದೇ ಒಂದು ನಾಗರಹಾವಿನ ಮೇಲೆ ರಥದ ಚಕ್ರ ಹರಿದು ನಾಗಹತ್ಯಾ ದೋಷದಿಂದ ಅವರಿಗೆಲ್ಲಾ ಚರ್ಮರೋಗ ತಗಲುತ್ತದೆ. ಈ ದೋಷದ ಪರಿಹಾರಕ್ಕೆ ದೂರದ ನಾಗರಖಂಡ ಅರ್ಥಾತ್ ತುಳುನಾಡಿಗೆ ಹೋಗಿ ಸುಬ್ರಹ್ಮಣ್ಯ ದೇವರ ಸಮಕ್ಷಮದಲ್ಲಿ ತುಳುವ ವಿಪ್ರೋತ್ತಮರ ಎಂಜಲ ಮೇಲೆ ಹೊರಳಾಡಿದರೆ ನಾಗಹತ್ಯಾ ದೋಷ ಮತ್ತು ಚರ್ಮರೋಗ ಪರಿಹಾರವಾಗುತ್ತದೆ ಎಂದು ಶ್ರೀ ಕೃಷ್ಣನು ಹೇಳುತ್ತಾನೆ. ಹೀಗೆ ಆರ್ಯ ದೇಶದ ಲಂಪಟ



ಇಂದ್ರ ಹಾಗೂ ಅವನ ಮಗ ಬಹುಪತ್ನಿವಲ್ಲಭ ಅರ್ಜುನ ಮಡೆಸ್ನಾನದ ಮೂಲ ಪುರುಷರು!

-ವೀರಪ್ಪ ದಿ ನಾಯ್ಕ್, ಮಂಗಳೂರು

ಕಂಬಾಲಪಲ್ಲಿ ಮತ್ತು ಮಡೆಸ್ನಾನದ ಬಗ್ಗೆ ನ್ಯಾಯಾಂಗದ ತೀರ್ಪುಗಳನ್ನು ನೋಡಿದರೆ ಕಾನೂನಿನ ಮೇಲಿನ ಗೌರವ ಕಡಿಮೆ ಆಗುತ್ತದೆ. ಒಂದು ಕಡೆ ಆಳುವ ಸರ್ಕಾರಗಳು ಜನರನ್ನು ಶೋಷಣೆ ಮಾಡುತ್ತಿದ್ದರೆ ಇನ್ನೊಂದು ಕಡೆ ಬಡವರ ಪರವಾದ ನ್ಯಾಯವನ್ನು ಕೊಡಬೇಕಾದಂತಹ ನ್ಯಾಯಾಂಗ ವ್ಯವಸ್ಥೆ ಸಾಕ್ಷಿಗಳಿಗಾಗಿ ಕಾಯುತ್ತಿವೆ. ಇದು ಬದಲಾಗಬೇಕು.

-ಸತೀಶ್ ನಾಯ್ಕ, ದಾವಣಗೆರೆ

ಪತ್ರಿಕೆ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಆದರೆ ಇತ್ತೀಚೆಗೆ ಯಾಕೋ ಸಿನಿಮಾ ವೀಕ್ಲಿ ತರಹ ಕಾಣಿಸುತ್ತಿದೆಯಲ್ಲ?

-ಮಲ್ಲಿ, ಗದಗ

ಸೂಪರ್‌ಮ್ಯಾನ್ ಮೋದಿಗೆ ಡಾನ್ ದಾವೂದನೇ ಹೆದರಿದನಂತೆ

ಪ್ರವಾಹ ಇನ್ನಿತರ ಸಮಸ್ಯೆಗಳು ಬಂದಾಗ ನಮ್ಮ ಸೂಪರ್ ಮ್ಯಾನ್ ಮೋದಿ ಸಾವಿರಾರು ಜನರನ್ನು ಕೃಷ್ಣ ಕಿರುಬೆರಳಿನಲ್ಲಿ ಗೋವರ್ಧನಬೆಟ್ಟ ಎತ್ತಿ ರಕ್ಷಿಸಿದಂತೆ ಸಲೀಸಾಗಿ ರಕ್ಷಿಸಿರುವ ಕಥೆ ಕೇಳಿರುವವರಿಗೆ ಮೊನ್ನೆ ಮೊನ್ನೆ ಟಿವಿಗಳಲ್ಲಿ ಇಂತಹದ್ದೇ ಮತ್ತೊಂದು ಮಹಾನ್ ಸುದ್ದಿ ಕೇಳಲು ಕಾದಿತ್ತು. ಅದೇ ಮೋಸ್ಟ್ ವಾಂಟೆಡ್ ಕ್ರಿಮಿನಲ್ ದಾವೂದ್ ಇಬ್ರಾಹಿಮನನ್ನು ನಮ್ಮ ಸೂಪರ್ ಮೋದಿ ಹೆದರಿಸಿ ಓಡಿಸಿದ ಕಥೆ.

ಅಮೆರಿಕಾದ ಪ್ರತಿಷ್ಠೆಯನ್ನು ನುಚ್ಚುನೂರು ಮಾಡಿದ್ದ ಬಿನ್ ಲಾಡೆನ್‌ನನ್ನು ಪಾಕ್‌ನ ಅಬೊಟಾಬಾದ್‌ನಲ್ಲಿರುವ ಆತನ ಮನೆಗೇ ಹೊಕ್ಕು ಕೊಂದ ಅಮೆರಿಕನ್ನರ ಶೌರ್ಯಕ್ಕೆ ಹೋಲಿಸಿಕೊಂಡು ಈ ದಾವೂದನನ್ನು ಹೆದರಿಸಿದ ಕಟ್ಟು ಕಥೆಯನ್ನು ಮೋದಿ ಭಕ್ತರು ಹರಿಬಿಟ್ಟಿದ್ದಾರೆ. ದಶಕಗಳಿಂದ ಭಾರತಕ್ಕೆ ತಲೆನೋವಾಗಿರುವ ಬಾಂಬೆ ಬ್ಲಾಸ್ಟ್‌ನ ಮಾಸ್ಟರ್ ಮೈಂಡ್ ದಾವೂದ್‌ನನ್ನು ಹಿಡಿಯದಿದ್ದರೂ ಪರವಾಗಿಲ್ಲ ಆತನನ್ನು ಹೆದರಿಸಿ ಓಡಿಸಿದ ಕೀರ್ತಿಯಾದರೂ ಮೋದಿಗೆ ಸಿಕ್ಕಲಿ ಎಂಬುದೇ ಈ ಕಥೆಯ ಹಿಂದಿರುವ ಒಳನೀತಿಯೇ ಹೊರತು ಬೇರೇನಲ್ಲ.

ಇಲ್ಲಿ ಗಮನಿಸಿ ಲಾಡೆನ್ ಅವಳಿ ಕಟ್ಟಡವನ್ನು ನಾಶಮಾಡುವಾಗಲಾಗಲೀ ಅಬೊಟಾಬಾದ್‌ನಲ್ಲಿ ಸೀಲ್ ಯೋಧರು ಲಾಡೆನ್ ಕೊಲ್ಲುವಾಗಲಾಗಲೀ ಈ ಎಲ್ಲವೂ ಅತ್ಯಂತ ಗೌಪ್ಯವಾಗೇ ನಡೆದಂತಹ ಕಾರ್ಯಾಚರಣೆಗಳು. ತಾಲಿಬಾನ್‌ನ ಆತ್ಮಾಹುತಿ ಪಡೆಯ ವಿಮಾನ ದಾಳಿಯ ಆದೇಶ ಅತ್ಯಂತ ಗೌಪ್ಯವಾಗೇ ನಡೆದರೆ ಅಮೆರಿಕಾದ ಲಾಡೆನ್‌ನನ್ನು ಕೊಲ್ಲುವ ಪ್ಲಾನ್ ಕೂಡ ಕೊನೆತನಕ ... ಯೋಧರಿಗೇ ಗೊತ್ತಿದ್ದಿರಲಿಲ್ಲ, ಮಾಹಿತಿ ... ಸೋರಿಕೆಯಾಗದಂತೆ ಈ ಗೌಪ್ಯತೆಯನ್ನು ಕೊನೆತನಕ ... ಕೊಳ್ಳಲಾಗಿತ್ತು, ಆದರೆ ಭಾರತದಲ್ಲಿ ಈ ಮೋದಿ ... ಹಾದಿಬೀದಿಯಲ್ಲಿ ಡಂಗುರ ಸಾರುತ್ತಾ ಡಾನ್ ದಾವೂ... ಬೇಟೆಗೆ ಹೊರಟಿದ್ದು ಮಕ್ಕಳ ಟಾಮ್ ಎಂಡ್ ... ಕಥೆಗಿಂತಲೂ ತಮಾಷೆಯಾಗಿದೆ.

ಮೋದಿ ಪ್ರಧಾನಿಯಾದರೆ ಪಾಕಿಸ್ತಾನ ನಡುಗುವ... ಬಲಾಢ್ಯ ಚೀನವೇ ಬಾಲಮುದುಡಿ ಕೂರುತ್ತೆ ... ಚುನಾವಣೆಯಲ್ಲಿ ಬಿಂಬಿಸಿಕೊಂಡು ಗೆದ್ದ ಮೋದಿ ... ಈ ಎರಡು ದೇಶಗಳನ್ನು ಎದುರಿಸಿದ್ದು ಅಷ್ಟರಲ್ಲೇ ... ಮೋದಿ ಗದ್ದುಗೆಗೇರಿ ತಿಂಗಳುಗಳ ಒಳಗೇ ಪಾ... ಗಡಿಯಲ್ಲಿ ತನ್ನ ಗುಂಡಿನ ದಾಳಿಯನ್ನು ಯಾ... ಭೀತಿಯಿಲ್ಲದೇ ಮತ್ತಷ್ಟು ಮುಂದುವರೆಸಿತ್ತಲ್ಲದೇ ಅ... ಅನೇಕಬಾರಿ ಯುದ್ಧ ವಿರಾಮ ಘೋಷಣೆಯನ್ನು ಉಲ್ಲ... ಅನೇಕ ಭಾರತೀಯ ಯೋಧರನ್ನು ಕೊಂದಿದೆ. ... ರೀತಿ ಚೀನಾವೂ ರಾಜಾರೋಷದಿಂದ ಗಡಿಯಸ್ವಾಕ್ರಮಿ... ಗಡಿ-ಅಣೆಕಟ್ಟೆಂದು ತನ್ನ ತಂಟೆಯನ್ನು ನಿರ್ಭಿಡೆಯಿಂ... ಮುಂದುವರೆಸುತ್ತಲೇ ಇದೆ. ಈ ಚೀನಾ-ಪಾಕಿಸ್ತಾನ... "ಬೊಗಳುವ ನಾಯಿ ಕಚ್ಚುವುದಿಲ್ಲ" ಎಂಬ ... ಚೆನ್ನಾಗಿಯೇ ಗೊತ್ತಿದೆಯೆಂದೇ ಇದರರ್ಥ.

ಛೋಟಾ ರಾಜನ್ ಮಲೇಷಿಯಾದಲ್ಲಿ ದಾಳಿಗೊ... ಗುವತನಕ ಆತನ ಹಳೆಯ ಫೋಟೋವೇ ... ರಾರಾಜಿಸುಲಿತ್ತು, ಅದೇ ರೀತಿ ಈಗ ಎಲ್ಲೆಡೆ ಚಾ... ಲ್ಲಿರುವ ದಾವೂದ್ ಇಬ್ರಾಹಿಂನ ಹಳೆಯ ಫೋಟೋ... ಈಗಾತ ಖಂಡಿತಾ ಇದ್ದಿರಲಾರ. ಆತನ ಇತ್ತೀ... ಫೋಟೊವನ್ನೇ ಕಂಡುಕೊಳ್ಳಲಾಗದವರು ಆತನ ... ಹೋಗಿ ಕುತ್ತಿಗೆ ಹಿಸುಕುತ್ತಾರೆಂದರೆ ಅದು ನಿಜಕ್ಕೂ ... ವೇ ಇರಬೇಕು. ಈ ಪವಾಡ ಸೂಪರ್ ಮ್ಯಾನ್ ... ಸಾಹೇಬರಿಗಲ್ಲದೇ ಇನ್ಯಾರಿಗೆ ತಾನೆ ಸಾಧ್ಯವಿದೆ ಹೆ...

-ಅವಿನಾಶ್ ಎಮ್.ಎಸ್, ನೆಲ್ಲಿ...

ಮಡೆಸ್ನಾನಕ್ಕೆ ವೈಜ್ಞಾನಿಕ ಹಾಗೂ ವೈದ್ಯಕೀಯ ... ಇದೆ ಎಂದು ಕೆಲವರು ಪೊಳ್ಳು ವಾದ ಮಾಡುತ್ತಿ... ಇದು ಸರಿಯಲ್ಲ. ಮನುಷ್ಯನ ಎಂಜಲು ... ಉರುಳುವುದಕ್ಕೆ ಯಾವುದೇ ವೈಜ್ಞಾನಿಕ ಕಾರಣಗ... ನಮ್ಮ ಪ್ರತಿಯೊಂದು ಕಂದಾಚಾರ ಹಾಗೂ ... ನಂಬಿಕೆಗಳಿಗೆ ವೈಜ್ಞಾನಿಕ ಅಥವಾ ವೈದ್ಯಕೀಯ ... ಇದೆ ಎಂದು ವಿತಂಡವಾದ ಮಾಡುವುದರ ಹಿಂದೆ ... ಕೇಸರಿ ಧಾರ್ಮಿಕ ಗುಂಪಿನ ವ್ಯವಸ್ಥಿತ ಸಂಚಿದೆ.

ಆದರೆ ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆ... ಕೆಲವೆಡೆ ಹಾವಿನ ಹುತ್ತದ ಮಣ್ಣನ್ನು ಮಕ್ಕಳ ... ಹಾಗೂ ಹಣೆಗೆ ತಿಕ್ಕುತ್ತಾರೆ. ಇದಕ್ಕೆ ವೈಜ್ಞಾನಿಕ ... ಇರಬಹುದು. ಕಾರಣ ಯಾವುದೇ ಹಾವು ... ಕಟ್ಟುವುದಿಲ್ಲ, ಅದು ಗೆದ್ದಲು ಅಥವಾ ಇರುವೆ ... ಹುತ್ತದಲ್ಲಿ ಅಥವಾ ಹೆಗ್ಗಣಗಳು ತೋಡಿದ ಬಿ... ವಾಸಿಸುತ್ತದೆ ಅಷ್ಟೇ. ಗೆದ್ದಲುಗಳು ಹುತ್ತ ಕಟ್ಟು... ತಮ್ಮ ಬಾಯಿಯಿಂದ ಹಾಗೂ ಮೈಯಿಂದ ... ರೀತಿಯ ರಾಸಾಯನಿಕ ಸ್ರವಿಸಿ ಮಣ್ಣನ್ನು ಅಂಟು ... ಮಾಡಿ ಹುತ್ತ ಏರಿಸುತ್ತಾ ಹೋಗುತ್ತವೆ.

ಇರುವೆಗಳ ಹುತ್ತದಲ್ಲಿ ಈ ರೀತಿ ಅಂಟು ... ಇರುವುದಿಲ್ಲ, ಹಾಗಾಗಿ ಗೆದ್ದಲು ಕಟ್ಟಿದ ಹುತ್ತ ಮಳೆ... ಎದುರಿಸಿ ನಿಂತರೆ ಇರುವೆ ಕಟ್ಟಿದ ಹುತ್ತಗಳು ಮಳೆ... ಕರಗಿ ಹೋಗುತ್ತವೆ. ಗೆದ್ದಲುಗಳು ಸ್ರವಿಸುವ ... ದ್ರವದಲ್ಲಿ ಔಷಧೀಯ ಗುಣಗಳಿರುತ್ತವೆ ... ಹೇಳಲಾಗುತ್ತದೆ. ನಂತರ ಆ ಹುತ್ತದಲ್ಲಿ ಹಾವು ಸೇ... ಹಾವಿನ ಮೈಯ ಬೆವರು ವಿಷ ಜೊಲ್ಲುಗಳೂ ... ಸೇರುತ್ತವೆ. ಹಾಗಾಗಿ ಹಾವಿನ ಹುತ್ತದ (ಗೆದ್ದಲು ಹು...) ಮಣ್ಣನ್ನು ಮಕ್ಕಳ ಮೈಗೆ ಪೂಸಿದರೆ ಚರ್ಮರೋ... ವಾಸಿಯಾಗುತ್ತವೆ ಎಂಬ ನಂಬಿಕೆ ಉ.ಕದ ಹ... ಇರುವುದು ನಿಜ. ಈ ನಂಬಿಕೆಯಲ್ಲಿ ಸ್ವಲ್ಪ ಹುರು...

ವೈದ್ಯಕೀಯ ಕ್ಷೇತ್ರದ ಆಸಕ್ತರು ಈ ಬಗ್ಗೆ ... ಸಂಶೋಧನೆ ಮಾಡಬಹುದು. ಸುಬ್ರಹ್ಮಣ್ಯ ದೇವಸ್ಥಾ... ಮನುಷ್ಯರ ಎಂಜಲಿನ ಮೇಲೆ ಉರುಳುವುದರ ಬ... ಹಾವಿನ ಎಂಜಲಿನ (ಗೆದ್ದಲು ಹುತ್ತದ) ಮಣ್ಣಿನ ... ಉರುಳುವ ಪದ್ಧತಿ ಜಾರಿಗೆ ತಂದರೆ ಉಪಯೋ... ಗಬಹುದೇನೋ!

-ಪ್ರವೀಣ್ ಎಸ್ ಶೆಟ್ಟಿ, ಮಂಗ...

ವಿ.ಸೂ : ನಿಮ್ಮ ಅನಿಸಿಕೆಗಳನ್ನು, lankesh70@rediffmail.com ... ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು... ಪ್ರತಿಕ್ರಿಯೆಗಳನ್ನು 9980331427 ನಂಬರ್... ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಿ...

ಅಪೋ ಕ್ಯಾಲಿಪ್ಟೋ ಕುರಿತು ಮೆಲ್ ಗಿಬ್ಸನ್ ಮಾತು

ಚಿತ್ರರಂಗದ ಇತಿಹಾಸದಲ್ಲಿಯೇ ಸದಾಕಾಲ ಕಾಡಬಲ್ಲಂತಹ ಅಪರೂಪದ ಗಳ ಪೈಕಿ ಒಂದಾದ 'ಅಪೋಕ್ಯಾಲಿಪ್ಟೋ' ಚಿತ್ರವು ಬಿಡುಗಡೆಯಾದ ರ್ಭದಲ್ಲಿ ಅದರ ನಿರ್ದೇಶಕ, ನಿರ್ಮಾಪಕ ಮೆಲ್ ಗಿಬ್ಸನ್ ಚಿತ್ರ ಕುರಿತಂತೆ ಕರ್ತರೊಂದಿಗೆ ಹಂಚಿಕೊಂಡಿದ್ದ ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಡಲಾಗಿದೆ...

ಪ್ರಶ್ನೆ: ನೀವು ಸ್ವತಃ ಓರ್ವ ಖ್ಯಾತ ನಟ. ಆದರೂ ಈ ಚಿತ್ರದಲ್ಲಿ ಮತು ಪರಿಚಯವಿಲ್ಲದ ನಟರನ್ನು ಹಾಕಿಕೊಂಡು ಮಾಯನ್ ಭಾಷೆಯಲ್ಲಿ ಡುವುದರ ಬಗ್ಗೆ ನಿಮಗೆ ಸಂದೇಹಗಳಿದ್ದವೇ?

ಗಿಬ್ಸನ್: ಹೌದು, ಆದರೂ ನಾನು ಹಾಗೆಯೇ ಕಥೆ ಹೇಳಬೇಕೆಂದು ರ್ಧರಿಸಿದ್ದೆ. ಅದು ಕಷ್ಟಕರ. ಆದರೂ ಅದನ್ನು ಹಾಗೆಯೇ ಮಾಡಬೇಕಿತ್ತು.

ಪ್ರಶ್ನೆ: 'ಹಾಸ್ಟೆಲ್' ತರಹದ ಸಿನಿಮಾಗಳನ್ನು ನೋಡಿರದ ಜನಕ್ಕೆ ಪೋಕ್ಯಾಲಿಪ್ಟೋ' ಭೀಕರ ಸಿನಿಮಾ ಅನ್ನಿಸದಿರದು ಅಲ್ಲವೇ?

ಗಿಬ್ಸನ್: ನಿಜ, ನನಗೂ ಹಾಗೇ ಅನ್ನಿಸುತ್ತದೆ. 'ಹಾಸ್ಟೆಲ್' ಒಂದು ಯಾನಕ ಚಿತ್ರ. ಆದರೆ ನನ್ನ 'ಅಪೋಕ್ಯಾಲಿಪ್ಟೋ' ಚಿತ್ರದಲ್ಲಿನ ಹಿಂಸೆ ವ್ ಹಾರ್ಟ್' ಚಿತ್ರಕ್ಕಿಂತ ಕಡಿಮೇನೆ. ಆದರೂ ನನ್ನ ಚಿತ್ರದಲ್ಲಿ ಹಿಂಸಾತ್ಮಕ ಷ್ಠಿ ಇದೆಯೆಂಬುದು ಸುಳ್ಳಲ್ಲ. ಪುಣ್ಯಕ್ಕೆ ನನ್ನ ಚಿತ್ರದಲ್ಲಿ ಯಾವುದೇ ಹದ ಎನಿಮಾಸ್ ಸಂಬಂಧಿ ಸಂಗತಿಗಳನ್ನು ತರಲಿಲ್ಲ.

ಪ್ರಶ್ನೆ: ಎನಿಮಾಸ್?

ಗಿಬ್ಸನ್: ಈ ಎನಿಮಾಸ್ (ಮಲ ಕಟ್ಟಿಕೊಂಡಾಗ ಮಲ ವಿಸರ್ಜನೆ ಡಲು ಅಥವಾ ಪರೀಕ್ಷೆಗಾಗಿ ಮಲದ್ವಾರದ ಮೂಲಕ ಕರುಳಿನೊಳಕ್ಕೆ ವನ್ನು ಬಿಡುವುದು) ಸಂಸ್ಕೃತಿ ಮಾಯಾ ಜನರಲ್ಲಿ ಇತ್ತು. ಆದರೆ ನನ್ನ ಮಾದಲ್ಲಿ ಅದನ್ನು ಅಳವಡಿಸಿಕೊಳ್ಳಲಿಲ್ಲ. ನನಗೆ ಗೊತ್ತಿರುವಂತೆ 'ಬ್ಲಡ್ ಶ್' ಎಂಬ ಚಿತ್ರದಲ್ಲಿ ಇದನ್ನು ಅಳವಡಿಸಿಕೊಂಡಿದ್ದಾರೆ ಅನ್ನಿಸುತ್ತದೆ.

ಪ್ರಶ್ನೆ: ನಿಮ್ಮ ಸಿನಿಮಾ ನೋಡುವ ಸಂದರ್ಭದಲ್ಲಿ ಹೆಂಗಸರು ಮತ್ತು ಕ್ಕಳು ಹೆದರಿ ಥಿಯೇಟರ್‌ನಿಂದ ಓಡಿಹೋಗುತ್ತಾರೆ ಎನ್ನುವಂತಹ ಒಂದು 'ಫಾಕ್ಸ್‌ನ್ಯೂಸ್'ನಲ್ಲಿ ಪ್ರಸಾರವಾಗಿತ್ತು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?


ಗಿಬ್ಸನ್: ಈ ಟೀಕೆಯನ್ನು ನಾನು ಸ್ವಾಗತಿಸುತ್ತೇನೆ. ಇನ್ನೊಂದು ಅಚ್ಚರಿಯ ತಿ ಎಂದರೆ ನನ್ನ ಚಿತ್ರ ಬಿಡುಗಡೆಯಾದ ಮೊದಲ ವಾರದ ಕೊನೆಕೊನೆಗೆ ತ್ತೈದು ವರ್ಷಕ್ಕೂ ಮೇಲ್ಪಟ್ಟ ಹೆಂಗಸರೇ ಹೆಚ್ಚಿನ ಸಂಖ್ಯೆಯಲ್ಲಿ ಮಂದಿರದಲ್ಲಿ ತುಂಬಿದ್ದರು. ಅವರೆಲ್ಲ ಚಿತ್ರದ ಹೀರೋಯಿನ್ ಪಾತ್ರದ ಕ್ಕೆ ಇಳಿದು ಆಲೋಚಿಸುತ್ತಿದ್ದರು. ಮಕ್ಕಳನ್ನುಳ್ಳ ಆಕೆ ಎದುರಿಸುವ ಸವಾಲುಗಳು, ಯ ಧೈರ್ಯ ಇತ್ಯಾದಿಗಳನ್ನು ಮೆಚ್ಚಿಕೊಂಡಿದ್ದರು. ನನಗೆ ಗೊತ್ತಿರುವಂತೆ ಮ ಚಿತ್ರದ ಬಗ್ಗೆ ಮಾಧ್ಯಮದ ಮಂದಿ ಹಬ್ಬಿಸುವ ಟೀಕೆಗಳನ್ನು ಪ್ರೇಕ್ಷಕರು ಭೀರವಾಗಿ ತೆಗೆದುಕೊಳ್ಳುವುದಿಲ್ಲ. ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಚಿತ್ರವಿಮರ್ಶೆ ಟಿದ ನಂತರವೂ ಜನ ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಖುದ್ದು ಸಿನಿಮಾ ಡಲು ಥಿಯೇಟರ್‌ಗಳಿಗೆ ಹೋಗಿದ್ದುಂಟು. ಈ ಸತ್ಯ ಅನೇಕ ಬಾರಿ ಬೀತಾಗಿದೆ.

ಪ್ರಶ್ನೆ: ಮಾಯನ್ ಸಂಸ್ಕೃತಿ ನೀವು 'ಅಪೋಕ್ಯಾಲಿಪ್ಟೋ' ಚಿತ್ರದಲ್ಲಿ ರಿಸಿರುವುದಕ್ಕಿಂತ ಇನ್ನೂ ಭೀಕರವಾಗಿ, ಹಿಂಸಾತ್ಮಕವಾಗಿದೆಯೇ?

ಗಿಬ್ಸನ್: ಖಂಡಿತವಾಗಿ. ಆ ಜನಾಂಗ ಮಾಡಿರುವಂತಹ ಕೆಲವೊಂದು ಸಾತ್ಮಕ ಕೃತ್ಯಗಳ ಬಗ್ಗೆ ಮಾತಾಡಲೂ ಧೈರ್ಯ ಸಾಲದು. ಅಂಥವನ್ನು ಮಾದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವೇ ಇಲ್ಲ. ಮೊದಮೊದಲಿಗೆ ಮಣಕಾರರು ಅಸ್ಟೆಕ್ ಮಹಾ ಸಂಸ್ಥಾನಕ್ಕೆ ಬಂದಾಗ ಅಲ್ಲಿ ಸುಮಾರು ತ್ತು ಸಾವಿರದಷ್ಟು ಜನ ತ್ಯಾಗಬಲಿದಾನಗಳಿಗೆ ಗುರಿಯಾಗುತ್ತಾರೆ. ಇದೊಂದು ಯ ಸಾವಿನ ಸಂಸ್ಕೃತಿ. ಅಸ್ಟೆಕ್ ಸಮುದಾಯದಲ್ಲಿದ್ದ ಮಾನವ ಬಲಿ ಪದ್ಧತಿ ಯನ್ ಸಂಸ್ಕೃತಿಯಲ್ಲಿ ಅಷ್ಟು ಹೆಚ್ಚಾಗಿ ಇರಲಿಲ್ಲ. ಆದರೆ ಮಾಯನ್ನರನ್ನು ಸ್ಟರು ಸೋಲಿಸಿದ ನಂತರ ಆ ಎರಡೂ ಸಮುದಾಯಗಳ ಸಂಸ್ಕೃತಿಗಳು ತು ಅದು ಹೆಚ್ಚಾಯಿತು.

ಪ್ರಶ್ನೆ: 'ಅಪೋಕ್ಯಾಲಿಪ್ಟೋ' ಸಿನಿಮಾದ ಅಂತಿಮ ದೃಶ್ಯದಲ್ಲಿ ಸ್ಪಾನಿಶ್ ಶೋಧಕರು ದೊಡ್ಡ ಶಿಲುಬೆಯ ಚಿಹ್ನೆಯನ್ನು ಪ್ರದರ್ಶಿಸುತ್ತಿರುವ ಹಡಗಿನ ಲೆ ಮಾಯನ್ ಸಾಮ್ರಾಜ್ಯಕ್ಕೆ ಆಗಮಿಸುವ ಚಿತ್ರಣವಿದೆ. ನೀವೊಬ್ಬ ಥೋಲಿಕ್ಕಾಗಿ ಇದರಿಂದ ಕ್ರೈಸ್ತಧರ್ಮದ ನಂಬಿಕೆಗಳ ಮೇಲೆ ಟಾಗಬಹುದಾದ ಪರಿಣಾಮಗಳೇನು?


ಗಿಬ್ಸನ್: ಪರಿಶೋಧಕರಾಗಿ ಬಂದವರು ನೂರರ ಸಂಖ್ಯೆಯಲ್ಲಿದ್ದರು ಮತ್ತು ರ ಅಸ್ತ್ರಗಳೂ ಅಷ್ಟು ಪ್ರಬಲವಾಗಿರಲಿಲ್ಲ. ಅವರ ಅಸ್ತ್ರಗಳಿಗೆ ಹೋಲಿಸಿದರೆ ಯನ್ನರ ಆಯುಧಗಳು ಭಯಾನಕವಾಗಿದ್ದವು. ಅವರ ಬಳಿ ಇದ್ದ ಸೀಳುಕತ್ತಿ ಯು ದನವನ್ನು ಪಕ್ಕದಿಂದ ಅರ್ಧ ಸೀಳುವಷ್ಟು ಗಟ್ಟಿಯಾಗಿತ್ತು. ಆದರೂ ರು ವಿಜಯಿಗಳಾಗಿದ್ದು ಹೇಗೆ? ನನ್ನ ಪ್ರಕಾರ ಬಹುಸಂಖ್ಯೆಯಲ್ಲಿ ಮಾಯನ್ ಗೆ ಹಿಂಸೆ ಸಾಕಾಗಿತ್ತು. ಒಂದೇ ಏಟಿಗೆ ಇಪ್ಪತ್ತು ಸಾವಿರ ಜನರನ್ನು



ಕೊಂದವರು ಮುಂದೆ ಯಾರನ್ನಾದರೂ ಕೊಲ್ಲಬಹುದಿತ್ತು. ಆಗ ಅವರೆಲ್ಲ ಪ್ರತಿಭಟಿಸಲಾರಂಭಿಸಿದರು. ಸ್ಪಾನಿಷ್ ಪರಿಶೋಧಕರು ಮಾಯನ್ ಜನರ ಕ್ರಾಂತಿಗೆ ನೆರವು ನೀಡಿದರು ಎನ್ನುವುದು ನನ್ನ ಅಭಿಪ್ರಾಯ.

ಪ್ರಶ್ನೆ: ನಿಮ್ಮ 'ಅಪೋಕ್ಯಾಲಿಪ್ಟೋ' ಚಿತ್ರದ ಮತ್ತೊಂದು ಅತ್ಯದ್ಭುತ ಸನ್ನಿವೇಶವೆಂದರೆ ಪಿರಮಿಡ್ ಮೇಲೆ ಸಂಭವಿಸುವ ತ್ಯಾಗ, ಬಲಿದಾನಕ್ಕೆ ಸಂಬಂಧಿಸಿದ್ದು. ಅಲ್ಲಿಯ ಪಾದ್ರಿಯ ಪಾತ್ರ ಗಮನ ಸೆಳೆಯುತ್ತದೆ. ಆ ಪಾತ್ರವನ್ನು ಅಷ್ಟು ಸಹಜವಾಗಿ ಪರದೆ ಮೇಲೆ ತರುವಲ್ಲಿ ನಿಮ್ಮ ಹೋಂವರ್ಕ್ ಹೇಗಿತ್ತು?

ಗಿಬ್ಸನ್: ನಾನು, ಆ ಪಾತ್ರವನ್ನು ನಿರ್ವಹಿಸಿದ ಫೆರ್ನಾಂಡೊ ಅವರಿಗೆ ಮುಸೋಲಿನಿ ಬಗ್ಗೆ ಹೇಳಿದೆ. ಮುಸೋಲಿನಿ ಕುರಿತ ಒಂದಿಷ್ಟು ಟೇಪ್‌ಗಳನ್ನೂ ಅವರಿಗೆ ತೋರಿಸಿದೆ. ಫೆರ್ನಾಂಡೊ ಕೂಡ ಕೆಲವೆಡೆ ಥೇಟು ಒಬ್ಬ ಡಿಕ್ಟೇಟರ್



ಥರಾನೇ ಕಾಣುತ್ತಿದ್ದರು. ಹಾಗೆಯೇ ಒಮ್ಮೊಮ್ಮೆ ಹಿಟ್ಲರ್ ಅಥವಾ ಸ್ಟಾಲಿನ್ ತರಹ ಕೂಡ. ಅದಕ್ಕೆ ಆ ಪಾತ್ರ ಅಷ್ಟು ಚೆನ್ನಾಗಿ ಮೂಡಿಬರಲು ಸಾಧ್ಯವಾಯಿತು.

ಪ್ರಶ್ನೆ: ಹಾಗೆಯೇ, ಆ ಪಿರಮಿಡ್ ಮೇಲೆ ಒಬ್ಬ ಮಾಯನ್ ರಾಜನೂ ಇರುತ್ತಾನೆ. ಅವರು ತನ್ನ ಮುಂದೆ ನಡೆಯುತ್ತಿರುವ ಹತ್ಯಾಕಾಂಡವನ್ನು ಆನಂದಿಸುತ್ತಿರುತ್ತಾನೆ. ಅವನು ಒಂದೇ ಒಂದು ಪದವನ್ನು ನುಡಿಯುವುದಿಲ್ಲ ಆದರೂ ಭಯಾನಕವಾಗಿ ಕಾಣಿಸುತ್ತಾನೆ...

ಗಿಬ್ಸನ್: ಈತ ಇನ್ನೊಂದು ಬಗೆಯ ವ್ಯಕ್ತಿ. ಆತನನ್ನು ಮೊದಲ ಸಲ ನನ್ನ ಬಳಿ ಕರೆ ತಂದಾಗ 'ಈತನನ್ನು ಎಲ್ಲಿಂದ ಕರೆತಂದಿರಿ?' ಅಂತ ಕೇಳಿದೆ. 'ಈತ ಒಂದು ಜಿಮ್ಮಿನಲ್ಲಿ ಸಿಕ್ಕ' ಅಂತ ಕರೆತಂದ ಹುಡುಗರು ಹೇಳಿದರು. ಅದಕ್ಕೆ ನಾನು 'ಹೌದು, ಈತ ಜಿಮ್ಮಿನಿಂದ ಬಂದ ವ್ಯಕ್ತಿಯಂತೆಯೇ ಕಾಣುತ್ತಿದ್ದಾನೆ' ಅಂದಿದ್ದೆ. ಈ ಪಾತ್ರ ಏನನ್ನೂ ಮಾತಾಡುವುದಿಲ್ಲ, ಆದರೂ ಈತ ರಾಜನಾಗಿರುತ್ತಾನೆ. ಅವನನ್ನು ನೋಡಿದರೆ ಸಾಕು, ಭಯ ಹುಟ್ಟುತ್ತದೆ. ಆತ ತನ್ನ ಸಹೋದರನನ್ನು ಕೊಂದಿರುವವನಂತೆ, ನಿಮ್ಮ ಹೆಂಡತಿಯನ್ನು ಅಪಹರಿಸಿರುವವನಂತೆ, ತನ್ನ ಎಲ್ಲ ಸಂಬಂಧಿಗಳನ್ನು ಕೊಚ್ಚಿಹಾಕಿರುವವನಂತೆ ನಿಮಗೆ ಭಾಸವಾಗುತ್ತದೆ. ವೆರಾ ಕ್ರೂಜ್ ಎಂಬ ನಗರದ ಧಕ್ಕೆ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದ ರಫೆಲ್ ವೆಲೆಜ್ ನಮಗೆ ಸಿಕ್ಕಿದ. ಆತ ನಿಜಕ್ಕೂ ಒಳ್ಳೆಯ ವ್ಯಕ್ತಿ ಆದರೆ ಆ ಪಾತ್ರಕ್ಕೆ ತಕ್ಕನಾಗಿದ್ದ. ಇಲ್ಲಿ ಇನ್ನೊಂದು ಮಾತು ಹೇಳಲು ಬಯಸುತ್ತೇನೆ... ನೀವು ಸಂಸ್ಕೃತಿಯ ಬಗ್ಗೆ ಚರ್ಚಿಸುವಾಗ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಒಬ್ಬ ಅನ್ಯಗ್ರಹದ ಜೀವಿಗೂ ನಮಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಹಾಗೆಯೇ ಒಂದು ಬುಡಕಟ್ಟು ಸಮುದಾಯದ ಬದುಕಿಗೂ ಮತ್ತು ನಾಗರಿಕ ಸಮಾಜದ ಬದುಕಿಗೂ ವ್ಯತ್ಯಾಸವಿರುತ್ತದೆ. ಅಲ್ಲಿಯ ಭಾಷೆ, ಸಂಸ್ಕೃತಿ, ಆಸಕ್ತಿಗಳು, ಯುಗದಿಂದ ಯುಗಕ್ಕೆ ಬದಲಾಗುವ ಮನುಷ್ಯನ ಮಿಡಿತಗಳು ಎಲ್ಲವೂ ಭಿನ್ನಭಿನ್ನವಾಗಿರುತ್ತವೆ. ಆದ್ದರಿಂದ ಈ ಚಿತ್ರದಲ್ಲಿ ಅನೇಕ ರೀತಿಯ ಪಾತ್ರಗಳು ನಿಮಗೆ ಸಿಗುತ್ತವೆ. ಆ ಪೈಕಿ ವಿಲ್ಲನ್‌ಗಳಿರಬಹುದು, ಮಾನಸಿಕ ಅಸ್ವಸ್ಥ ಪಾತ್ರಗಳಿರಬಹುದು, ತನ್ನನ್ನೇ ಬಲಿ ಕೊಡುವ ಗೆಳೆಯನೊಬ್ಬನ ಪಾತ್ರವಿರಬಹುದು- ಇವೆಲ್ಲ ಪಾತ್ರಗಳೂ ಕಥೆಯ ವೇಗಕ್ಕೆ, ಅದರ ಓಘಕ್ಕೆ ಪೂರಕವಾಗಿ ಮಿಳಿತಗೊಂಡಿವೆ. ಈ ಪಾತ್ರಗಳನ್ನು ನಿರ್ವಹಿಸಿದ ಅನೇಕರು ಅವರೆಗೆ ಯಾವತ್ತೂ ಕ್ಯಾಮೆರಾ ಮುಂದೆ ನಿಂತವರೇ ಅಲ್ಲ, ಅಭಿನಯದ ಬಗ್ಗೆ ಎಳ್ಳಷ್ಟೂ ಗೊತ್ತಿಲ್ಲದ ವ್ಯಕ್ತಿಗಳಾಗಿದ್ದರು. ಆದರೂ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಈ ಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ 'ಹೌದು, ಈ ಪಾತ್ರಕ್ಕೆ ಈ ವ್ಯಕ್ತಿಯೇ ಕರೆಕ್ಟ್, ಈತನೇ ಪರ್ಫೆಕ್ಟ್' ಅಂತ ನಿಮಗೇ ಅನ್ನಿಸುತ್ತದೆ.

ಪ್ರಶ್ನೆ: ನಿಮ್ಮ ಪ್ರಕಾರ ಒಟ್ಟಾರೆ ಚಿತ್ರದಲ್ಲಿ ಆಕ್ಷನ್‌ಗೆ ಸಂಬಂಧಿಸಿದಂತೆ ಪ್ರಮುಖ ಆಕರ್ಷಣೆ ಏನು?

ಗಿಬ್ಸನ್: ಚೇಸ್... ಅಟ್ಟಿಸಿಕೊಂಡು ಹೋಗುವುದಕ್ಕಿಂತ ಮಿಗಿಲಾದ ಥ್ರಿಲ್ ಇನ್ನೇನಿದೆ? ಒಂದೇ ಮಾತಿನಲ್ಲಿ ಹೇಳುವುದಾದರೆ 'ಅಪೋಕ್ಯಾಲಿಪ್ಟೋ'



ನಿಂತಿರುವುದೇ ಈ ಚೇಸಿಂಗ್ ಸೀನ್‌ಗಳಿಂದ.

ಪ್ರಶ್ನೆ: ಇಲ್ಲಿ 'ಮ್ಯಾಡ್ ಮ್ಯಾಕ್ಸ್' ಸಿನಿಮಾ ನೆನಪಾಗುತ್ತಿದೆ ನನಗೆ...

ಗಿಬ್ಸನ್: ಹೌದು, ಜಾರ್ಜ್ ಮಿಲ್ಲರ್ ನಿರ್ದೇಶನದ 'ಮ್ಯಾಡ್ ಮ್ಯಾಕ್ಸ್' ಕೂಡ ಅಂಥದೇ ಚೇಸಿಂಗ್ ಸೀನ್‌ಗಳಿರುವ ಅದ್ಭುತ ಸಿನಿಮಾ.


ಪ್ರಶ್ನೆ: ನೀವು ಆಕ್ಷನ್‌ಗೆ ಸಂಬಂಧಿಸಿದಂತೆ ಜಾರ್ಜ್ ಮಿಲ್ಲರ್ ಅವರಿಂದ ಸಾಕಷ್ಟು ಕಲಿತಿದ್ದೀರಾ ಅಂತಾಯ್ತು...

ಗಿಬ್ಸನ್: ಜಾರ್ಜ್ ಒಬ್ಬ ಜೀನಿಯಸ್. ಅವರೇ ಹೇಳುವಪ್ರಕಾರ ಸರಿಯಾದ ರೀತಿಯಲ್ಲಿ ಎಡಿಟ್ ಮಾಡಿದಾಗ ಮಾತ್ರ ಪರದೆಯ ಮೇಲೆ ದೃಶ್ಯವೈಭವ ಕಾಣಲು ಸಾಧ್ಯ. ಜಾರ್ಜ್ ಮಿಲ್ಲರ್ ಅವರಿಗೆ ಎಡಿಟಿಂಗ್ ಸೆನ್ಸ್ ಅದ್ಭುತವಾಗಿದೆ, ಅದನ್ನು ಗಮನದಲ್ಲಿಟ್ಟುಕೊಂಡು ಮೇಕಿಂಗ್ ಕಡೆ ಶ್ರದ್ಧೆ ವಹಿಸುತ್ತಾರೆ. ನಾನು ಜಾರ್ಜ್ ಮೂಲಕ ಸಾಕಷ್ಟು ಕಲಿತಿದ್ದೇನೆ. ವಿಶೇಷವಾಗಿ ಅವರ ಮ್ಯಾಥಮ್ಯಾಟಿಕಲ್ ಬ್ರಾಂಡ್ ಆಫ್ ಫಿಲಂ ಮೇಕಿಂಗ್ ಕುರಿತಾಗಿ!

ಪ್ರಶ್ನೆ: 'ಅಪೋಕ್ಯಾಲಿಪ್ಟೋ' ಬಗ್ಗೆ ಮತ್ತೆ ಕೇಳುತ್ತಿದ್ದೇನೆ... ಇತಿಹಾಸಕಾರ ವಿಲ್ ಡ್ಯೂರೆಂಟ್‌ನ ಮಾತುಗಳು ಚಿತ್ರದ ಆರಂಭದಲ್ಲಿ ಕೇಳಿಬರುತ್ತವೆ... ಸಂಸ್ಕೃತಿಗಳು ಯಾವಾಗಲೂ ತಮ್ಮನ್ನು ತಾವೇ ನಾಶ ಮಾಡಿಕೊಳ್ಳುತ್ತಲೇ ಇರುತ್ತವೆ ಎಂಬಂತಹ ಮಾತುಗಳು. ಇದು ಮಾಯಾ ಜನಾಂಗ ಮತ್ತು ಅವರ ಸಂಸ್ಕೃತಿಗೂ ಅನ್ವಯವಾಗುತ್ತೆ ಅಲ್ಲವೇ? ಹಾಗೆಯೇ ಇವತ್ತಿಗೆ ನಾವು ಯಾವುದನ್ನೂ ಸಂಸ್ಕೃತಿ ಎಂದು ನಂಬಿದ್ದೇವೋ ಅದೂ ಕೂಡ ಮುಂದೊಮ್ಮೆ ಈ ಮಾತು ಸತ್ಯವೆಂದು ಸಾಬೀತುಮಾಡಬಹುದು, ಏನಂತೀರಿ?

ಗಿಬ್ಸನ್: ನಾಗರಿಕತೆ ವಿಕಾಸವಾಗುತ್ತದೆ, ಹಾಗೆಯೇ ವಿನಾಶವನ್ನೂ ಹೊಂದುತ್ತದೆ. ಇದು ಪ್ರತಿ ಸಲ ನಡೆಯುವ ಸಹಜ ಪ್ರಕ್ರಿಯೆ. ಇಲ್ಲಿ ಯಾವುದೂ ಶಾಶ್ವತವಲ್ಲ. ನನಗನ್ನಿಸುವಂತೆ ನಾವೇನೂ ಕುಸಿಯುತ್ತಿಲ್ಲ. ಹಾಗಂತ ಇದು ನಮ್ಮ ಸ್ವಚ್ಛಂದ ಕಾಲವೆಂದು ನಾನೇನೂ ಹೇಳುತ್ತಿಲ್ಲ. ಪರಿಸರ ನಾಶ, ಮಿತಿಮೀರುತ್ತಿರುವ ಭ್ರಷ್ಟಾಚಾರ, ಭಯವನ್ನೇ ಒಂದು ಅಸ್ತ್ರವಾಗಿ ಬಳಸಿ ದಂಗೆ ಎಬ್ಬಿಸುವುದು, ಇವೆಲ್ಲ ನನ್ನನ್ನು ಇತ್ತೀಚೆಗೆ ಕಾಡುತ್ತಿವೆ. ಈ ಕೊಳೆತ ಒಳಗೇ ಶುರುವಾಗಿ ಕೊನೆಗೆ ಹೊರಗೆ ಬಂದು ಎಲ್ಲರೂ ಅದಕ್ಕೆ ಬಲಿಯಾಗುತ್ತಾರೆ. ಎಲ್ಲವೂ ಮತ್ತೆ ಪುನರ್ ಆರಂಭವಾಗುವುದುಕ್ಕೆ ಅದು ಅನಿವಾರ್ಯ ಕೂಡ ಇರಬಹುದು. ಒಬ್ಬ ಪ್ರಾಮಾಣಿಕ ವ್ಯಕ್ತಿ ಇದನ್ನು ಅರ್ಥಮಾಡಿಕೊಂಡು ತಾನು ಆರಂಭಿಸುವ ಪ್ರತಿ ದಿನವೂ ಹೊಸದೇ ಎಂದು ಅರಿತುಕೊಳ್ಳಬೇಕಾಗುತ್ತದೆ. ಯಾಕೆಂದರೆ, ಪ್ರತಿದಿನ ಪ್ರತಿಕ್ಷಣ ನಾವು ಎಷ್ಟೊಂದು ತಪ್ಪುಗಳನ್ನು ಮಾಡುತ್ತೇವೆ ಅಲ್ಲವೇ? ಬೇರೆಯವರ ಬಗ್ಗೆ ಗೊತ್ತಿಲ್ಲ, ನಾನಂತೂ ದಿನದುದ್ದಕ್ಕೂ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅನೇಕ ತಪ್ಪುಗಳನ್ನು ಮಾಡುತ್ತಲೇ ಇರುತ್ತೇನೆ. ಕಾಲವನ್ನು ಹಿಂದಕ್ಕೆ ತಿರುಗಿಸಲು ಯಾವತ್ತಿಗೂ ಸಾಧ್ಯವಿಲ್ಲ, ಆದಕಾರಣ ನಮ್ಮ ನೋಟವೇನಿದ್ದರೂ ಮುಂದಿನದರ ಬಗ್ಗೆ, ನಾಳೆಯದರ ಬಗ್ಗೆ ಮಾತ್ರ ಇರಬೇಕು.

● ಹೃದಯಶಿವ



Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 17-12-2014 RNI No. KARKAN2005/1




'ನಮೋ ಭೂತಾತ್ಮ' ಹಿಟ್

'ನಮೋ ವರ್ಸಸ್ ಮಂಡ್ಯ' ಎಂಬ ಬರಹವನ್ನು ಕಳೆದ ವಾರ ನೀವು ಇಲ್ಲೇ ಓದಿದ್ರಿ. ಈ ಎರಡು ಚಿತ್ರಗಳ ಪೈಪೋಟಿಯಲ್ಲಿ 'ಲವ್ ಇನ್ ಮಂಡ್ಯ' ಆವರೇಜ್ ಅಂತ ರಿಪೋರ್ಟ್ ಪಡೆದುಕೊಂಡರೆ 'ನಮೋ ಭೂತಾತ್ಮ' ಚೆನ್ನಾಗಿದೆ ಅಂತ ನೋಡುಗರಿಂದ ಹೇಳಿಸಿಕೊಂಡಿದೆ. ಇದಕ್ಕೆ ಸಾಕ್ಷಿ ಎಂಬಂತೆ 'ನಮೋ ಭೂತಾತ್ಮ' ಚಿತ್ರ ಮೊದಲ ವಾರವೇ ಬರೋಬ್ಬರಿ 1.75 ಕೋಟಿ ಕಲೆಕ್ಷನ್ ದಾಖಲಿಸಿದೆ. ಸಹೋದರ ಕೋಮಲ್ ಚಿತ್ರಕ್ಕೆ ಈ ಪರಿ ಓಪನಿಂಗ್ ಸಿಕ್ಕಿರುವುದು ಸ್ವತಃ ಜಗ್ಗೇಶ್‌ಗೆ ಖುಷಿಯಾಗಿದೆಯಂತೆ. ಹಾಗೆಯೇ ಈ ಬೆಳವಣಿಗೆಯಿಂದ ನಿರ್ಮಾಪಕರೂ ನೆಮ್ಮದಿಯ ನಿಟ್ಟುಸಿರುಬಿಡುವಂತಾಗಿದೆ. ಇಷ್ಟಾದರೂ ಇನ್ನೂ ಯಾವ ಚಾನೆಲ್‌ಗೂ ಈ ಚಿತ್ರದ ಸ್ಯಾಟಲೈಟ್ ಹಕ್ಕುಗಳನ್ನು ಕೊಟ್ಟಿಲ್ಲ. ಚಿತ್ರ ಚೆನ್ನಾಗಿರುವುದರಿಂದ ಬಿಡುಗಡೆಯಾದ ನಂತರ ಒಳ್ಳೆಯ ರೇಟ್ ಸಿಗುತ್ತದೆ ಅನ್ನುವ ನಂಬಿಕೆ ಇದ್ದುದರಿಂದ ಯಾವ ಚಾನೆಲ್‌ಗೂ ಸ್ಯಾಟಲೈಟ್ ರೈಟ್ಸ್ ಕೊಟ್ಟಿಲ್ಲ ಅನ್ನೋದು ಕೋಮಲ್ ಮಾತು. ಈಗ 'ನಮೋ ಭೂತಾತ್ಮ' ಚೆನ್ನಾಗಿ ಓಡುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಇನ್ನೂ ಒಳ್ಳೆಯ ರೇಟ್ ಸಿಗುವ ನಿರೀಕ್ಷೆ ಇದೆ ಅಂತಾಯಿತು. ಅಂದಹಾಗೆ ಅತ್ತ ಶರಣ್ ಹಿಟ್ ಮೇಲೆ ಹಿಟ್ ಕೊಡುತ್ತಾ ಮೇಲೆ ಮೇಲೆ ಹೋಗುತ್ತಿದ್ದರೆ ಇತ್ತ ಕೋಮಲ್ ಫ್ಲಾಪ್ ಮೇಲೆ ಫ್ಲಾಪ್ ಕೊಡುತ್ತ ಕೆಳಕೆಳಗೆ ಹೋಗುತ್ತಿದ್ದರು. 'ನಮೋ ಭೂತಾತ್ಮ'ದ ಈ ಗೆಲುವಿನಿಂದ ಸ್ವತಃ ಕೋಮಲ್‌ಗೂ ಈಗ ಒಂದು ಬ್ರೇಕ್ ಸಿಕ್ಕಂತಾಗಿದೆ. ಕೋಮಲ್ ಈ ಗೆಲುವನ್ನು ಹೀಗೆ ಉಳಿಸಿಕೊಳ್ಳುತ್ತಾರಾ ಅಂತ ಕಾದುನೋಡಬೇಕಿದೆ.

ಉಪ್ಪಿ ಒಪ್ಪಿದರೆ ಹತ್ತು ಸಿನಿಮಾ

'ಒರಟ ಐ ಲವ್ ಯೂ' ಎಂಬ ಚಿತ್ರವನ್ನು ನಿರ್ಮಿಸಿ ಗಾಂಧಿನಗರದಲ್ಲಿ ಒಂದಿಷ್ಟು ಪ್ರಸಿದ್ಧಿಗೆ ಬಂದ ಸಿ.ಆರ್.ಮನೋಹರ್ ಇನ್ನೊಂದಿಷ್ಟು ಚಿತ್ರಗಳನ್ನು ಮಾಡುವ ಮೂಲಕ ಪ್ರಮುಖ ನಿರ್ಮಾಪಕರ ಪಟ್ಟಿಗೆ ಸೇರಿಕೊಂಡರು. ಇದೀಗ 'ಶಿವಂ' ಚಿತ್ರವನ್ನು ನಿರ್ಮಿಸಿ ಅದಕ್ಕೆ ಉಪೇಂದ್ರರನ್ನು ಹೀರೋ ಆಗಿ



ಹಾಕಿಕೊಂಡಿದ್ದಾರೆ. ಉಪೇಂದ್ರ ಬಗ್ಗೆ ಅಪಾರ ಪ್ರೀತಿಗೆ ಬಿದ್ದಿರುವ ಮನೋಹರ್ ಇತ್ತೀಚೆಗಷ್ಟೇ ತಮ್ಮ 'ಶಿವಂ' ಚಿತ್ರದ ಹಾಡುಗಳ ಧ್ವನಿಸುರುಳಿ ಬಿಡುಗಡೆ ಸಂದರ್ಭದಲ್ಲಿ "ಉಪೇಂದ್ರ ತುಂಬಾ ಫ್ರೆಂಡ್ಲಿ. ಅವರ ಸಹಕಾರವಿಲ್ಲದಿದ್ದರೆ ಈ ದೊಡ್ಡ ಚಿತ್ರವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತಿರಲಿಲ್ಲ. ನಾವಿಬ್ಬರು ಅಣ್ಣತಮ್ಮ ಇದ್ದ ಹಾಗೆ. ಇನ್ನು ಮುಂದೆಯೂ ಅವರೊಂದಿಗೆ ಸಿನಿಮಾಗಳನ್ನು ಮಾಡಲು ಇಷ್ಟಪಡುತ್ತೇನೆ. ಅವರನ್ನು ಹಾಕಿಕೊಂಡು ಹತ್ತು ಸಿನಿಮ ನಿರ್ಮಾಣ ಮಾಡಲು ನಾನು ರೆಡಿ ಇದ್ದೇನೆ. ತಮ್ಮ 'ಉಪ್ಪಿ- 2' ಬಿಡುಗಡೆಯ ನಂತರ ಅವರ ಡೇಟ್ಸ್ ಸಿಕ್ಕರೆ ನನಗೆ ಅಷ್ಟೇ ಸಾಕು. ಅವರು ಡೇಟ್ಸ್ ಕೊಡುತ್ತಾರೆಂಬ ನಂಬಿಕೆ ನನಗಿದೆ" ಎಂದು ಉಪೇಂದ್ರ ಬಗ್ಗೆ ತಮಗಿರುವ ಅಭಿಮಾನವನ್ನು ಮನೋಹರ್ ಹೇಳಿಕೊಂಡಿದ್ದಾರೆ. ಇಷ್ಟಕ್ಕೂ ಯಾವ ಟೈಟಲ್ ಇಡಬೇಕು ಎಂಬ ಗೊಂದಲದಲ್ಲೇ ಇಷ್ಟು ಕಾಲ ಸುದ್ದಿಯಲ್ಲಿದ್ದ 'ಶಿವಂ' ಚಿತ್ರ ಹೇಗಿದೆ ಅನ್ನೋದು ಇನ್ನೂ ಯಾರಿಗೂ ಗೊತ್ತಿಲ್ಲ. ಹಾಗೊಂದು ವೇಳೆ 'ಶಿವಂ' ಒಂದಿಷ್ಟು ಕಾಲ ಓಡಿ ಮನೋಹರ್ ಜೇಬು ತುಂಬಿಸಿದರೆ ಅಷ್ಟೇ ಸಾಕು. ಇನ್ನು 'ರಕ್ತಕಣ್ಣೀರು' ನಂತರ ಒಂದರ ಮೇಲೆ ಒಂದು ಸೂಪರ್ ಫ್ಲಾಪ್ಸ್ ಕೊಡುತ್ತಾ ಕೇವಲ ಒಂದೇ ಒಂದು ಹಿಟ್‌ಗಾಗಿ ಹೆಣಗಾಡುತ್ತಿರುವ ಉಪೇಂದ್ರ 'ಶಿವಂ' ಮುಖೇನ ಮತ್ತೆ ಫಾರ್ಮ್ ಕಂಡುಕೊಂಡರೆ ಮನೋಹರ್‌ಗೆ ಒಳ್ಳೇದೆ ಅಲ್ವೇ?

ಕಾದಲ್ ದೇಶಂ ಟು ನನ್ ಲವ್ ಟ್ರ್ಯಾಕ್

'ಕಾದಲ್ ದೇಶಂ', 'ಕಾದಲರ್ ದಿನಂ', 'ಕಾದಲ್ ವೈರಸ್', 'ಇದಯಂ', 'ಉಳವನ್' ತರಹದ ತಮಿಳು ಚಿತ್ರಗಳನ್ನು ನಿರ್ದೇಶಿಸುವ ಮೂಲಕ ಯುವಮನಸುಗಳ ಪಾಲಿಗೆ ಫೇವರಿಟ್ ಡೈರೆಕ್ಟರ್ ಅನ್ನಿಸಿಕೊಂಡಿದ್ದ ಕದೀರ್ ಇದೀಗ ಕನ್ನಡದಲ್ಲೊಂದು ಚಿತ್ರವನ್ನು ನಿರ್ದೇಶಿಸಿದ್ದಾರೆ. ಆ ಚಿತ್ರ ಹೆಸರು 'ನನ್ ಲವ್ ಟ್ರ್ಯಾಕ್'. ಈ ಚಿತ್ರ ಇತ್ತೀಚೆಗಷ್ಟೇ ಹಾಡುಗಳ ಧ್ವನಿಸುರುಳಿ ಬಿಡುಗಡೆ ಮಾಡಿಕೊಂಡಿದೆ. ಅಂದಹಾಗೆ ಈ ಚಿತ್ರದಲ್ಲಿ 'ಅಮೃತವರ್ಷಿಣಿ' ಧಾರಾವಾಹಿ ಮೂಲಕ ಒಂದಿಷ್ಟು ಕೀರ್ತಿ ಪಡೆದ ರಕ್ಷಿತ್ ಹೀರೋ ಆಗಿ ಭಡ್ತಿ ಪಡೆದಿದ್ದಾರೆ. ಕದೀರ್ ತರಹದ ಅನುಭವಿ ನಿರ್ದೇಶಕರ ಅಡಿಯಲ್ಲಿ



ಕೆಲಸ ಮಾಡಲು ರಕ್ಷಿತ್‌ಗೆ ಖುಷಿ ಕೊಟ್ಟಿದೆಯಂತೆ. ಹಾಗೆಯೇ ರವಿ ಗರಣಿ ತಮ್ಮ ಗಾಡ್‌ಫಾದರ್ ಎಂದೂ ರಕ್ಷಿತ್ ಹೇಳಿಕೊಂಡಿದ್ದಾರೆ. ಇಷ್ಟಕ್ಕೂ ಕನ್ನಡ ಚಿತ್ರರಂಗ ತಮಗೆ ಹೊಸದೇನೂ ಅಲ್ಲ ಅಂತ ಹೇಳಿಕೊಳ್ಳುವ ಕದೀರ್ ತಾವು ನಿರ್ದೇಶಿಸಿದ ಒಂದಿಷ್ಟು ತಮಿಳು ಚಿತ್ರಗಳನ್ನು ಬೆಂಗಳೂರಿನಲ್ಲಿ ಶೂಟ್ ಮಾಡಿದ್ದಾಗಿ ನೆನಪಿಸಿಕೊಳ್ಳುತ್ತಾರೆ. ಹಾಗೆಯೇ ಪ್ರಭುದೇವ, ಅಬ್ಬಾಸ್ ತರಹದವರನ್ನು ತಮಿಳು ಚಿತ್ರರಂಗಕ್ಕೆ ಪರಿಚಯಿಸಿದ ಇವರು ಹೊಸಬರನ್ನು ಹಾಕಿಕೊಂಡು ಸಿನಿಮಾ ಮಾಡಲು ಹಿಂಜರಿಯದಿರುವುದಾಗಿ ಹೇಳಿಕೊಂಡಿರುತ್ತಾರೆ. ಕದೀರ್ ಕನ್ನಡದಲ್ಲೂ ಹೆಸರು ಮಾಡುತ್ತಾರಾ ನೋಡಬೇಕು.





'ಸಾಫ್ಟ್‌ವೇರ್ ಗಂಡ' ತೆರ

ಜಗ್ಗೇಶ್-ನಿಖಿತಾ ಜೋಡಿ ನಟಿಸಿರುವ 'ಸಾಫ್ಟ್ ವೇರ್ ಗಂ ಎಲ್ಲೆಡೆಯೂ ಪಬ್ಲಿಸಿಟಿ ಚೆನ್ನಾಗೇ ಸಾಗುತ್ತಿದೆ. ಆದರೆ ಜಗ್ಗೇಶ್ ಪ್ರಚಾರದಲ್ಲಿ ಪಾಲ್ಗೊಳ್ಳುತ್ತಿಲ್ಲ. ಈ ವಾರ ಚಿತ್ರ ಬಿಡುಗಡೆಯ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಗೈರುಹಾಜರಿ ಎದ್ದು ಕಾಣುತ್ತಿತ್ತು. ಚಿತ್ರಕ್ಕೆ ಖುದ್ದು ಹೀರೋ ಆಗಿ ಬಿಡುಗಡೆಪೂರ್ವ ಪ್ರಚಾರದಲ್ಲಿ ಭಾಗಿಯಾಗದಿದ್ದರೆ ಹೇಗೆ? ಎಂಬ ಹಲವು ಊಹಾಪೋಹಗಳಿಗೆ ಎಡೆಮಾಡಿಕೊಡುವುದು ಸಹಜ. ಜಗ್ಗೇಶ್ ಚಿತ್ರದ ಪಬ್ಲಿಸಿಟಿ ವಿಷಯದಲ್ಲಿ ಕೈಜೋಡಿಸದೇ ಇರಲ ಅವರು ಅನುಭವಿಸುತ್ತಿರುವ ಬೆನ್ನುನೋವು ಅನ್ನೋದು ನಿಖಿತಾ ಕಾರಣವಾದರೂ ಈ ಬೆಳವಣಿಗೆಯ ಹಿಂದೆ ಬೇರೆಬೇರೆ ಕಾರಣಗ ಸುಳ್ಳಲ್ಲ. ಅಂದಹಾಗೆ 'ಸಾಫ್ಟ್ ವೇರ್ ಗಂಡ' ಈ ಬಿಡುಗಡೆಯಾಗಬೇಕಿತ್ತು. ಕಾರಣಾಂತರಗಳಿಂದ ಈ ಸಿನಿಮಾ ಬಿಡ ಮುಂದಕ್ಕೆ ಬಂದಿದೆ. ಈ ಚಿತ್ರ ಈಗ ಬಿಡುಗಡೆ ಆಗುತ್ತಿರುವುದು ಇಷ್ಟವಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಇದಕ್ಕೆ ಕಾರಣ ರ ಅಭಿನಯದ 'ಲಿಂಗ'. ಎಲ್ಲಿ ಪ್ರೇಕ್ಷಕರೆಲ್ಲ ತಮ್ಮ ಚಿತ್ರವನ್ನು ನೋಡ ನೋಡಲು ಹೋಗಿಬಿಡುತ್ತಾರೋ ಎಂಬ ಆತಂಕ ಜಗ್ಗೇಶ್‌ಗಿದೆ. 'ಲಿಂಗ'ದ ಜೊತೆಗೆ ಇನ್ನೂ ಮೂರ್ನಾಲ್ಕು ಪ್ರಮುಖ ಕನ್ನಡ ಸಿ ತೆರೆಗೆ ಬರುತ್ತಿವೆ. ಇದೂ ಕೂಡ ಜಗ್ಗೇಶ್‌ರನ್ನು ಕಾಡುತ್ತಿರುವ ತ ಈ ಎಲ್ಲಾ ಕಾರಣಗಳಿಂದ 'ಸಾಫ್ಟ್ ವೇರ್ ಗಂಡ' ತೆರೆಗೆ ಬರ ರೈಟ್ ಟೈಮ್ ಅಲ್ಲ ಅನ್ನೋದು ಜಗ್ಗೇಶ್ ಅನಿಸಿಕೆ ಅಂತ ಕ ಅನ್ನಿಸಿಕೆ ವಾಸ್ತವಕ್ಕೆ ಹತ್ತಿರವೂ ಹೌದು. ವಿಷಯ ನಿರ್ಮಾಪಕರು 'ಸಾಫ್ಟ್ ವೇರ್ ಗಂಡ' ಚಿತ್ರವನ್ನು ಬಿಡುಗಡೆ ಮಾಡಲು ಮುಂದಾಗಿರುವುದರಿಂದ ಮಾಡಿಕೊಂಡಿರುವ ಜಗ್ಗೇಶ್ ಚಿತ್ರದ ಪ್ರಚಾರದಲ್ಲಿ ಭಾಗ ಅನ್ನುವ ಮಾತುಗಳು ಕೇಳಿಬರುತ್ತಿವೆ. ಹಾಗಾದರೆ ಬೆನ್ನು ನೋವು' ಅಂತ ನಿಖಿತಾ ಸುಳ್ಳು ಹೇಳ್ತಿದಾರಾ

'ಮೃಗಶಿರ' ಆಡಿಯೋ

'ಮೃಗಶಿರ' ಎಂಬ ಹೆಸರಿನ ಸಿನಿಮಾ ವೊಂದ ಬರುತ್ತಿದೆ. ಅದರಲ್ಲಿ ಹೀರೋ ಪ್ರಜ್ವಲ್ ದೇವ ರ ಹೀರೋ ಯಿನ್ ಮಾನಸ. ಮೊನ್ನೆಮೊನ್ನೆಯಷ್ಟೇ ಹಾಡುಗಳ ಸಿಡಿ ಲೋಕಾರ್ಪಣೆ ಆಗಿದೆ. ಈ ದೇವರಾಜ್ ಪ್ರಮುಖ ವ್ಯಕ್ತಿಯಾಗಿ ಪಾಲ್ಗೊಂಡು ಬಿಡುಗಡೆ ಮಾಡಿದ್ದಾರೆ. ಇಷ್ಟಕ್ಕೂ ಇಂಥದೊಂದ ತಾನು ಇಲ್ಲಿಯವರೆಗೆ ನಟಿಸಲೇ ಇಲ್ಲ ಅನ್ನೋ ಮಾತು. ಅವರು ಈ ಚಿತ್ರದಲ್ಲಿ ನಿಭಾಯಿಸಿ ಅದ್ಭುತವಾಗಿದೆಯಂತೆ. ಚಿತ್ರದ ಬಹುಪಾಲನ್ನು ಶೂಟಿಂಗ್ ಮಾಡಲಾಗಿದೆಯಂತೆ. ಆ ಪಾತ್ರ ಇವತ್ತಿನ ಯುವಜನಾಂಗಕ್ಕೆ ತುಂಬಾ ಇಷ್ಟ ಆಗುತ್ತದಂತೆ... ಹೀಗೆಲ್ಲಾ ಪ್ರಜ್ವಲ್ ಹೇಳಿದ್ದಾರೆ. 'ಸಿಕ್ಸರ್' ಚಿತ್ರದಲ್ಲಿ ಚೂರು ಭರವಸೆ ಮೂಡಿಸಿದ್ದ ಪ್ರಜ್ವಲ್ ಆವೇಲೆ ಅದ್ಯಾಕೋ ಮುಖ್ಯವಾಹಿನಿಯ ಹೀರೋಗಳ ಲಿಸ್ಟಿಗೆ ಸೇರಿಕೊಳ್ಳಲು ಆಗಲೇ ಇಲ್ಲ. 'ಮೃಗಶಿರ'ದ ಪಾತ್ರ ಅದ್ಭುತವಾಗಿದೆ ಅಂತಿದಾರೆ, ನೋಡೋಣ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com